ಕುಂ. ವೀರಭದ್ರಪ್ಪನ ಆಯ್ದ ಕತೆಗಳಲ್ಲಿನ
ಬಂಡಾಯದ ಸ್ವರೂಪ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

ಕುಂ.ವೀರಭದ್ರಪ್ಪನ ಆಯ್ದ ಕತೆಗಳಲ್ಲಿನ ಬಂಡಾಯದ ಸ್ವರೂಪ

ಎಸ್.ರೂಪ

ಸಂಶೋಧನಾ ವಿದ್ಯಾರ್ಥಿ

ನೋಂದಣಿ ಸಂಖ್ಯೆ: **KVMBKS-00683**

ಮಾರ್ಗದರ್ಶಕರು

ಡಾ. ಸಿ.ಬಿ. ಅನ್ನಪೂರ್ಣಮ್ಮ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ನ್ಯಾಷನಲ್ ಪದವಿ ಕಾಲೇಜು (ಸ್ವಾಯತ್ತ)

ಬಸವನಗುಡಿ ಬೆಂಗಳೂರು-04

ಕಾವ್ಯಮಂಡಲ

ಬೆಂಗಳೂರು

2013-2014

1140

ದೃಢೀಕರಣ ಪತ್ರ

ಎಸ್. ರೂಪ ಇವರು **"ಕುಂ.ವೀರಭದ್ರಪ್ಪನ ಆಯ್ದ ಕತೆಗಳಲ್ಲಿನ ಬಂಡಾಯದ ಸ್ವರೂಪ"** ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಈ ನಿಬಂಧವನ್ನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಸಿ.ಬಿ. ಅನ್ನಪೂರ್ಣಮ್ಮ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ನ್ಯಾಷನಲ್ ಪದವಿ ಕಾಲೇಜು (ಸ್ವಾಯತ್ತ)
ಬಸವನಗುಡಿ ಬೆಂಗಳೂರು–04

ದಿನಾಂಕ: 30-7-2014
ಸ್ಥಳ: ಬೆಂಗಳೂರು

1140

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ **"ಕುಂ.ವೀರಭದ್ರಪ್ಪನ ಆಯ್ದ ಕತೆಗಳಲ್ಲಿನ ಬಂಡಾಯದ ಸ್ವರೂಪ"** ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು ಡಾ. ಸಿ.ಬಿ ಅನ್ನಪೂರ್ಣಮ್ಮ ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ ನ್ಯಾಷನಲ್ ಕಾಲೇಜ್ ಬಸವನಗುಡಿ, ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಇತರೆ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

S. Rupa

ಎಸ್. ರೂಪ
ಸಂಶೋಧನಾ ವಿದ್ಯಾರ್ಥಿ

ದಿನಾಂಕ: 28/7/14
ಸ್ಥಳ: ಬೆಂಗಳೂರು

ಪರಿವಿಡಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ,ಫಿಲ್ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

ಕುಂ.ವೀರಭದ್ರಪ್ಪನ ಆಯ್ದ ಕತೆಗಳಲ್ಲಿನ ಬಂಡಾಯದ ಸ್ವರೂಪ

ನೋಂದಣಿ ಸಂಖ್ಯೆ: KVMBKS-00683

2013–2014

ಅಧ್ಯಾಯ-1

ಅಧ್ಯಯನದ ವಿಷಯ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ.

ಪೀಠಿಕೆ

ಕಥೆ ಎನ್ನುವುದು 'ಕಥ'ನ ಸಾಹಿತ್ಯದ ಒಂದು ಪ್ರಮುಖ ಪ್ರಕಾರಗಳಲ್ಲಿ ಒಂದು. ಕಥೆಗಳು ಎಂದಾಕ್ಷಣ ಓದಿಕೊಂಡು ಸ್ವಲ್ಪಹೊತ್ತು ಆ ಕಥೆಯ ಅಂತರಾಳಕ್ಕೆ ಹೊಕ್ಕು ಆನಂದಿಸಿ ಮತ್ತೆ ಮರೆಯುವಂತದ್ದಲ್ಲ. ಇವುಗಳಲ್ಲಿ ವಾಸ್ತವದ ಚಿತ್ರಣವು ಇರುತ್ತದೆ. ಆದ್ದರಿಂದ ಕಥನದ ವ್ಯಾಖ್ಯೆಯೂ ನಮಗೆ ಅಗತ್ಯವಾಗಿರುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಥಾ ಸಾಹಿತ್ಯ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಎಡ್ಗರ್ ಅಲನ್ ಪೋ, "ಕಥೆ ಎಂದರೆ ಓದಿ ಮುಗಿಸಲು ಅರ್ಧಗಂಟೆಯಿಂದ ಹಿಡಿದು ಒಂದು ಗಂಟೆ ಬೇಕಾಗುವ ಗದ್ಯ ಕಥನ" ಎನ್ನುತ್ತಾರೆ. ಇನ್ನೊಂದು ಹೇಳಿಕೆಯಂತೆ "ಒಂದೇ ಸಲಕ್ಕೆ ಓದಿ ಮುಗಿಸಬಹುದುದಾದ ಸಣ್ಣ ಕಥೆ" ಇದು ಕಾದಂಬರಿಯಿಂದ ಬೇರ್ಪಟ್ಟ ಸಾಹಿತ್ಯ ಪ್ರಕಾರವಾಗಿದೆ.

ಒಂದು ಭಾಷೆಯಲ್ಲಿನ ಗ್ರಂಥರಾಶಿಯನ್ನು ಸಾಹಿತ್ಯ ಎನ್ನುತ್ತೇವೆ. ನಾದದ ನವೀನ್ಯತೆಯೇ ಸಾಹಿತ್ಯ. ಇಂಗ್ಲೀಷ್‌ನ Literature ಎಂಬ ಶಬ್ದದ ಸಂವಾದಿ ಶಬ್ದ ಸಾಹಿತ್ಯ ಎಂದರೆ ಬಾಳಿನ ನೈಜ ಚಿತ್ರಣ. ಬಾಳಿಗೆ ಬೇಕಾದ ಮಾರ್ಗದರ್ಶನ ನೀಡಿ, ಜೀವನದ ನಮ್ಮ ಅರಿವನ್ನು ಹೆಚ್ಚಿಸುವ ರಮಣೀಯ ಸಾಧನೆ ಎಂದು ಸಾ.ಸಾ ಮಾಳವಾಡರವರು ತಮ್ಮದೇ ಆದ ಸಾಹಿತ್ಯ ಮತ್ತು ಜೀವನ ಚಿತ್ರಣ" ಎಂಬ ಮಾಲಿಕೆಯಲ್ಲಿ ಹೇಳಿದ್ದಾರೆ.

ಸಮಾಜ ಎಂದರೆ ಮನುಷ್ಯರ ಸಂಘಟಿತ ಜೀವನ ಪ್ರತಿಯೊಂದು ಸಮಾಜವು ತನ್ನ ಬೆಳವಣಿಗೆಯ ಹಂತದಿಂದಲೇ ಹಲವಾರು ಪದ್ಧತಿ ಸಂಪ್ರದಾಯಗಳು ರೀತಿ-ರಿವಾಜುಗಳನ್ನು ಹೊಂದಿರುತ್ತವೆ. ಅಲ್ಲದೆ ತನ್ನದೆ ಆದ ಮೌಲ್ಯ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ಸಮಾಜ ವ್ಯವಸ್ಥೆಯು ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗುತ್ತ ಹೋಗುತ್ತದೆ. ಆದರೆ ಇದು ಸ್ಥಿರವಾಗಿರುತ್ತದೆ ಎಂದು ಹೇಳಲು ಸಾದ್ಯವಿಲ್ಲ ಅದು ಬದಲಾವಣೆಗೆ ಒಳಗಾಗುತ್ತಲೆ ಇರುತ್ತದೆ.

ಸಂಸ್ಕೃತಿ ಎಂದರೆ ಒಂದು ಸಮುದಾಯದ ಸಮಗ್ರ ಜೀವನ ವಿಧಾನಗಳ ಮೊತ್ತ. ಸಮುದಾಯ ಒಂದರ ಜೀವನ ವಿಧಾನ ಎಂದರೆ ಉಡುವ ಬಟ್ಟೆ, ಉಣ್ಣುವ ಊಟ, ಆಡುವ ಮಾತು, ಮಾಡುವ ಆಚರಣೆ, ನಂಬಿಕೆ ಮುಂತಾಗಿ ಇಡೀ ಬದುಕಿನ ವಿವರಗಳನ್ನು ಒಳಗೊಳ್ಳುತ್ತವೆ. ಸಾಮಾನ್ಯವಾಗಿ ಸಂಸ್ಕೃತಿಯನ್ನು ಆಡುವ ಭಾಷೆ, ಹುಟ್ಟಿದ ಜಾತಿ, ಅನುಸರಿಸುವ ಧರ್ಮ, ವಾಸಿಸುವ ಪ್ರದೇಶ ಈ

ಆಧಾರಗಳಲ್ಲಿ ನೋಡಲಾಗುತ್ತದೆ. ಆದ್ದರಿಂದ ಸಂಸ್ಕೃತಿಯು ಸಮಾಜದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಭಾಷೆ ಭಾಷೆಯಿಂದಲೇ ಸೃಜನಗೊಳ್ಳುವ ಸಾಹಿತ್ಯ ಇವುಗಳು ಸಾಮಾಜಿಕವಾದವುಗಳು. ಒಟ್ಟು ಸಂಸ್ಕೃತಿಯ ಅವಿಭಾಜ್ಯ ಅಂಗಗಳು ಆದ್ದರಿಂದ ಸಾಹಿತ್ಯಕ್ಕೂ, ಸಂಸ್ಕೃತಿಗೂ ಗಾಢವಾದ ನಂಟು ಇದ್ದೆ ಇದೆ ಎಂಬುದು ಈ ವಿಚಾರದ ಮುಖ್ಯ ಸಂಗತಿ. ಇದೆಲ್ಲವೂ ಸಾಹಿತ್ಯದ ಭಾಗವಾಗಿರುವುದರಿಂದ ಜಾತಿ, ಪದ್ಧತಿ, ಕಲಹಗಳು, ಜೀವನ ನಿರ್ವಹಣೆ ಎಲ್ಲವನ್ನು ಇಲ್ಲಿ ಗುರುತಿಸ ಬಹುದಾಗಿದೆ. ಹಾಗೆಯೇ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲವೂ ಸುಗಮವಾಗಿರುವುದಿಲ್ಲ. ಅನೇಕ ವೈರುಧ್ಯಗಳೂ ಇರುತ್ತವೆ, ಮನುಷ್ಯರ ದುರಾಸೆ, ಸ್ವಾರ್ಥ, ಅಧಿಕಾರ, ಲಾಲಸೆಗಳು ಕಾರಣವಾಗಿ ಹಲವು ವಿಧದಲ್ಲಿ ಜನರನ್ನು ಶೋಷಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವುದು ಉಂಟು. ಇಂತಹ ಸಂದರ್ಭಗಳೇ ಕಾರಣವಾಗಿ ಅನೇಕ ವೈರುಧ್ಯಗಳೂ ಇಲ್ಲಿ ಕಾಣಿಸಿಕೊಳ್ಳುತ್ತವೆ. ಸಾಮಾಜಿಕ ಕಳಕಳಿಯುಳ್ಳ ಬರಹಗಾರನ ಸಾಹಿತ್ಯದಲ್ಲಿ ಇವುಗಳ ಚಿತ್ರಣವೂ ದಾಖಲಾಗುತ್ತದೆ. ಹೀಗೆ ಸಾಹಿತ್ಯ ನೆಮ್ಮದಿಯ ಕುಟುಂಬಗಳ ಸಮಾಜದ ಚಿತ್ರಣವನ್ನು ಕಟ್ಟಿಕೊಳ್ಳುವುದಷ್ಟೇ ಅಲ್ಲದೆ ವೈರುದ್ಯಗಳ ಚಿತ್ರಣವನ್ನು ಕಟ್ಟಿಕೊಡುತ್ತದೆ. ಕನ್ನಡ ಸಾಹಿತ್ಯವೂ ಇದರಿಂದ ಹೊರತಾಗಿಲ್ಲ.

ಕನ್ನಡ ಸಾಹಿತ್ಯವನ್ನು ಧೋರಣೆಯ ದೃಷ್ಠಿಯಿಂದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಂದು ವಿಭಾಗಿಸಿ ನೋಡುವ ಕ್ರಮವಿದೆ. ಈ ನಾಲ್ಕು ಕಾಲ ಘಟ್ಟಗಳಲ್ಲಿ ಲೇಖಕರ ವಿವಿಧ ಧೋರಣೆಗಳನ್ನು ಅಂತರವನ್ನು ಗುರುತಿಸಬಹುದು. ಅದರಲ್ಲಿ ತಮಗೆ ಬಳುವಳಿಯಾಗಿ ಬಂದ ಭಾರತೀಯ ಪರಂಪರೆಯ ಅರಿವು ಜಾಗೃತವಾಯಿತು. ಪುರಾಣ ಕತೆ, ರಮ್ಯಕತೆ, ನೀತಿಕತೆ ಇಂಥ ಹಳೆಯ ಕಥನ ಪ್ರಕಾರಗಳನ್ನು ಅವರು ಪರಿಷ್ಕರಿಸಿಕೊಂಡರು. ಈ ನಾಲ್ಕು ಕಾಲಘಟ್ಟಗಳಲ್ಲಿ ಮೊದಲನೆಯದಾಗಿ ನವೋದಯ ಕತೆಗಾರರಲ್ಲಿ ಶ್ರೀನಿವಾಸರೂ, ಪಂಜೆಮಂಗೇಶರಾಯರು, ಕೆರೂರು ವಾಸುದೇವಚಾರ್ಯರು ಹಾಗೂ ಎಂ.ಎಂ ಕಾಮತ್‌ರನ್ನು ಪ್ರಮುಖವಾಗಿ ಗುರುತಿಸುತ್ತಾರೆ. ಇತರೆ ಕಥೆಗರರಲ್ಲಿ ಆನಂದ, ಆನಂದಕಂದ, ಕೆ.ಗೋಪಾಲಕೃಷ್ಣರಾವ, ದ.ರಾ. ಬೇಂದ್ರೆ ಮುಂತಾದವರು ನವೋದಯ ಕಾಲಘಟ್ಟದ ಪ್ರಮುಖ ಕತೆಗಾರರು.

ಎರಡನೆ ಕಾಲ ಘಟ್ಟದಲ್ಲಿ ಪ್ರಗತಿ ಶೀಲ ಸಾಹಿತ್ಯದ್ದು. ಈ ಕತೆಗಳ ಲಕ್ಷಣ ಮಾರ್ಕ್ಸ್ ಸಿದ್ಧಾಂತವನ್ನು ಆಧರಿಸಿದ್ದು. ಅ.ನ. ಕೃಷ್ಣರಾಯ, ನಿರಂಜನ,, ಬಸವರಾಜ ಕಟ್ಟೀಮನಿ, ಚದುರಂಗ, ಪಾಟೀಲ ಪುಟ್ಟಪ್ಪ ಮತ್ತು ಇತರ ಕತೆಗಾರರನ್ನು ಕಾಣಬಹುದಾಗಿದೆ.

ಮೂರನೆ ಕಾಲ ಘಟ್ಟದಲ್ಲಿ ದಲಿತ ಬಂಡಾಯದ ಕತೆಗಾರರಾದ ದೇವನೂರ ಮಹಾದೇವ, ಮೊಗಳ್ಳಿ ಗಣೇಶ, ಬೆಸಗರ ಹಳ್ಳಿ ರಾಮಣ್ಣ, ಕುಂ. ವೀರಭದ್ರಪ್ಪ, ಫಕೀರ ಮಹಮದ್ ಕಟ್ಪಾಡಿ ಇತ್ಯಾದಿ. ಇವರೆಲ್ಲ ದಲಿತ ಬಂಡಾಯದ ಕಾಲಘಟ್ಟಕ್ಕೆ ಸೇರಿದ ಕತೆಗಾರರಾಗಿದ್ದಾರೆ. ಮೇಲೆ ತಿಳಿಸಿದ ಕಾಲಘಟ್ಟಗಳಲ್ಲಿ ಒಂದೊಂದು ತಲೆಮಾರಿನಲ್ಲಿ ಕತೆಗಳನ್ನು ಬರೆದ ಕತೆಗಾರರು ಎರಡನೆ ತಲೆಮಾರಿನಲ್ಲಿ ಅಂದರೆ ಸ್ವಾತಂತ್ರ್ಯೋತ್ತರದ ತಲೆಮಾರಿನ ಲೇಖಕರು ಕಥನಾ ಸಾಹಿತ್ಯದ ಮೌಖಿಕ ಪರಂಪರೆಯನ್ನು

ಬಿಟ್ಟುಕೊಟ್ಟರೂ ರಚನೆಯ ದೃಷ್ಟಿಯಿಂದ ಈ ಲೇಖಕರು ಕಥೆ ಮತ್ತು ಕವಿತೆಗಳ ನಡುವೆ ಯಾವ ಅಂತರವನ್ನು ಕಾಣಲಿಲ್ಲ. ಪ್ರತಿಮೆ ಸಂಕೇತಗಳಂಥ ಕಾವ್ಯ ವಿಧಾನಗಳನ್ನು ಬಳಸಿಕೊಳ್ಳುವುದರ ಮೂಲಕ ಮನುಷ್ಯರ ಒಳ ಮತ್ತು ಹೊರ ಜೀವನಗಳ ನಡುವಿನ ಸಮ ವಿಷಮ ಸಂಬಂಧಗಳನ್ನು ಶೋಧಿಸುವಲ್ಲಿ ಶಕ್ತರಾದರು.

ಈ ನಾಲ್ಕು ಘಟ್ಟಗಳಲ್ಲಿ ಕುಂ. ವೀ ಅವರನ್ನು ಬಂಡಾಯದ ಕವಿಗಳ ಸಾಲಿಗೆ ಸೇರಿಸಲಾಗುತ್ತದೆ. ಅವರ ಕಥಾ ವಸ್ತುವನ್ನು ಕುರಿತು ಹೇಳುವಾಗ ದಲಿತ ಬಂಡಾಯದ ಸಮಗ್ರ ಪರಿಕಲ್ಪನೆಯ ಕಡೆಗೆ ನೋಡುವುದು ಅನಿವಾರ್ಯವಾಗುತ್ತದೆ. ಹೀಗಾಗಿ ಕುಂ.ವೀ ಅವರ ಕಥಾ ವಸ್ತುವಿನ ಆಯ್ಕೆ ಎಂದರೆ ಕಲೆಗಿಂತ ವಿಷಯವೆ ಮುಖ್ಯವೆಂದು ಭಾವಿಸಿಕೊಂಡವರಿವರು. ಸಾಹಿತ್ಯದಲ್ಲಿ ತಮ್ಮ ಆದ್ಯತೆಗಳನ್ನು ಮರು ಗುರುತಿಸಿಕೊಂಡರು ಡಾ॥ ಗಿರಡ್ಡಿ ಗೋವಿಂದರಾಜು ಅವರ ಮಾತುಗಳಲ್ಲಿ [ಭಾರತೀಯ ಸಾಹಿತ್ಯ ಸಮೀಕ್ಷೆ ಸಂಪುಟ 2 ಪುಟ 778] ಕಲೆಗಿಂತ ವಿಷಯವೆ ಮುಖ್ಯವೆಂಬುದು ಲಕ್ಷಿಸ ಬೇಕಾಗುತ್ತದೆ. ಇದು ದಲಿತ ಬಂಡಾಯ ಚಳುವಳಿಗಾರರ ಕಥಾವಸ್ತುವಿನಲ್ಲಿರುವ ಬಲವನ್ನು ಕುರಿತು ಹೇಳಿದ ಮಾತಾಗಿದೆ.

ಅಧ್ಯಯನದ ಉದ್ದೇಶ:

ಬಂಡಾಯ ಲೇಖಕರಲ್ಲಿ ಕುಂ.ವಿ ಅವರು ಒಬ್ಬರು. ಕುಂ.ವಿ ಬಹುಪಾಲು ಕಥೆಗಳಲ್ಲಿನ ಸಾ,ಆನ್ಯತೆಯೆಂದರೆ ಅಪಮಾನವನ್ನು ಅನುಭವಿಸುತ್ತದೆ. ಈ ಕುರಿತ ಜಾತಿಯ ಕಾರಣದಿಂದ ಶೋಷಣೆಗೆ ಒಳಗಾಗಿ ಆರ್ಥಿಕವಾಗಿಯೂ ದುರ್ಬಲವಾಗಿರುವುದು, ಅಸ್ಪೃಶ್ಯತೆ ಮತ್ತು ಜಾತಿವ್ಯವಸ್ಥೆ ಬಹುದೊಡ್ಡ ಸಮಸ್ಯೆ. ಅದರೆ ಇಲ್ಲಿ ಬಹಳ ಮುಖ್ಯವಾಗುವುದು ಅನ್ನದ ಸಮಸ್ಯೆಗಳು. ಅಂದರೆ "ದೇವರ ಹೆಣ" "ಕತ್ತಲನು ತ್ರಿಶೂಲ ಹಿಡಿದ ಕತೆ" ಇಲ್ಲಿ ಮುಖ್ಯವಾಗಿ ಕಾಣಬಹುದು. ಹುಗ್ಗಿ ಕಿವುಡ ನಾಯಿಯಾದ ಪ್ರಸಂಗ ಇತ್ಯಾದಿ.

ಒಂದು ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಭಿನ್ನ ಸಮುದಾಯಗಳ ನಡುವೆ ಹೇಗೆ ಸಂಘರ್ಷಗಳು ಏರ್ಪಡುತ್ತವೆ ಎಂಬುದನ್ನು ಕಥೆಯಲ್ಲಿನ ಸನ್ನಿವೇಶ ಮತ್ತು ಘಟನೆಗಳ ಮೂಲಕ ವಿವರಿಸಲಾಗಿದೆ. ಮೇಲ್ಜಾತಿಯ ದಬ್ಬಾಳಿಕೆಯನ್ನು ಕೆಳಜಾತಿಯವರು, ಶ್ರೀಮಂತರ ದಬ್ಬಾಲಿಕೆಯನ್ನು ಬಡವರು ಸಹಿಸುವವರೆಗೂ ಸಹಿಸಿ ಅನಂತರ ಅವರ ವಿರುದ್ಧ ಹೇಗೆ ಪ್ರತಿಭಟಿಸುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ. ಹಿಂದುಳಿದ ಜನಾಂಗದವರ ಪರಿಸ್ಥಿತಿಯನ್ನು ನೋಡುವುದಾದರೆ ಎಪ್ಪತ್ತರ ದಶಕದೀಚೆಗೆ ಅವರ ವೇಷಭೂಷಣ ಜೀವನ ಶೈಲಿಯಲ್ಲೂ ಬದಲಾವಣೆಯಾಗಿದೆ. ಏಕೆಂದರೆ ಸರ್ಕಾರದಿಂದ ಶಿಕ್ಷಣ ಸೌಲಭ್ಯಗಳು ಲಭ್ಯವಾಗುತ್ತಿದೆ. ಆದರೂ ಕೂಡ ಅವರನ್ನು ಶೋಷಣೆಗೆ ಒಳಪಡಿಸುತ್ತಿರುವುವುದನ್ನು ನಾವು ಇಂದಿಗೂ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ನಾನು ಇವರ

ಕಥೆಗಳಲ್ಲಿ ಮೇಲ್‌ವರ್ಗದವರ ನಡುವಿನ ಕೆಳವರ್ಗದವರ ಮುಖಾಮುಖಿಯನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಈ ಅಧ್ಯಯನವು ಕುಂ.ವೀ ರವರ 'ಡೋಮ ಮತ್ತು ಇತರ ಕಥೆಗಳು' ಸಂಕಲನದಲಿ ಇರುವ [1983] ಕಿವುಡ ನಾಯಿಯಾದ ಪ್ರಸಂಗ, ದೇವರ ಹೆಣ, ಕತ್ತಲನ್ನು ತ್ರಿಶೂಲ ಹಿಡಿದ ಕಥೆ, ಹುಗ್ಗಿ ಇತ್ಯಾದಿ ಕತೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೂ ಇಲ್ಲಿ ಕಂಡು ಬರುವ ದಲಿತರು ಶೋಷಣೆಗೆ ಒಳಗಾಗಿರುವ ವಿಧಾನ ಮತ್ತು ಇವರಲ್ಲಿ ಸ್ಫೋಟಗೊಳ್ಳುವ ಬಂಡಾಯವನ್ನು ಮುಖ್ಯವಾಗಿ ಗಮನಿಸಲಾಗುತ್ತದೆ.

ಈ ಕತೆಗಳು ವೈವಿಧ್ಯಮಯ ವಸ್ತುವನ್ನು ಹೊಂದಿದ್ದು ಅದರಲ್ಲಿ ಬರುವ ಜಾತಿಪದ್ದತಿ, ವರ್ಗಸಂಘರ್ಷ, ಅನುಸಂದಾನಗಳು, ಕೆಳವರ್ಗದ ಮೇಲಿನ ಮೇಲ್‌ವರ್ಗದ ದಬ್ಬಾಳಿಕೆ, ಭಾಷೆಯ ವೈಶಿಷ್ಟತೆ ಹಾಗೂ ದಲಿತರಿಗೆ ಆಗುತ್ತಿರುವ ಶೋಷಣೆಯನ್ನು ಇಲ್ಲಿ ಕಾಣುತ್ತೇವೆ. ಸಮಾಜದಲ್ಲಿ ಇರುವ ದಲಿತರ ನೋವುಗಳನ್ನು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ. ಹಾಗೆಯೇ ಜಾತಿ ಪದ್ದತಿಯನ್ನು ವಿಶ್ಲೇಷಿಸುವಾಗ ಸಮಾಜದಲ್ಲಿ ಅದರಿಂದ ಉಂಟಾಗುತ್ತಿರುವ ಶೋಷಣೆ ಹಾಗೂ ಅವರ ವಿರುದ್ಧ ವ್ಯಕ್ತವಾಗುತ್ತಿರುವ ಪ್ರತಿಭಟನೆಯನ್ನು ಕಾಣಬಹುದು ವರ್ಗ ಸಂಘರ್ಷಣೆಯಲ್ಲಿ ಶ್ರೀಮಂತರು ಬಡವರನ್ನು ಶೋಷಿಸುತ್ತಿರುವುದನ್ನು ನೋಡಬಹುದಾಗಿದೆ. ಗಂಡು ಹೆಣ್ಣಿನ ಸಂಬಂಧಗಳು ಸಮಾಜದಲ್ಲಿ ಹೆಗೆ ಭಿನ್ನ ನೆಲೆಯಲ್ಲಿ ವ್ಯಕ್ತವಾಗಿವೆ ಎಂಬುದನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಅದರಲ್ಲಿಯೂ ಕೊಟ್ಟೂರು ಸೀಮೆಯ ಕಸವನ್ನುಳ್ಳ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಸಂದರ್ಭಿಕವಾಗಿ ಬಳಸಿಕೊಂಡವರು ಕುಂ.ವೀ. ಇವರೇ ಹೇಳುವಂತೆ "ನಮ್ಮ ಊರಿನ ಆಜುಬಾಜಿನ ಭಾಷೆ ನಮ್ಮ ರೈತರು, ಜನ ಲೀಲಾಜಾಲವಾಗಿ ಬಳಸಿ ರೂಪುಗೊಂಡಿರತಕ್ಕಂಥದು". ಹಾಗೆಯೇ ಆಲನ ಹಳ್ಳಿ ಕೃಷ್ಣರವರ, ದೇವನೂರು, ಹೆಗ್ಗಡ ದೇವನ ಕೋಟೆ, ರಾವಬಹುದ್ದೂರರ ಬಿಜಾಪುರ ಚಾಮರಾಜನಗರ, ಕೊಳ್ಳೆಗಾಲದ ಭಾಷೆಯಂತೆಯೇ ಇವರ ಪ್ರದೇಶದ ಮಹಾದೇವರ ಭಾಷೆ ವಿಶಿಷ್ಟ ಸೊಗಸಿನಿಂದ ಅಪೂರ್ವ ಚೈತನ್ಯದಿಂದ ಕೂಡಿದೆ. ಅಲ್ಲಿಯ ಪ್ರಾದೇಶಿಕತೆಯ ಕತೆಗಳಲ್ಲಿ ದಾಖಲಾಗಿರುವುದನ್ನು ಗುರುತಿಸುವ ಪ್ರಯತ್ನ ನನ್ನದಾಗಿದೆ.

ಕುಂ.ವೀ ಅವರುನ್ನು ಬಂಡಾಯ ಕವಿಗಳ ಸಾಲಿಗೆ ಸೇರಿಸ ಬಹುದು ಅವರ ಕಥೆಗಳಲ್ಲಿ ದಲಿತ ಬದುಕು ಶೋಷಣೆಗೆ ಒಳಗಾಗುವುದನ್ನು ಕಾಣಬಹುದಾಗಿದೆ. ಅನುಭವಿಸಿದ ನೋವುಗಳನ್ನು ಕತೆಗಳ ಮೂಲಕ ಹೇಳಿರುವುದನ್ನು ಕಾಣುತ್ತೇವೆ. ಕುಂ.ವೀ ಅವರು ಜಾತಿ ಪದ್ದತಿ, ವರ್ಣ, ವರ್ಗ, ಸಂಘರ್ಷ ಇತ್ಯಾದಿಗಳ ಮೂಲಕ ಕತೆಗಳಲ್ಲಿ ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ.

ಅದ್ಯಾಯನದ ವಿಧಾನ

ಕುಂ.ವೀ ಯವರ 'ಏಳು ಕತೆಗಳನ್ನು' ಇಲ್ಲಿ ಅಧ್ಯಯನಕ್ಕಾಗಿ ನಾನು ಆರಿಸಿಕೊಂಡಿದ್ದೇನೆ. ಕಾರಣ ಈ ಏಳೂ ಕತೆಗಳಲ್ಲಿ ಬರುವ ಪಾತ್ರಗಳ ಬವಣೆ ಮತ್ತು ಅವರ ಬಂಡಾಯ ಸುಮಾರು ಒಂದೇ ಬಗೆಯದಾಗಿದ್ದು, ಇದಕ್ಕೆ ಹೀಗೆ ನಾನು ಅಧ್ಯಯನ ವಿಧಾನವನ್ನು, ಕಾರಣವಾಗಿರುವ ಸನ್ನಿವೇಶಗಳನ್ನು ವಿವರಿಸುವ ಪ್ರಯತ್ನ ನನ್ನದು. ಪರಂಪರೆಯಿಂದ ಸಾಗಿ ಬಂದಿರುವ ಭಾರತದ ಸಾಮಾಜಿಕ ವ್ಯವಸ್ಥೆಯ ವೈರುಧ್ಯವಿದೆ. ಕುಂ.ವೀ ಕತೆಗಳಲ್ಲಿನ ಬಂಡಾಯದ ಸ್ವರೂಪವನ್ನು ಏಳು ಕತೆಗಳಲ್ಲಿ ಪ್ರಸ್ಥಾಪಿಸಿದ್ದೀನೆ. ಈ ಕತೆಗಳಲ್ಲಿನ ಡೋಮ, ಸಿದ್ದ, ಮಂಜು, ಠೊಣ್ಣಿ, ಕತ್ತಲ, ಕಿವುಡ, ಬಸವ ಈ ಎಲ್ಲಾ ಕತೆಗಳಲ್ಲಿ ದಲಿತರನ್ನು ಹೇಗೆ ಶೋಷಣೆಗೆ ಒಳಪಡಿಸಿರುವುದನ್ನು ಕಾಣುತ್ತೇವೆ. ಇಲ್ಲಿ ದಲಿತರು ಮೇಲ್‌ವರ್ಗದವರಿಗಿಂತ ಅತ್ಯಂತ ಹೀನಾಯ ಪರಿಸ್ಥಿತಿಯಲ್ಲಿ ಬದುಕುತ್ತಿರುವುದನ್ನು ತಿಳಿಯುತ್ತೇವೆ. ಶಿಕ್ಷಣ ವ್ಯವಸ್ಥೆ ಇದ್ದರೂ ಸಹ ಮಂಜನನ್ನು ಶೋಷಣೆಗೆ ಒಳಪಡಿಸುವುದನ್ನು ತಿಳಿಯುತ್ತವೆ. ಜಾತಿಯ ಕಾರಣದಿಂದಾಗಿ ಶೋಷಣೆಗೆ ಒಳಪಡಿಸಿರುವುದನ್ನು ಕಾಣುತ್ತೇವೆ. ಈ ಎಲ್ಲಾ ಕತೆಗಳಲ್ಲಿಯೂ ಜಾತಿ ಪದ್ಧತಿ, ವರ್ಗ, ಸಂಘರ್ಷ, ಗಂಡು–ಹೆಣ್ಣಿನ ಸಂಬಂಧ, ಮೇಲ್‌ವರ್ಗದವರು ಕೆಳವರ್ಗದವರ ಮೇಲೆ ಹೇಗೆ ದಬ್ಬಾಳಿಕೆ ಮಾಡುತ್ತಿದ್ದರು ಎಂಬುದನ್ನು ಈ ಕತೆಯಲ್ಲಿ ತಿಳಿಯ ಬಹುದಾಗಿದೆ. ಕುಂ.ವೀ ಕತೆಗಳಲ್ಲಿ ಬಂಡಾಯ ಸ್ವರೂಪ ಹೇಗೆ ವ್ಯಕ್ತವಾಗಿದೆ ಎಂಬುದನ್ನು ನಾವು ಈ ಏಳು ಕತೆಗಳಲ್ಲಿ ತಿಳಿಯ ಬಹುದಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಐದು ಅದ್ಯಾಯಗಳನ್ನಾಗಿ ನನ್ನ ಈ ಕಿರು ಪ್ರಬಂಧವನ್ನು ವಿಭಾಗಿಸಿಕೊಂಡಿದ್ದೇನೆ. ಮೊದಲನೆಯ ಅಧ್ಯಾಯದಲ್ಲಿ ವಿಷಯ, ಉದ್ದೇಶ, ವ್ಯಾಪ್ತಿಯನ್ನು ವಿವರಿಸಿದ್ದೇನೆ. ಎರಡನೆಯ ಅಧ್ಯಾಯದಲ್ಲಿ ಕತೆಗಾರರ ಕಿರು ಪರಿಚಯವನ್ನು ಮಾಡಿ ಕೊಟ್ಟಿರುತ್ತೇನೆ. ಮೂರನೆಯ ಅಧ್ಯಾಯದಲ್ಲಿ ಏಳುಕತೆಗಳಲ್ಲಿನ ವಿವರಗಳನ್ನು ಕೊಟ್ಟಿ ವಿಶ್ಲೇಷಿಸುತ್ತ ದಲಿತ ಲೋಕದ ದಾರುಣ ಬದುಕು ಮತ್ತು ಅದಕ್ಕೆ ಕಾರಣವಾದ ವ್ಯವಸ್ಥೆಯ ವಿವರವನ್ನು ಕೊಡುವ ಪ್ರಯತ್ನ ಮಾಡುವುದು ಮತ್ತು ಇದಕ್ಕೆ ಪೂರಕವಾಗಿ ದಲಿತ ಬಂಡಾಯ ಸಾಹಿತ್ಯದ ಹುಟ್ಟು ಮತ್ತು ಅದರ ಸ್ವರೂಪವನ್ನು ಸಂಕ್ಷಿಪ್ತವಾಗಿ ತಿಳಿಸುವ ಮತ್ತು ಕುಂ.ವೀ ಯವರ ಕತೆಗಳಿಗೆ ಪೂರಕವಾಗಿ ಅಲ್ಲಿಯ ಪ್ರಾದೇಶಿಕತೆ ಹೇಗೆ ಬಳಕೆಗೊಂಡಿದೆ ಎಂಬ ವಿವರವನ್ನು ತದನಂತರ ಅದ್ಯಾಯದಲ್ಲಿ ನನ್ನ ಅದ್ಯಾಯನಾದ ಒಟ್ಟು ಫಲಿತವನ್ನು ತಿಳಿಸುವ ಅದ್ದೇಶ ನನ್ನದಾಗಿದೆ. ಹೀಗೆ ಪೂರಕ ಪಠ್ಯಗಳನ್ನು ಬಳಸಿ ಕೊಂಡು ಬರೆಯುವ ವಿಧಾನ ನನ್ನದಾಗಿದೆ.

ಕೊನೆ ಟಿಪ್ಪಣಿ

1. ಡಾ॥ ಎನ್.ಕೆ.ಕೋದಂಡ:– ಕನ್ನಡ ಕಥಾ ಸಾಹಿತ್ಯದಲ್ಲಿ ಸಂಸ್ಕೃತಿ ಸಂಘರ್ಷ ಪುಟ–135–147
2. ಡಾ॥ ಸಿ.ಬಿ.ಹೊನ್ನಯ್ಯ:– ಅಧ್ಯಾಯನ ಸ್ವರೂಪ ವ್ಯಾಪ್ತಿ ಪುಟು 01–10
3. ರಹಮತ್ ತರಿಕೆರೆ:– ಕನ್ನಡ ಸಾಹಿತ್ಯಮೀಮಾಂಸೆ ಸಂಪುಟ–1 ಪುಟ–112–125
4. ಕೆ. ಕೃಷ್ಣಮೂರ್ತಿ:– ಭಾರತೀಯ ಸಾಹಿತ್ಯ ವಿಮರ್ಶೆ ಸಂಪುಟ–2 ಪುಟ–338
5. ಆರ್.ಸಿ.ಹಿರೇಮಠ್:– ಪ್ರಾಚೀನ ಕನ್ನಡ ಸಾಹಿತ್ಯ ವಿಮರ್ಶೆಯ ತತ್ವಗಳು ಪುಟ–62
6. ಜಿ.ಎಸ್.ಆಮೂರ:– ಕನ್ನಡ ಕಥನ ಸಾಹಿತ್ಯ ಸಣ್ಣಕಥೆ ಪುಟ–03

ಅಧ್ಯಾಯ – 2

ಕಥೆಗಾರರ ಪರಿಚಯ

ಕುಂ.ವೀ. ಅವರ ಪೂರ್ಣ ಹೆಸರು ಕುಂಬಾರ ವೀರಭದ್ರಪ್ಪ ಇವರು ಕೊಟ್ಟೂರಿನಲ್ಲಿ 1–10–1953 ರಲ್ಲಿ ಜನಿಸಿದ್ದರು. ಇವರು ಕರ್ನೂಲ್ ಜಿಲ್ಲೆಯ ಗೋಳ್ಯಂ ಗ್ರಾಮದಲ್ಲಿ ಹೈಸ್ಕೂಲ್ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ ಎಂ.ಎ. ಕನ್ನಡ ಪದವೀಧರದಾರರು. ಇವರು ಕತೆಗಾರರಾಗಿ, ಕಾದಂಬರಿಕಾರರಾಗಿ ತುಂಬಾ ದೊಡ್ಡ ಹೆಸರನ್ನು ಪಡೆದಿದ್ದಾರೆ. ಇವರ ಬರವಣಿಗೆ ಆರಂಭವಾದಾಗ ಅದು ಬಂಡಾಯ ಸಾರತ್ಯದ ಉತ್ಕರ್ಷದ ಕಾಲವಾಗಿತ್ತು. ತಾವು ಅನುಭವಿಸಿದ ನೋವನ್ನು ತಾವು ಕಂಡ ಜಮೀನ್ದಾರಿ ದಬ್ಬಾಳಿಕೆಯನ್ನು ವಸ್ತುವಾಗಿಸಿ ಕತೆಗಳನ್ನು ಬರೆದವರು.

ಕುಂ.ವೀ. ಅವರು 8 ಕಥಾ ಸಂಕಲನಗಳನ್ನು ಪ್ರಕಟಿಸಿ, 12 ಕಾದಂಬರಿಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ್ದಾರೆ. ಅಷ್ಟೆ ಅಲ್ಲದೆ ನಾಲ್ಕು ಜೀವನ ಚರಿತ್ರೆಗಳನ್ನು, ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ತೆಲುಗು ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ತೆಲುಗು ಸಾಹಿತ್ಯದಲ್ಲಿ ಬರುವ ಚೆನ್ನದ ತೆನೆ ಜಮೀನ್ದಾರಿ ವ್ಯವಸ್ಥೆಯನ್ನು ವಿಮರ್ಶಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಕೊಟ್ಟೂರಿನವರಾದ ವೀರಭದ್ರಪ್ಪನವರ ಸಾಹಿತ್ಯ ಕ್ಷೇತ್ರಕ್ಕೆ ಕುಂ.ವೀ. ಎಂದೇ ಪ್ರಸಿದ್ದರಾಗಿದ್ದಾರೆ. 1970ರ ದಶಕದಲ್ಲಿ ಚಳುವಳಿಯಾಗಿ ಸಂಕ್ರಮಣ ಸ್ಥಿತಿಯಲ್ಲಿ ಬರೆಯತೊಡಗಿದ ಕುಂ.ವೀ. ಅವರ ಬರಹದಲ್ಲಿ ಬಂಡಾಯದ ಸ್ವರೂಪವುಳ್ಳ ಪ್ರಾತಿನಿಧಿಕವಾಗಿರುವುದನ್ನು ಕಾಣಬಹುದು. ಉದಾ: ಡೋಮ ಮತ್ತು ಇತರ ಕತೆಗಳು, ಕತ್ತಲ ತ್ರಿಶೂಲ ಹಿಡಿದ ಕತೆ, ಕಿವುಡನಾಯಿಯಾದ ಪ್ರಸಂಗ, ದೇವರ ಹೆಣ, ಕ್ರಾಂತಿ, ಸಿದ್ದನು ಗುರಿ ಇಟ್ಟಿದ್ದು, ಹುಗ್ಗಿ ಇತ್ಯಾದಿ.

ಆರಂಭದಲ್ಲಿ ಇವರು ತುಂಬಾ ಉಗ್ರವಾದ ವಾಸ್ತವವಾದಿಯಾಗಿ ಬರೆದವರು. ಇವರ ಬರವಣಿಗೆಯಲ್ಲಿ ಕಥಾ ನಿರೂಪಣೆಯ ಆಕ್ರೋಶ ಎದ್ದು ಕಾಣುತ್ತಿತ್ತು ಸಿದ್ದಲಿಂಗಯ್ಯನವರ ಆರಂಭದ ಕವಿತೆಗಳಲ್ಲಿ ಕಂಡುಬರುವ ಆಕ್ರೋಶವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಲ್ಲಿ ಸಿದ್ದಲಿಂಗಯ್ಯನವರ ಆಕ್ರೋಶವಾಗಲೀ ಅಥವಾ ಕುಂ.ವೀ. ಯವರ ಕತೆಗಳಲ್ಲಿನ ಆಕ್ರೋಶವಾಗಲೀ ಒಟ್ಟಾರೆ ಅದರೆ ಹಿಂದಿರುವುದು ಸಮುದಾಯ ಅನುಭವಿಸುವ ನೋವು ತಲ್ಲಣಗಳು ಹೆಪ್ಪುಗಟ್ಟಿದ ಈ ನೋವು ಆಕ್ರೋಶವಾಗಿ ತಿಳಿಯುತ್ತದೆ. ನಂತರ ಅನುಭವದ ವಿಸ್ತಾರ ತಮ್ಮ ಕಥನ ಶೈಲಿಯಲ್ಲಿ ಬದಲಾವಣೆ ತರಬೇಕೆಂದುಕೊಂಡರು. ಅವರ ಈ ಸ್ಥಿತ್ಯಾಂತರವನ್ನು 1998ರಲ್ಲಿ ಪ್ರಕರವಾದ ಬೃಹತ್ ಕಾದಂಬರಿ "ಶಾಮಣ್ಣ" ಕಾಣಬಹುದು.

ಮಹಾಕಾವ್ಯಗಳ ಕಥನ ಶೈಲಿಯನ್ನು ತುಂಬಾ ಯಶಸ್ವಿಯಾಗಿ ಅಳವಡಿಸಿಕೊಂಡ ಕುಟುಂಬವೊಂದರ ಮೂರು ತಲೆಮಾರುಗಳ ಇತಿಹಾಸವನ್ನು ಆಧುನಿಕ ಪುರಾಣ ರೂಪಕ್ಕೆ ಇಳಿಸಿದರು. ಇವರ ಕಥಾವಸ್ತು ಆಧುನಿಕ ಕಾಲದಲ್ಲಿ ಮತ್ತು ಭಾಷೆ ಮಧ್ಯಮವರ್ಗದ ಗ್ರಂಥಸ್ಥ, ಭಾಷೆ ನಿರಂತರ ಹುಡುಕಾಟದ ಸ್ವಭಾವದ ಹಾಗೂ ಜನಪದ ಜೀವವನ್ನು ಸಮೀಪದಿಂದ ಅನುಭವಿಸಿದ ಇವರು ಗೊಂದಲಿಗರ ಜನಪದ ಹಾಡುಗಾರಿಕೆಗೆ ಮತ್ತು ಕಥನ ಶೈಲಿಗೆ ಒಲಿದವರು. "ದಿಲ್ಲಿ ಸೀಮೆಯ ಹಾಡು" (1979) ಇವರ ಪ್ರಕಟಿತವಾದ ಮೊದಲ ಕವನ ಸಂಕಲನ. 'ನೀನಿಲ್ಲದ ಮನೆ' ಇವರ ಕಾವ್ಯ ಬಹುಮುಖಿ ಸಾಹಿತ್ಯವಾಗಿ ಓದುಗರ ವಲಯಕ್ಕೆ ಪರಿಚಿತಗೊಳ್ಳತೊಡಗಿತ್ತು.

ಕುಂ.ವೀ. ಅವರು ಬರೆದ ಕಥೆಗಳು : ಡೋಮ ಮತ್ತು ಇತರ ಕತೆಗಳು (1983). ಇನ್ನಾದರು ಸಾಯಬೇಕು (1983), ಭಗವತಿ ಕಾಡು (1988), ನಿಜಲಿಂಗ (1988), ಸುಶೀಲೆ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ (1994) ಅಪೂರ್ವ ಚಿಂತಾಮಣಿ ಕಥೆ (1994), ಇದು ಬರಿ ಕಥೆಯಲ್ಲೊ ಅಣ್ಣ, ಸಮಗ್ರ ಕತೆಗಳು ಬರೆದು ಹೆಚ್ಚು ಪ್ರಾಮುಖ್ಯರಾಗಿದ್ದಾರೆ. ಇವರ ಕೆಲವು ಕಾದಂಬರಿಗಳು ಚಲನಚಿತ್ರಗಳಾಗಿವೆ. ಮನಮೆಚ್ಚಿದ ಹುಡುಗಿ, ಬೇಟೆ, ದೊರೆ, ಕೊಟ್ರೇಶಿ ಕನಸು, ಕೆಂಡದ ಮಳೆ ಇತ್ಯಾದಿ. ಇವರಿಗೆ ಅನೇಕ ಪ್ರಶಸ್ತಿಗಳು ಸಹ ಲಭಿಸಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ (1986–2001) ವರ್ಧಮಾನದ ಪ್ರಶಸ್ತಿ (1988) ರಾಜ್ಯ ಸಾಹಿತ್ಯ ಅಕಾಡೆಮಿ, ಗೌರವ ಪ್ರಶಸ್ತಿ (2001) ಲಂಕೇಶ್ ಪ್ರತಿಷ್ಠಾನ ಪ್ರಶಸ್ತಿ (2006) ಇತ್ಯಾದಿ ಇವರಿಗೆ ದೊರೆತ ಪ್ರಶಸ್ತಿಗಳಾಗಿವೆ.

ವರದಿಗಾರರಾಗಿ, ಪತ್ರಿಕೋದ್ಯಮಕ್ಕೆ ಪರಿಚಿತವಾದ ಇವರು ತೆಲುಗು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಪಡೆದುಕೊಂಡಿರುವುದಕ್ಕೆ ಇವರ ಕಥಾ ಸಾಹಿತ್ಯವೇ ಮುಖ್ಯ ಕಾರಣವಾಗಿದೆ. ಸಮಾಜದಲ್ಲಿ ಕೆಳವರ್ಗದ ಜನರ ಜೀವನವನ್ನು ಅವರಷ್ಟು ಸಮೀಪದಿಂದ ಮತ್ತು ಆಳವಾಗಿ ನೋಡಿದವರು ಸಮಕಾಲೀನಲ್ಲಿ ಅತಿ ವಿರಳ. ನಿರೂಪಣೆ, ಭಾಷೆಯ ಮೂಲಕವಾಗಿಯೇ ಪಾತ್ರಗಳನ್ನು ಜೀವಂತಗೊಳಿಸುವ ಕಲೆ ಇವರದ್ದು. ವರ್ತಮಾನದ ಮಹತ್ವದ ಕತೆಗಾರರಲ್ಲಿ ಇವರು ಒಬ್ಬರಾಗಿದ್ದಾರೆ.

ಮಹಾಭಾರತ ರಾಮಾಯಣಗಳ ಜೊತೆಗೆ ಹರಿವಾಣದ ಚಿದಾನಂದಾದೇವಧೂತ ವಿರಚಿತ ವೇದಾಂತ ಜ್ಞಾನ ಸಿಂಧುವಿನಲ್ಲಿ ಅರಗಿಸಿಕೊಂಡಿದ್ದ ಕುಂ. ವೀ. ಯವರು ಕೋಡಿಹಳ್ಳಿಯಿಂದ ಕೊಟ್ಟೂರಿಗೆ ವಲಸೆ ಬರಲು ಕಾರಣಗಳು ಅನೇಕ. ಅವುಗಳ ಪೈಕಿ ಕುಲಬಾಂಧವರ ಉಪಟಳವೂ ಒಂದು. ಅವರ ಪೈಕಿ ಐದು ಮಂದಿಯನ್ನು ಜೈಲಿಗೆ ಕಳಿಸುವ ಸಲುವಾಗಿ ಹೊಸಪೇಟೆ, ಬಳ್ಳಾರಿ, ಬೆಂಗಳೂರು ಕಡೆಲೆಲ್ಲ ತಿರುಗಾಡಿಕೊಂಡು ಬರುತ್ತಿದ್ದರು.ಎ.ಆರ್. ಕೃಷ್ಣಶಾಸ್ತ್ರಿಗಳ ವಚನ ಭಾರತ ನನ್ನಿಂದ ರಾಗ ಮಾಡಿ ಓದಿಸುತ್ತಿದ್ದ ನೆಂಟರಿಷ್ಟರಿಗೆ ನನ್ನ ಕೈಲಿ ಮಹಾರಾಜ ರಾಜಶ್ರೀ ಎಂದು ಒಕ್ಕಣಿಕೆ ಬರೆಸುತ್ತಿದ್ದರು. ಎಂದು ಹೇಳಿಕೊಂಡಿರುವ ಕುಂ. ವೀ. ಯವರ ಮಾತುಗಳ ಮೂಲಕ ಚಿಕ್ಕಂದಿನಿಂದಲೂ ಅವರನ್ನು ಸಾಹಿತ್ಯಾಸಕ್ತರನ್ನಾಗಿಸಲು ಕಾರಣರಾದ ಅಂಶಗಳು ಕಾಣಿಸಿಕೊಳ್ಳುತ್ತವೆ.

ನಾನು ಕಾಲೇಜು ಹತ್ತುವುದಂತೂ ಸಾಧ್ಯವಿರಲಿಲ್ಲ. ನನ್ನ ದೇಹವನ್ನು ನಾನು ಬದುಕಿಸಿಕೊಳ್ಳಬೇಕಾಗಿತ್ತಲ್ಲದೆ ಮನೆಗೂ ಆಸರೆಯಾಗಬೇಕಾಗಿತ್ತು. ಕೆಲ ತಿಂಗಳು ಬಲವಂತಕ್ಕೆ ಮೆಡಿಕಲ್ ಶಾಪ್, ಕಿರಾಣಿ, ದುಕಾನು, ಪ್ರಿಂಟಿಂಗ್ ರೈಲ್ವೆ ಇಲಾಖೆಯಲ್ಲಿ ದಿನಗೂಲಿ ಕೆಲಸಕ್ಕೆ ಸೇರಿಕೊಂಡೆ ಎಂದು ಅವರೇ ಹೇಳಿಕೊಳ್ಳುತ್ತಾರೆ.

ಸಾಹಿತ್ಯಕ ಆಸಕ್ತಿ ಹೊಂದಿದ್ದ ಕುಂ.ವೀ. ಅವರು ಮನೆ ಒಳಗಾಗಲೀ, ಹೊರಗಾಗಲೀ ಇರಲಾಗದೆ ಒದ್ದಾಡುತ್ತಿದ್ದರು. ಇವರಿಗೆ ಹತ್ತೊಂಬತ್ತರ ಮಗ್ಗಿ ಬರುವುದಿಲ್ಲವೆಂಬ ಕಾರಣಕ್ಕೆ ನೌಕರಿ ದೊರಕಲಿಲ್ಲ. ಕೊಟ್ಟೂರು ಅಡವಿ ದುರಂತ ಕಥೆ ಎಂಬ ಪತ್ರವನ್ನು ಕುಂ. ವೀರಭದ್ರಪ್ಪ ಎಂಬ ಹೆಸರಿನಲ್ಲಿ ಪ್ರಜಾವಾಣಿಯ ವಾಚಕರವಾಣಿಗೆ ಕಳಿಸಿದರು. ವೀರಭದ್ರಪ್ಪ ಕುಂಬಾರ ಎಂದು ಪುನರ್ ನಾಮಕರಣ ಮಾಡಿಕೊಳ್ಳಲು ಧೈರ್ಯ ಬರಲಿಲ್ಲ. ಪತ್ರ ಪ್ರಕಟವಾಯಿತು. ಕನ್ನಡದ ಪ್ರಮುಖ ಲೇಖಕರೆಲ್ಲ ಬೀದಿಗಿಳಿದು ಎದ್ದೇಳಿ ಎದ್ದೇಳಿ ನಿದ್ದೆಗಣ್ಣನು ಕೇಳಿ ಎಂದು ಯುವ ಲೋಕವನ್ನು ಬಡಿದೆಬ್ಬಿಸಲಾರಂಭಿಸಿದ್ದರು.

ಅನೇಕ ಬರಹಗಾರರು ಆರಂಭದ ಹಂತದಲ್ಲಿ ಇವರಿಗೆ ಸಾಕಷ್ಟು ಪ್ರೋತ್ಸಾಹ ನೀಡಿ ಬರಹದ ಕಡೆ ಇವರು ಇನ್ನಷ್ಟು ಆಸಕ್ತಿ ತಳೆಯುವಂತೆ ಮಾಡಿದರು.

ಆಂಧ್ರ ಪ್ರದೇಶದ ಜಮೀನ್ದಾರಿ ಬದುಕಿನ ದರ್ಪ ಸಾಮಾಜಿಕ ಅಸಮಾನತೆ ಶ್ರಮಿಕವರ್ಗ, ಕೆಳಜಾತಿ ಎಂದು ಗುರುತಿಸಲ್ಪಟ್ಟವರಲ್ಲಿ ಇರುವ ಸಾಂಪ್ರದಾಯಿಕ ಮೌಢ್ಯ ಇವುಗಳ ಚಿತ್ರಣವನ್ನು ಕತೆಯಲ್ಲಿ ಕಟ್ಟಿಕೊಡುತ್ತಾರೆ. ಅಷ್ಟೇ ಅಲ್ಲದೆ ಆವರಣವನ್ನು ನಿರ್ಮಿಸಿಬಿಡುವ ಕರಿಯ, ಡೋಮ, ಠೊಣ್ಣಿ, ಪೀರಣ, ಕಿವುಡ, ಕತ್ತಲು ಇವರು ಈ ವ್ಯವಸ್ಥೆಯ ವಿರುದ್ಧ ಬಂಡಾಯ ಏಳುವುದರಲ್ಲಿ ಅಲಕ್ಷ್ಯ ಸಮುದಾಯ ಹೀಗೆ ಸಮುದಾಯವನ್ನು ತಮ್ಮ ಬರವಣಿಗೆಯ ಆವರಣಕ್ಕೆ ತೆಗೆದುಕೊಂಡು ಅಲ್ಲಿನ ಬಿಕ್ಕಟ್ಟುಗಳನ್ನು ತೆರೆದಿಡುತ್ತಾರೆ.

ತಾವು ಬದುಕಿದ ಪ್ರಾದೇಶಿಕತೆ ಇವರ ಬರಹದ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಅಲ್ಲಿದ್ದ ಜಮೀಂದ್ದಾರಿ ಪದ್ಧತಿಯ ಹಿಡಿತ, ಜಾತಿಯಾದ ತಳಸಮುದಾಯಗಳಿಂದ ಬಂದವರು. ಕೃಷಿ ಇತರೆ ವಲಯದಲ್ಲಿ ಕಾರ್ಮಿಕರಾಗಿ ದುಡಿಯು ಅನಿವಾರ್ಯ. ಈ ದುಡಿಮೆಗೂ ಕಲ್ಲು ಹಾಕುವ ಪದೇ ಪದೇ ಎಡತಾಕುವ ಭೀಕರ ಬರಗಾಲಗಳು. ಇದರಿಂದ ಹದಗೆಡುವ ಬದುಕು ಇವುಗಳ ಚಿತ್ರಣ ಇವರ ಬರಹಕ್ಕೆ ವಸ್ತುವಾಗಿ ಬಳಸಿಕೊಂಡಿದೆ.

ಕೊನೆ ಟಿಪ್ಪಣಿ

1.	ಕುಂಬಾರ ವೀರಭದ್ರಪ್ಪ	ಗಾಂಧಿಕ್ಲಾಸ್ ಆತ್ಮ ಕಥನಗಳು	ಪುಟ–65–60
2.	ಕುಂಬಾರ ವೀರಭದ್ರಪ್ಪ	ಇದು ಬರಿ ಕಥೆಯಲ್ಲೊ ಅಣ್ಣ	ಪುಟ–5–20
3.	ಗಿರಡ್ಡಿ ಗೋವಿಂದರಾಜ್	ಕುಂ.ವೀ. ರವರ ಕಥಾ ಸಾಹಿತ್ಯ	ಪುಟ–15
4.	ಕುಂಬಾರ ವೀರಭದ್ರಪ್ಪ	ಅಪೂರ್ವ ಚಿಂತಾಮಣಿ ಕಥೆ	ಪುಟ–8

ಅಧ್ಯಾಯ-3

ಕುಂ.ವೀ ಕತೆಗಳಲ್ಲಿನ ಬಂಡಾಯದ ಸ್ವರೂಪ ಮತ್ತು ಕಾರಣಗಳು

ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿನ ಸಾಮಾಜಿಕ ಅಸಮಾನತೆ, ಆರ್ಥಿಕ ವಂಚನೆ, ಧಾರ್ಮಿಕ ಅವಹೇಳನ, ಶಿಕ್ಷಣ ಕೊಡದಿರುವುದು, ಸ್ವಾತಂತ್ರದ ಹರಣ ಈ ಮುಂತಾದವುಗಳ ವಿರುದ್ಧ ಹೋರಾಡಿದ ಅನೇಕ ಮಹಾಪುರುಷರಿದ್ದಾರೆ. ಇಂತಹ ಪ್ರತಿಭಟನೆಗಳು ಸಾಹಿತ್ಯದ ಮೂಲಕವೂ ನಡೆದಿದೆ. ಇದಕ್ಕೆ ಕಾರಣ ಜ್ಯೋತಿ ಬಾ ಪೂಲೆ, ಅಂಬೇಡ್ಕರ್, ರಾಜಾರಂ ಮೋಹನರಾಯ್, ವಿವೇಕಾನಂದ, ಪೆರಿಯಾರ್, ಈ.ವಿ. ರಾಮಸ್ವಾಮಿ ನಾಯಕರು ಮುಂತಾದ ಮಹನೀಯರು. ಇವರ ಚಿಂತನೆಗಳಿಂದ ಪ್ರೇರಣೆ ಪಡೆದವರು ದಲಿತ ಬಂಡಾಯ ಸಾಹಿತಿಗಳಾದದ್ದು ವಿಶೇಷವಾದ ಬೆಳವಣಿಗೆ.

ಕನ್ನಡ ನಾಡಿನ ಸಂದರ್ಭದಲ್ಲಿ ಇಲ್ಲಿನ ಎಲ್ಲ ರೀತಿಯ ಅಸಮಾನತೆಯನ್ನು ಅಥವಾ ಯಥಾ ಸ್ಥಿತಿವಾದವನ್ನು ಮೊದಲು ಪ್ರಶ್ನಿಸಿದವರು. ಶಿವ ಸಂಸ್ಕೃತಿಯ ಪುರಾತನ ಶರಣರಾದ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ ಮುಂತಾದವರು ಈ ಹಾದಿಯಲ್ಲೆ ಸಾಗಿ ಸಾಮಾಜಿಕ ಪರಿವರ್ತನೆಯ ಸಂಘರ್ಷವನ್ನು ಅವರಿಗಿಂತಲೂ ನೂರು ಪಟ್ಟು ತೀವ್ರವಾಗಿಯೂ ಸಂಘಟನಾತ್ಮಕವಾಗಿಯೂ ಅವರೆ ಹಾಕಿದ ಮಾರ್ಗದಲ್ಲಿ ಅವಿಶ್ರಾಂತವಾಗಿ ಮುನ್ನಡೆಸಿದವರು ಬಸವ ಇತ್ಯಾದಿ ಪ್ರಮಥರು.

ವಚನಯುಗ ಮುಗಿದ ಮೇಲೆ ಮತ್ತೆ ಅದೆ ಹಳೆ ಕಥೆಯಾಯ್ತು. ಸಂಸ್ಥೆ ರೂಪದಲ್ಲಿರುವ ಅಸಮಾನತೆ ವಿಚಾರಗಳನ್ನು ಉಳಿಸಿ ವ್ಯಕ್ತಿ ಹೃದಯ ಪರಿವರ್ತನೆಗೆ ಹೆಚ್ಚು ಗಮನ ಕೊಟ್ಟಿದ್ದೆ ಬಹುಶಃ ವಚನಯುಗದ ಸೋಲಿಗೆ ಕಾರಣವಾಗಿದೆ. ಇಲ್ಲಿ ಭಾಷೆಯಾದ ಸಂಸ್ಕೃತದಲ್ಲಿ ಸೃಷ್ಠಿಯಾದವರ ನೆರಳಂತೆ ಕನ್ನಡ ಸಾಹಿತ್ಯ ತನ್ನನ್ನು ರೂಪಿಸಿಕೊಂಡು ಬಂದಿತ್ತು. ಮನುಜನನ್ನು ಕುಗ್ಗಿಸುವ ಕರ್ಮ, ವರ್ಣ, ಪರಾಮಾರ್ಥಿಕ, ಲೌಕಿಕ, ಸತ್ಯ ಇಂಥಹ ಸತ್ಯಗಳನ್ನು ಮನಸ್ಸಿನ ಆಳದಲ್ಲಿ ಅನೈತಿಕವಾಗಿ ಇಟ್ಟುಕೊಂಡ ಕೃತಿಗಳನ್ನು ನಾವು ಕಾಣಬಹುದು. ಆದರೆ ಅಧುನಿಕ ಕನ್ನಡ ಸಾಹಿತ್ಯದಲ್ಲಿ, ಉದಾ: ಕುವೆಂಪು ಸಮಬಾಳು ಸಮಪಾಲು ಇತ್ಯಾದಿ ಕವನಗಳನ್ನು, ಮದುಮಗಳು ಹೊಲತಿ ತಿಮ್ಮಿಯಲ್ಲೂ ದಾರ್ಶನಿಕತೆ ಕಾಣಲು ಸಾದ್ಯ ಎಂಬಂಥ ನಂಬಿಕೆಯನ್ನು ಹೆಚ್ಚಿಸಿದರು. ಆದರೆ ಮೇಲು ಕೀಳು ಅನ್ನದೆ ಎಲ್ಲರಿಗೂ ಸಾಧ್ಯ ಅನ್ನೋ ಏಕದೃಷ್ಟಿ ಇಲ್ಲಿ ಹೃದಯ ಮುಟ್ಟುವಂತಹುದು. "ಕಾರಂತರ" ನ್ನು ತೆಗೆದುಕೊಂಡರೆ "ಚೋಮನ ದುಡಿ" ಕಾದಂಬರಿಯನ್ನು ತೆಗೆದು ಕೊಂಡಾಗ ಚೋಮನ ಮನಸ್ಸಿನ ಭಾವನೆಗೆ ಪ್ರಾಮುಖ್ಯತೆ ಕೊಟ್ಟು ಅವನ ಏರಿಳಿತಗಳು ಕಾದಂಬರಿಯ ವಸ್ತುವಾಗಿರುವುದನ್ನು ಕಾಣುತ್ತೇವೆ. ಚೋಮನ ದಾರಿದ್ರ್ಯದ ಪರಿಸ್ಥಿತಿಯನ್ನು ಇಲ್ಲಿ ಗಮನಿಸಬಹುದು.

ಇನ್ನು ನವ್ಯ ಮತ್ತು ಪ್ರಗತಿಶೀಲವನ್ನು ತೆಗೆದುಕೊಂಡಾಗ ಇವರ ಸಾಹಿತ್ಯ ಮೂಲವಾದ ಬಂಧ ಕೇಂದ್ರ ಪರಕೀಯತೆ ಭಾಷೆ ಮುಂತಾದ ಕಲ್ಪನೆಗಳು ದಲಿತರ ದುರಂತಕ್ಕೆ ಕಾರಣವಾಗಿರುವುದನ್ನು ಕಾಣುತ್ತೇವೆ. ದಲಿತ ಪಂಥದವರು ಹರಿಜನರ ಬಗ್ಗೆ ಮಾತಾಡುತ್ತ ಪ್ರತಿಯೊಬ್ಬನೂ ತನ್ನನ್ನು ತಾನೆ ಮೇಲೆತ್ತಿಕೊಳ್ಳುವ

ಸ್ಪರ್ದೆ ಈ ದೇಶದಲ್ಲಿ ಉಂಟಾಗ ಬೇಕು ಹರಿಜನರಿಗೆ ದೊಡ್ಡ ದೊಡ್ಡ ಅಧಿಕಾರ ಕೊಟ್ಟರೆ ಮಾತ್ರಕ್ಕೆ ಅವರು ಶೋಷಣೆಯಿಂದ ಮೇಲೆ ಬರಲು ಸಾಧ್ಯವಾಗುತ್ತದೆ. ಎಂಬುದೇ ಅವರ ಅಭಿಪ್ರಾಯವಾಗಿತ್ತು. ಈ ದಲಿತ ಪಂಥ ಐದಾರು ವರ್ಷಗಳ ಕೆಳಗೆ ಪ್ರಜ್ಞಾವಂತರಾದ ಕೆಲವು ದಲಿತರ ಒಂದು ಸಾಹಿತ್ಯಕ ಚಟುವಟಿಕೆಯ ಸಂಸ್ಥೆಯಾಗಿತ್ತು. ಆದರೆ ಅಲ್ಲಿನ ಸದಸ್ಯರಿಗೆ ಬದಲಾವಣೆ ಸ್ವಂತಕ್ಕೆ ಅಗತ್ಯವಿದ್ದುದರಿಂದ ಈ ಸಾಹಿತ್ಯಕ ಸಂಸ್ಥೆಯ ಹೋರಾಟದ ಸಂಸ್ಥೆಯಾಗಿ ಪರಿಣಮಿಸಿತು. ಇದನ್ನು ದಲಿತರು ಅರ್ಥ ಮಾಡಿಕೊಂಡರೆ ಗೊಂದಲವು ಕಡಿಮೆಯಾಗುತ್ತದೆ. ಬಂಡವಾಳ ಶಾಹಿ ಮತ್ತು ಜಮಿನ್ದಾರಿ ಪದ್ದತಿ ಇರುವ ಇಂಡಿಯಾದಲ್ಲಿ ವ್ಯಕ್ತಿಸ್ವಾತಂತ್ರ ಕಂಡಾಗ ಯಮದೂತನ ಥರ ಕಾಣುತ್ತೇವೆ. ಈ ವ್ಯಕ್ತಿ ಸ್ವಾತಂತ್ರ ಯಾರಿಗೆ ಇದೆ ನಮ್ಮ ಬೆನ್ನ ಹಿಂದೆ ಈ ವ್ಯಕ್ತಿತ್ವ, ವ್ಯಕ್ತಿ ಸ್ವಾತಂತ್ರ್ಯ ಏನೇನೂ ಎಳ್ಳಷ್ಟು ಅರಿವೆ ಇಲ್ಲದೆ ಕೋಟಿ ಕೋಟಿ ದಲಿತ ನರಮನುಷ್ಯರು ಇದ್ದಾರೆ. ಇಲ್ಲಿ ದೇವನೂರರವರು ತನ್ನ ನೋವನ್ನು ಮತ್ತು ಅಲ್ಲಿನ ಜನರ ಸುತ್ತಮುತ್ತಲಿನ ಜನರ ಪರಿಸ್ಥಿತಿಯನ್ನು ಅರಿತು ಇಲ್ಲಿ ಕಂ.ವೀ ಕತೆಗಳಲ್ಲಿ ಬರುವ ವಿವರಣೆಗಳು ಇವೆ. ದಲಿತರು ಹಸಿವಿನಿಂದ ಸಾಯುವುದು, ಭಿಕ್ಷೆ ಬೇಡುವುದು, ಜೀವಂತವಾಗಿ ಸುಡಿಸಿಕೊಳ್ಳುವುದು, ಪಶುಗಳ ಥರ ದುಡಿಯುವುದು, ಹುಟ್ಟಿದ ತಪ್ಪಿಗೆ ಚೆ ಚೀ ಅನಿಸಿಕೊಳ್ಳುವುದು ಇವೆಲ್ಲದರಿಂದ ದಲಿತರು ಶೋಷಣೆಗೆ ಒಳಗಾಗುತ್ತಿರುವುದನ್ನು ಕಾಣುತ್ತೇವೆ. ಕುಂ.ವೀ ಕತೆಗಳಲ್ಲಿ ಈ ಎಲ್ಲಾ ಚಿತ್ರಣಗಳನ್ನು ಕಟ್ಟಿಕೊಡುತ್ತಾರೆ. ಭೀಕರತೆ ಎಂದರೆ ಇಂಡಿಯಾದ ತುಳಿಯೋ ಬಂಡವಾಳ ಶಾಹಿಗಿಂತಲೂ ಕ್ರೂರವಾದ ಮನಸ್ಸು. ಜಾತಿ ವ್ಯವಸ್ಥೆಯಿಂದ ಆದದ್ದು. ವರ್ಣ ವ್ಯವಸ್ಥೆಯನ್ನು ಇದು ಮಾರ್ಪಡಿಸಿ ಚಲನೆಯೇ ಇಲ್ಲದಂತೆ ಮಾಡಿದೆ. ಇಲ್ಲಿ ಜಾತಿ ವ್ಯವಸ್ಥೆ ಎಲ್ಲ ಜಡತ್ವಕ್ಕೂ ಕಾರಣವಾಗಿದೆ. ಪ್ರಜಾಪ್ರಭುತ್ವಕ್ಕೆ ಮೂರು ಕಾಸೂ ಬೆಲೆ ಇಲ್ಲದಂತೆ ಮಾಡಿದೆ.

ಮೇಲ್ ಜಾತಿಯ ಜನರು ಈ ದಲಿತರ ಜೊತೆಗೆ ಹೆಗಲ ಕೊಟ್ಟು ಸಹಕರಿಸಿದಾಗ ಮಾತ್ರ ದಲಿತರು ಶೋಷಣೆಯಿಂದ ಹೊರ ಬರಲು ಸಾಧ್ಯವಾಗುತ್ತದೆ. ದಲಿತರು ಹುಟ್ಟಿದಾಗಿನಿಂದಲ್ಲೂ ಶೋಷಣೆಗೆ ಒಳಗಾಗಿರುವುದರಿಂದ ಮತ್ತು ಹಸಿವಿನಿಂದ ತನ್ನ ಮಕ್ಕಳನ್ನು ಜೀತಪದ್ದತಿಗೆ ಕಳುಹಿಸುತ್ತಿರುವುದನ್ನು ಕಾಣುತ್ತೇವೆ. ಮಾನವೀಯತೆ ಉಳ್ಳವನು ಜಾತಿ ಮೂಲದ ಅಸಮಾನತೆಯ ಕೊಳಕಿನಿಂದ ರೂಪುಗೊಂಡ ವ್ಯಕ್ತಿತ್ವವನ್ನು ಕಳೆದುಕೊಳ್ಳಬೇಕು. ಆಗ ದಲಿತರು ಬದಲಾಗುವ ಸಾದ್ಯತೆಗಳಿವೆ.

ಇಂದಿರಾ ಗಾಂಧಿಯವರು ಬಡವರ ಪರವಾದ ಅನೇಕ ಯೋಜನೆಗಳನ್ನು ಜಾರಿಗೆತಂದರು. ಇವರು ಸರ್ಕಾರ ಮತ್ತು ಪಕ್ಷದ ಧೋರಣೆಗಳನ್ನು ಗುರಿಯಾಗಿಟ್ಟುಕೊಂಡಿದ್ದರು. ಬಹಳ ಮುಖ್ಯವಾಗಿ ಇಂದಿರಾ ಗಾಂಧಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಇಬ್ಬಾಗವಾದ ಮೇಲೆ ಅಧಿಕೃತವಾಗಿ ಇವರದ್ದು ಸಮಾಜವಾದಿ ಧೋರಣೆಯಾಗಿತ್ತು. ಇದಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದರು. ಇದರ ಅಂಗವಾಗಿ ಗರೀಭಿ ಹಠವೋ ಎಂಬ ಘೋಷಣೆಯನ್ನು ಮಾಡಿದ್ದರು. ರಾಷ್ಟ್ರೀಯ ಬ್ಯಾಂಕುಗಳ ಮತ್ತು ವಿಮಾಕಂಪನಿಗಳ ರಾಷ್ಟ್ರೀಕರಣ, ಭೂ ಸುಧಾರಣೆಗಳ ಅಂಗವಾಗಿ ಖಾಸಗಿ ಆಸ್ತಿಗೆ ಮಿತಿ ಹೇರಿ ಕಡಿವಾಣ, ಭೂ ಸುಧಾರಣೆಗಳ ಶೀಘ್ರ ಅನುಷ್ಠಾನ, ಹಾಗೆಯೇ ಶ್ರೀಮಂತ ಪರವಾದ ವೈಭೋಗದ

ಜೀವನ ನಡೆಸುತ್ತಿದ್ದ ಸಂಸ್ಥಾನದ ಮಾಜಿ ರಾಜರುಗಳಿಗೆ ಕೊಡುತ್ತಿದ್ದ ರಾಜಧ ಮತ್ತು ಅವರಿಗಿದ್ದ ವಿಶೇಷ ಹಕ್ಕುಗಳನ್ನು ರದ್ದು ಗೊಳಿಸುವ ನಿರ್ಣಯ ಕೈಗೊಂಡರು. ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ ಬಡತನ ನಿರ್ಮೂಲನೆಗೆ ಚಾಲನೆ ನೀಡಿ ಆ ಮೂಲಕ ಆರ್ಥಿಕ ದುರ್ಬಲರಿಗೆ, ಬಡವರಿಗೆ, ಮಹಿಳೆಯರಿಗೆ, ದಲಿತರಿಗೆ ಸಾಲ ಯೋಜನೆಯಡಿಯಲ್ಲಿ ಕಡಿಮೆ ಬಡ್ಡಿಗೆ ಸಾಲ ನೀಡಿದ್ದರು. ಈ ಯೋಜನೆಗಳು ಬಡವರ ಪಾಲಿಗೆ ಆರ್ಥಿಕವಾಗಿ ಎಷ್ಟರಮಟ್ಟಿಗೆ ಭದ್ರಬುನಾದಿ ಹಾಕಿತೆಂಬುದು ತಿಳಿಯಬಹುದು. ಈ ಯೋಜನೆಯ ಸೌಲಭ್ಯಗಳು ಪ್ರಜ್ಞಾವಂತರು ಮತ್ತು ಬಡವರ ಮೇಲೆ ಸಾಕಷ್ಟು ಪರಿಣಾಮ ಬೀರಿ ಇಂದಿರಾ ಪಕ್ಷ ಬಡವರ ಪಕ್ಷ ಎನ್ನುವ ಮಟ್ಟಿಗೆ ಜನಪ್ರಿಯವಾಗಿತ್ತು. ಇದರಿಂದ ಈ ಧೋರಣೆಗಳಿಂದಾಗಿ ಬಹಳಷ್ಟು ಮೇಲ್ಜಾತಿ ಜನರಿಗೆ ಇಂದಿರಾ ಗಾಂಧಿ ಕಮ್ಯೂನಿಷ್ಟ್ ಎಂಬ ಭಯ ಆವರಿಸಿತ್ತು.

ಕರ್ನಾಟಕದಲ್ಲಿ ಅರಸುರವರು ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗುವವರೆಗೆ ದಲಿತರು ಬಹುಪಾಲು ನಿರ್ಲಕ್ಷಕ್ಕೆ ಒಳಗಾಗಿರುವುದನ್ನು ಕಾಣುತ್ತೇವೆ. ಇವರು ಆಯ್ಕೆಯಾಗಿ ಬಂದ ಸದಸ್ಯರಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಅಲ್ಪಸಂಖ್ಯಾತರನ್ನು ಇವರಿಗೆ ಸಚಿವ ಸಂಪುಟದಲ್ಲಿ ಪ್ರಮುಖ ಸ್ಥಾನವನ್ನು ಕೊಟ್ಟರು. ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ ಏಳಿಗೆಗಾಗಿ ಹಾವನೂರು ಆಯೋಗ ನೇಮಿಸಿದರು. ಇನ್ನೂ ಭೂ ಸುದಾರಣ ಕಾಯ್ದೆ ಹಿಂದೆ ಮೇಲ್ಜಾತಿಯ ಭೂಮಾಲೀಕರಿಗೆ, ಶ್ರೀಮಂತರಿಗೆ ಅನುಕೂಲವಾಗಿದ್ದ ಭೂ ಸುಧಾರಣ ಮಸೂದೆಗೆ ಅರಸು ತಿದ್ದುಪಡಿ ಮಾಡಿರುವುದನ್ನು ಕಾಣುತ್ತೇವೆ. ಇಲ್ಲಿ ಅರಸುರವರು ದೂರದೃಷ್ಠಿ ಬಲಿಷ್ಠ ಕೋಮಿನ ಭೂ ಮಾಲಿಕರನ್ನು ಕುಗ್ಗಿಸುವುದೇ ಅವರ ಉದ್ದೇಶವಾಗಿತ್ತು. ಕೇಂದ್ರ ಸರ್ಕಾರದಲ್ಲಿ ಇಂದಿರಾ ಗಾಂಧಿ ಜಾರಿಗೆ ತಂದ, ದಲಿತರ ಬಡತನ ನಿರ್ಮೂಲನೆಗಾಗಿ ಜಾರಿಗೆತಂದ ಹಲವು ಯೋಜನೆಗಳಲ್ಲಿ ಒಂದಾದ 'ಉಳುವವನೆ ಭೂಮಿಯ ಒಡೆಯ' ಎನ್ನುವ ಕೂಗು ಮುಗಿಲುಮುಟ್ಟಿತು ಜಮೀನು ಕೈತಪ್ಪಿ ಹೋಗದಂತೆ ಗೇಣಿದಾರರಿಗೆ ರಕ್ಷಣೆಯಾಗಿ ಭೂ ನ್ಯಾಯ ಮಂಡಳಿಯನ್ನು ಸ್ಥಾಪಿಸಿದರು, ಭೂಸ್ವಾದೀನಕ್ಕಾಗಿ ಗೇಣಿದಾರರು, ಕೊಡಬೇಕಾದ ಹಣವನ್ನು ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕಿನಿಂದ ಆರ್ಥಿಕ ನೆರವನ್ನು ಒದಗಿಸುವ ಅನುಕೂಲ ಮಾಡಿಕೊಟ್ಟರು. ದಲಿತರ ಪಾಲಿಗೆ ಶಾಪವಾಗಿದ್ದ ಜೀತ ಪದ್ದತಿ ತಲೆಯ ಮೇಲೆ ಮಲ ಹೊರುವ ಪದ್ದತಿಯನ್ನು ನಿಷೇಧಿಸಿದರು. ಅಧಿಕೃತವಾಗಿ ಪೌರಕಾರ್ಮಿಕರೆಂದು ಕಾನೂನು ಮಾಡಿದ್ದ ಅರಸುರವರ ದಲಿತ ಪರ ಕಾಳಜಿಯನ್ನು ಇದು ಸ್ಪಷ್ಟಪಡಿಸುತ್ತದೆ.

ಬಡತನ ನಿರ್ಮೂಲನೆಗೆ ಆದ್ಯತೆ ಕೊಟ್ಟ ಅರಸು ಅಧಿಕಾರಾವಧಿಯಲ್ಲಿ ಕೂಲಿಕಾರ್ಮಿಕರಿಗೆ ಕನಿಷ್ಠ ಕೂಲಿ, ಋಣ ಪರಿಹಾರ, ಜನತಾ ಮನೆಗಳ ನಿರ್ಮಾಣ ಯೋಜನೆ, ಭಾಗ್ಯ ಜ್ಯೋತಿ, ವೃದ್ಧಾಪ್ಯ ವೇತನ ಈ ಎಲ್ಲಾ ಯೋಜನೆಗಳನ್ನು ಕೈಗೊಳ್ಳಲಾಯಿತು. ವಿದ್ಯಾರ್ಥಿ ಸಮೂಹವನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದ ಅರಸು ನಿರುದ್ಯೋಗಿಗಳಿಗೆ ತಾತ್ಕಾಲಿಕ ಅನುಕೂಲವಾಗಲೆಂದು ಸ್ಟೈಫಂಡರಿ ಯೋಜನೆ ಜಾರಿಗೆ ತಂದರು. ಶಿಕ್ಷಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಶಿಷ್ಯ ವೇತನ, ಶುಲ್ಕ

ರಿಯಾಯಿತಿ, ಉಚಿತ ಊಟದ ವ್ಯವಸ್ಥೆಗಳನ್ನು ಒದಗಿಸಿಕೊಟ್ಟು, ಬಡವರ ವಿಧ್ಯಾಭ್ಯಾಸಕ್ಕೆ ನೆರವಾದರು. ಈ ಕಾರಣದಿಂದಾಗಿ ಇವರ ಕಾಲದಲ್ಲಿ ವಿಶೇಷವಾಗಿ ದಲಿತರನ್ನು 'ಗೌರ್ನಮೆಂಟ್ ಬ್ರಾಹ್ಮಣ'ನೆಂದು ಕರೆಯುವ ಮಟ್ಟಕ್ಕೆ ಪ್ರಚಾರ ಪಡೆಯಿತು.

ಡಿ. ದೇವರಾಜ ಅರಸುರವರು ಆಡಳಿತಾವಧಿಯ ಇನ್ನೊಂದು ಮಹತ್ವದ ಘಟನೆಯೆಂದರೆ 1973 ರಲ್ಲಿ ನಡೆದ ಬಿ. ಬಸವಲಿಂಗಪ್ಪನವರ ಬೂಸಾ ಪ್ರಕರಣವನ್ನು ಕಾಣಬಹುದು. ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡು ಜಾಗೃತರಾದರು. ಬಸವಲಿಂಗಪ್ಪನವರ ಪ್ರಕರಣದಿಂದ ವಿದ್ಯಾವಂತರು, ಪ್ರಜ್ಞಾವಂತರು, ಪ್ರಗತಿಪರರು, ವೈಚಾರಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ತಮ್ಮ ಸೃಜನಶೀಲ ಕ್ರಿಯೆಗಳಿಗೆ ಪರೋಕ್ಷವಾಗಿ ಚಾಲನೆ ಪಡೆದುಕೊಂಡಿದ್ದು ಮುಖ್ಯವಾಗುತ್ತದೆ. ಈ ಘಟನೆಯಿಂದ ದಲಿತ ವರ್ಗಗಳೂ ಎಚ್ಚರಗೊಂಡದ್ದನ್ನು ಕಾಣಬಹುದು. 1973 ರಲ್ಲಿ ಸಚಿವರಾದ ಬಸವಲಿಂಗಪ್ಪ ಅಂಬೇಡ್ಕರ ಸ್ಕೂಲ್ ಆಫ್ ತಾಟ್ ಸಂಸ್ಥೆ ಮೈಸೂರಿನಲ್ಲಿ ಏರ್ಪಡಿಸಿದ ವಿಚಾರ ಸಂಕೀರ್ಣದಲ್ಲಿ ಏನು ಕನ್ನಡ ಕನ್ನಡ ಅಂತ ಬಡ್‌ಕೋತಿವಿ ಕನ್ನಡ ಸಾಹಿತ್ಯದಲ್ಲಿ ಅವರ ಬರಹಗಳೆನಿದ್ದರು ಬೂಸ ಇದ್ದಂಗೆ. ಇಂಗ್ಲೀಷ್ ಬರಹಗಳಿರುವ ಪ್ರೌಢಿಮೆ ಇಲ್ಲದ ಇವರ ಬರಹಗಳೇನಿದ್ದರು ದನ ತಿನ್ನೋಕೆ ಲಾಯಕ್ಕು ಎಂದು ತೆಗಳಿ ವೈಚಾರಿಕ ಪ್ರಗತಿಪರ ವಿಚಾರಗಳನ್ನು ಓದಬೇಕೆಂದು ಕರೆಕೊಟ್ಟರು. ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾಗಿದರು. ಮಾರನೆ ದಿನ ಪತ್ರಿಕೆ ಮುಖಪುಟಗಳಲ್ಲಿ ಬಸವಲಿಂಗಪ್ಪನವರ ಭಾಷಣವನ್ನು ತಿರುಚಿ ಕನ್ನಡ ಸಾಹಿತ್ಯ ಬೂಸಾ ಸಚಿವ ಬಸವಲಿಂಗಪ್ಪ ಎಂಬ ಶೀರ್ಷಿಕೆಯಲ್ಲಿ ಪ್ರಕಟಣೆಗೊಳಿಸಿದರು.

ಲೋಹಿಯವಾದಿಗಳು ಪ್ರಗತಿಪರ ಚಿಂತಕರು ಸೇರಿ 1973 ರಲ್ಲಿ ಮೈಸೂರಿನಲ್ಲಿ ಜಾತಿ ವಿನಾಶ ಸಮ್ಮೇಳನ ನಡೆಸಿದ್ದರು. ಇದರಲ್ಲಿ ಲಂಕೇಶ್, ಪೂರ್ಣಚಂದ್ರತೇಜಸ್ವಿ, ರಾಮದಾಸ, ಶ್ರೀಕೃಷ್ಣ ಆಲನಹಳ್ಳಿ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ ಮುಂತಾದವರು ಭಾಗವಹಿಸಿದ್ದರು. ಈ ನಿಟ್ಟಿನಲ್ಲಿ ತೇಜಸ್ವಿ 1973 ರಲ್ಲಿ ಅಬಚೂರಿನ ಪೋಸ್ಟ್ ಆಫೀಸ್ ಕಥಾ ಸಂಕಲನ ಹೊರತರುವ ಮೂಲಕ ಅದರ ಮುನ್ನುಡಿಯು ಹೊಸ ದಿಗಂತದೊಡನೆ ನುಡಿಗಳಲ್ಲಿ ಘೋಷಿಸಿ ಕೊಂಡರು. 1973 ರಲ್ಲಿ ದೇವನೂರರ 'ದ್ಯಾವನೂರು' ಕಥಾ ಸಂಕಲನ ಹೊರ ಬಂದಿತ್ತು. ಹಾಗೆಯೆ ಸರಿ ಸುಮಾರು ಇದೇ ಕಾಲಕ್ಕೆ ಕವಿ ಸಿದ್ಧಲಿಂಗಯ್ಯನವರು 'ಹೊಲೆ ಮಾದಿಗರ ಹಾಡು'ಗಳು ಕವನ ಸಂಕಲನ ಹೊರಬಂದಿತ್ತು. ಈ ಮೂಲಕ ಶೂದ್ರ ಸಾಹಿತ್ಯ ಚಳುವಳಿ ಹೆಸರಿನಲ್ಲಿ 1974 ರಲ್ಲಿ ಸಮ್ಮೇಳನ ನಡೆಯಿತು. ಜಿ.ಎಸ್ ಶಿವರುದ್ರಪ್ಪ, ಪೂರ್ಣ ಚಂದ್ರತೇಜಸ್ವಿ, ಚಂದ್ರಶೇಖರ ಪಾಟೀಲ, ಪಿ. ಲಂಕೇಶ್, ಎಂ.ಪಿ ನಂಜುಂಡಸ್ವಾಮಿ, ಸಿದ್ದಲಿಂಗಯ್ಯ, ಪಟ್ಟಣ ಶೆಟ್ಟಿ, ದೇವನೂರ ಮಹಾದೇವರರು ಭಾಗವಹಿಸಿದರು. ಈ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯ ತನ್ನ ನೆಲೆಯನ್ನು ಪ್ರಚಾರ ಪಡಿಸಿಕೊಳ್ಳುತ್ತಿತ್ತು. ಇದಕ್ಕೆ ಪೂರಕವಾಗಿ 'ದಲಿತ ಸಂಘರ್ಷ ಸಮಿತಿ' ಇವರು ರಚಿಸಿದ ಕಾವ್ಯ ವೈಚಾರಿಕ ಬರವಣಿಗೆಗಳನ್ನು ದಲಿತಕಲಾ

ಮಂಡಳಿಯ ಕಾರ್ಯ ಕ್ರಮಗಳ ಮೂಲಕ ಅನಾವರಣಗೊಳಿಸತೊಡಗಿತು. ಈ ರೀತಿಯಲ್ಲಿ ದಲಿತ ಈಸಂರ್ಭ ಸಾಹಿತಿ ಕಲಾವಿದರಿಗೆ, ಸಾಹಿತಿಗೆ ಪ್ರೋತ್ಸಾಹದಾಯಕವಾಗಿ ಕೆಲಸ ಮಾಡತೊಡಗಿತ್ತು.

ಕನ್ನಡ ಕಥಾಸಾಹಿತ್ಯ ಲೋಕಕ್ಕೆ ದಲಿತ ಬಂಡಾಯ ಕಥಾ ಸಾಹಿತ್ಯದ ಕೊಡುಗೆ ವೈಶಿಷ್ಟ ಪೂರ್ಣವಾದದು ಎಂಬುದನ್ನು ಹೇಳಬಹುದಾದರು ವಾಸ್ತವವಾಗಿ ನಮ್ಮ ಕಥಾ ಸಾಹಿತ್ಯದ ವ್ಯಾಪ್ತಿಯನ್ನು ಅದು ಅಪೂರ್ವವಾಗಿ ವಿಸ್ತರಿಸಿರುವುದು ಮಾತ್ರವಲ್ಲದೆ ಇಡೀ ಬದುಕಿನ ಸಾಧ್ಯತೆಗಳನ್ನು ಅದು ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ದಲಿತ ಸಾಧ್ಯತೆಗಳನ್ನು ಅದು ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ದಲಿತ ಬಂಡಾಯ ಕಥಾಸಾಹಿತ್ಯದ ಪ್ರಮುಖ ಲೇಖಕರಾದ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಮುಳ್ಳುರು ನಾಗರಾಜ, ಕರಿಗೌಡ ಬೀಚನಹಳ್ಳಿ, ಅರವಿಂದ ಮಾಲಗತ್ತಿ, ಕಾ.ತ ಚಿಕ್ಕಣ್ಣ, ರಾಜಶೇಖರ, ನೀರಮಾನ್ವಿ ಮುಂತಾದವರು ಪ್ರತಿಭಾವಂತ ಲೇಖಕರು ದಲಿತ ಬಂಡಾಯ ಕಥಾ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿರುವುದನ್ನು ಕಾಣುತ್ತೇವೆ.

ಇದೆ ಸಂದರ್ಭದಲ್ಲಿ ಡಾ॥ ಬೆಸಗರ ಹಳ್ಳಿ ರಾಮಣ್ಣನವರ ಕಥೆಗಳನ್ನು ಗುರುತಿಸಬಹುದು ದಲಿತ ಬಂಡಾಯ ಚಳವಳಿಯೊಡನೆ ಬೆಸಗರಹಳ್ಳಿಯವರು ನೇರವಾದ ಸಂಪರ್ಕವನ್ನು ಹೊಂದಿಲ್ಲದಿದ್ದರೂ ಇವರ ಕತೆಗಳಲ್ಲಿ ಈ ಚಳುವಳಿಯ ಅನೇಕ ವಿಚಾರಗಳು, ಆಶಯಗಳು ಮೂಡಿ ಬಂದಿರುವುದನ್ನು ಕಾಣಬಹುದಾಗಿದೆ. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಜೀತಗಾರರ ಬವಣೆ, ರಾಜಕೀಯ ಭ್ರಷ್ಟತೆಯ ವಿಡಂಬನೆ, ಗೌಡರ ದಬ್ಬಾಳಿಕೆ, ಪ್ರತಿಭಟನೆ ಈ ಎಲ್ಲಾ ವಿಚಾರಗಳನ್ನು ಇವರ ಕತೆಗಳಲ್ಲಿ ಕಾಣಲು ಸಾಧ್ಯವಾಗುತ್ತದೆ. ದಲಿತ ಬಂಡಾಯ ಕಥಾಸಾಹಿತ್ಯದಲ್ಲಿ ವ್ಯಕ್ತವಾದ ಸಮಕಾಲೀನ ಜೀವನ ಮೌಲ್ಯಗಳು, ನಂಬಿಕೆಗಳು, ಆಲೋಚನೆಗಳು ಇವೆಲ್ಲವನ್ನು ಕುರಿತಂತೆ ಅಭಿಪ್ರಾಯಗಳನ್ನು ಕಂಡುಕೊಂಡ ಸತ್ಯಗಳನ್ನು ಬಂಡಾಯದ ಸಾಹಿತ್ಯದಲ್ಲಿ ದಾಖಲಿಸ ಬಹುದಾಗಿದೆ. " ಬರೆಯುವುದೇ ಬಂಡಾಯ" ಎಂದು ಪ್ರೊ.ಬರಗೂರರು ಹೇಳಿದ್ದಾರೆ. ದಲಿತ ಬಂಡಾಯದಲ್ಲಿ ವ್ಯಕ್ತವಾದ ಬಂಡಾಯದ ಧೋರಣೆ ಕೇವಲ ದಲಿತ ಬಂಡಾಯದ ಸಂದರ್ಭದಲ್ಲಿ ಮಾತ್ರವಲ್ಲದೇ ಈ ಶತಮಾನದ ನಾಲ್ಕು ಸಾಹಿತ್ಯದ ಘಟ್ಟಗಳಲ್ಲಿ ಅಂದರೆ ನವೋದಯ, ಪ್ರಗತಿಶೀಲ, ನವ್ಯ ಇವುಗಳಲ್ಲಿ. ಅಲ್ಲಲ್ಲಿ ಪ್ರತಿಭಟಿಸಿದವರ ಪರಿಪೂರ್ಣ ಫಲವೇ ಆಗಿದೆ ಎಂಬುದನ್ನು ನೆನಪಿಡಬೇಕಾಗುತ್ತದೆ. ಬಂಡಾಯ ಸಾಹಿತ್ಯದ ಪ್ರೇರಣೆ ಪಡೆಯಲು ಅರಸು ಅನೇಕ ಯೋಜನೆಗಳನ್ನು ಬಡತನ ನಿರ್ಮೂಲನೆಗಾಗಿ ಜಾರಿಗೆ ತಂದರು. ಇದರಿಂದ ಅರಸುರವರ ಆಳ್ವಿಕೆಯ ಕಾಲದಲ್ಲಿ ಚಿಂತನೆಗಳಿಗೆ ಹೆಚ್ಚು ಪ್ರೋತ್ಸಾಹ ಸಿಕ್ಕಿತು.

1979 ಮಾರ್ಚ್ 10 ರಂದು ಸಾಹಿತ್ಯ ಪರಿಷತ್ತು ಧರ್ಮಸ್ಥಳದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನವ್ಯಕವಿ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ನಡೆಸಲು ಸಿದ್ಧತೆ ನಡೆಸಿತ್ತು. ಈ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಗೋಷ್ಠಿ ಇಡಬೇಕೆಂದು ಅಗ್ರಹಪಡಿಸಿದಾಗ ಪರಿಷತ್ತು ನಿರಾಕರಿಸುತ್ತದೆ.

ಇದರಿಂದ ಬಂಡೆದ್ದ ದಲಿತ ಪ್ರಗತಿಪರ ಸಾಹಿತಿಗಳು ಕಲಾವಿದರು ಪರ್ಯಾಯವಾಗಿ ಬೆಂಗಳೂರಿನಲ್ಲಿ ಸಂಘಟನೆಗೊಂಡು 1979 ರ ಮಾರ್ಚ್ 10 ರಂದು "ಬಂಡಾಯ ಸಾಹಿತ್ಯ ಸಮ್ಮೇಳನ" ಎಂಬ ಹೆಸರಿನಲ್ಲಿ ಸಮ್ಮೇಳನವನ್ನು ನಡೆಸಿದರು. ಈ ಸಮ್ಮೇಳನಕ್ಕೆ ತೆಲುಗಿನ ಪ್ರಸಿದ್ಧ ಕ್ರಾಂತಿಕಾರಿ ಕವಿ ಶ್ರೀ ಶ್ರೀ ಅವರು, ಮರಾಠಿ ಲೇಖಕ ಮತ್ತು ಕಮ್ಯೂನಿಸ್ಟ್ ಧೋರಣೆಯ ಗೋದಾವರಿ ಪರುಳೇಕರ್ ಭಾಗವಹಿಸಿ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

1979 ರಲ್ಲಿ "ಬಂಡಾಯ ಸಾಹಿತ್ಯ ಸಂಘಟನೆ" ಚಳವಳಿರೂಪ ತಳೆಯಿತು ಇದರ ಮುಂದಾಳುಗಳಾಗಿ ಡಿ.ಆರ್ ನಾಗರಾಜ್, ಬರಗೂರು ರಾಮಚಂದ್ರಪ್ಪ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಚೆನ್ನಣ್ಣ, ವಾಲೀಕಾರ, ಚಂದ್ರಶೇಖರ ಪಾಟೀಲ, ಅಲ್ಲಮ ಪ್ರಭು, ವೆಂಕಟರಾಮಯ್ಯ, ಶಿವರಾಂ, ಕಾಡನಕುಪ್ಪೆ, ಬಿ.ಟಿ ಲಲಿತಾನಾಯಕ, ಎಲ್. ಹನುಮಂತಯ್ಯ ಮುಂತಾದವರು ಸೇರಿಕೊಂಡರು.

ಬಂಡಾಯ ಸಾಹಿತ್ಯವು ಈ ಸಿದ್ದ ವ್ಯವಸ್ಥೆಯನ್ನು ಪ್ರಶ್ನಿಸಿತು. ಮನುಷ್ಯನಿಗಿರಬೇಕಾದ ಪ್ರಜ್ಞಾವಂತ ಸ್ಥಿತಿಯನ್ನು ಮುಚ್ಚಿಹಾಕಿ ಅಲ್ಲಿ ಪೂಜ್ಯತೆಯನ್ನು ಸ್ಥಾಪಿಸಲಾಗಿತ್ತು. ಸಂಪ್ರದಾಯದ, ಸಂಸ್ಕೃತಿ, ಧರ್ಮ, ದೇವರು ಈ ಎಲ್ಲವೂ ಕೆಳವರ್ಗದ ಜನರನ್ನು ಒಂದು ರೀತಿಯಲ್ಲಿ ನಿಯಂತ್ರಿಸಬಲ್ಲ ಪ್ರಭಾವಭರಿತ ಹಾಗೂ ಪರಿಣಾಮಕಾರಿ ಅಸ್ತ್ರಗಳಾಗಿದ್ದವು. ಈ ಸಂದರ್ಭದಲ್ಲಿ ದಲಿತ ಬಂಡಾಯ ಕಥಾಸಾಹಿತ್ಯಕ್ಕೆ ಅನೇಕರು ನೀಡಿದ ಕೊಡುಗೆಯೂ ವಿಶಿಷ್ಟವಾದದ್ದು ಎಂಬುದರಲ್ಲಿ ಸಂದೇಹವಿಲ್ಲ. ಮಹಿಳೆಯರೂ ಈ ನಿಟ್ಟಿನಲ್ಲಿ ಬರೆದರು. ಉದಾ: ಬಿ.ಟಿ ಲಲಿತಾನಾಯಕ್ ಮತ್ತು ವೀಣಾಶಾಂತೇಶ್ವರಿ. ಅದೇ ವೇಳೆಯಲ್ಲಿ ಗಮನಿಸಬೇಕಾದ ಇನ್ನೊಂದು ವೈಶಿಷ್ಟ್ಯವೆಂದರೆ ದಲಿತ ಬಂಡಾಯ ಕಥಾಸಾಹಿತ್ಯಕ್ಕೆ ಮುಸ್ಲಿಂ ಲೇಖಕರ ಕೊಡುಗೆ ವಿನೂತನವಾದದ್ದು ಮಾತ್ರವಲ್ಲದೇ ಅಪೂರ್ವವಾದದ್ದು ಎಂತಲೂ ಹೇಳಬಹುದು. ಏಕೆಂದರೆ ಇದೇ ಸಂದರ್ಭದಲ್ಲಿ ಮುಸ್ಲಿಂ ಜೀವನಾನುಭವ ತನ್ನೆಲ್ಲಾ ಸಾಧ್ಯತೆಗಳೊಂದಿಗೆ ಇಷ್ಟೊಂದು ಪ್ರಮಾಣದಲ್ಲಿ ನಮ್ಮ ಭಾಷೆಯಲ್ಲಿ ರೂಪಾಧರಣೆ ಮಾಡಿದ್ದೆ ಇದೆ ಮೊದಲನೆಯದಾಗಿ ಎಂದು ತೋರುತ್ತವೆ. ಎಪ್ಪತ್ತರ ದಶಕದಿಂದ ಆರಂಭವಾದ ಈ ಚಳವಳಿ ಮುಖ್ಯ ಪ್ರಣಾಳಿಕೆಗಳಿಂದ ಯಾವುದೇ ರೀತಿಯ ಮುಜುಗರವನ್ನು ತೊರೆದು ತಾನು ಬದುಕಿದ ಅಥವಾ ಬದುಕುತ್ತಿರುವ ಸಮಾಜದ ವ್ಯವಸ್ಥೆಯ ಬಗೆಗೆ ತನ್ನ ಕತೆಗಳ ಮುಖಾಂತರ ಮಾತನಾಡುವುದು ಸಾಧ್ಯವಾಯಿತು. ತನ್ಮೂಲಕ ತಮ್ಮನ್ನು ಕಂಡುಕೊಳ್ಳುವಂತಾಯಿತು. ಹೀಗೆ ದಲಿತ ಬಂಡಾಯ ಕನ್ನಡ ಸಾಹಿತ್ಯಕ್ಕೆ ಹೇಗೆ ಕೊಡುಗೆಯನ್ನು ನೀಡಿದೆ ಎಂಬುದನ್ನು ಹೀಗೆ ತಿಳಿಯಬಹುದಾಗಿದೆ. ದಲಿತರ ಬದುಕು ಸಾಹಿತ್ಯದಲ್ಲಿ ಪ್ರವೇಶವನ್ನು ಪಡೆದಿದ್ದು ಮತ್ತು ಅದುವರೆಗೂ ಇವರನ್ನು ಶೋಷಿಸಿದ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯನ್ನು ತೋರಿಸಿದ್ದು ಇದರ ಮುಖ್ಯವಾದ ಭಾಗವಾಯಿತು. ಇದರ ಹಿಂದೆ ಇದ್ದದ್ದು ಜೀವಪರ ಕಾಳಜಿ, ಮಾನವಪರ ಕಾಳಜಿ. ಈ ನಿಟ್ಟಿನಲ್ಲಿ ಬರೆದ ಅನೇಕ ಕವಿಗಳ ಸಾಲಿನಲ್ಲಿ ಕುಂ.ವೀ ಯವರನ್ನು ಗುರುತಿಸುವ ಅಗತ್ಯವಿದೆ.

ಕುಂ.ವೀ ಅವರು ಕೊಟ್ಟೂರಿನಲ್ಲಿ ಜನಿಸಿದರೂ ಆಂಧ್ರದ ಊರೊಂದರಲ್ಲಿ ವಾಸ ಮಾಡಿದರು. ಶಿಕ್ಷಕರಾಗಿ ಕೆಲಸ ಮಾಡುತ್ತಲೇ ಅಲ್ಲಿನ ಜಮಿನ್ದಾರಿ ಪದ್ದತಿ, ಜಾತಿವ್ಯವಸ್ಥೆಯ ಕರಾಳ ಹಸ್ತಕ್ಕೆ ಸಿಲುಕಿದ ಜನರ ಅಸಹಾಯಕತೆ ಇವುಗಳನ್ನು ಹತ್ತಿರದಿಂದಲೇ ಕಂಡವರು. ಅದ್ದರಿಂದಲೇ ಹೆಚ್ಚು ವಸ್ತುನಿಷ್ಠವಾಗಿ ಬರೆಯಬಲ್ಲರು. ಕುಂ.ವೀ ಅವರು ಕಥೆಗಳಲ್ಲಿ ಬಂಡಾಯದ ಸ್ವರೂಪವನ್ನು ವಿಶೇಷವಾಗಿ ಕಾಣುತ್ತೇವೆ. ಇವರ ಕಥೆಗಳಲ್ಲಿ ಹೆಚ್ಚಾಗಿ ಹಸಿವಿನಿಂದ ನೊಂದವರನ್ನು ಕಾಣುತ್ತೇವೆ. ಉದಾ: ರೊಣ್ಣಿ, ಕಿವುಡ, ಕತ್ತಲ, ಬಸವ ಇತ್ಯಾದಿ ಇವರು ತನ್ನ ಹಸಿವನ್ನು ನಿವಾರಿಸಲು ಮೇಲ್‌ವರ್ಗದವರ ಕೆಳಗೆ ಕೆಲಸ ಮಾಡಿದ್ದರೂ ತಮ್ಮ ಕೂಲಿ, ಹೊಟ್ಟೆಗೆ ಅನ್ನ ಸಿಗದಿದ್ದಾಗ ಪ್ರತಿಭಟನೆಯ ದಾರಿಗೆ ಇಳಿಯುವ ಪ್ರಸಂಗವನ್ನು ಕಾಣುತ್ತೇವೆ. ಇವರ ಕತೆಗಳಲ್ಲಿ ದಲಿತರಿಗೆ ಆಗುತ್ತಿರುವ ಅನ್ಯಾಯವನ್ನು ಮತ್ತು ಅದರ ಪರಿಣಾಮವಾಗಿ ಏಳುವ ಬಂಡಾಯದ ಪ್ರಸಂಗವನ್ನು ಕಾಣುತ್ತೇವೆ. ಜಾತಿಪದ್ದತಿಯ ಮಹಾನ್ ಸಮಸ್ಯೆ ಇಲ್ಲಿದೆ. ದಲಿತ ಹೆಣ್ಣುಗಳನ್ನು ಶೋಷಿಸುವ ಬಲಿಷ್ಠರ ದುಷ್ಟತನ ಇಲ್ಲಿದೆ. ಎತ್ತು, ಎಮ್ಮೆ, ನಾಯಿ, ಕಾಗೆ ಇತ್ಯಾದಿ. ಪ್ರಾಣಿಗಳಿಗೆ ಇರುವ ಮರ್ಯಾದೆ ದಲಿತರಿಗೆ ಇಲ್ಲ. ಇವರು ಗೌಡರ ಮನೆಯಲ್ಲಿ ಎಲ್ಲಾ ಕೆಲಸವನ್ನು ಮಾಡಿದರೂ ಹಸಿವನ್ನು ನಿವಾರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಂತಹ ವೈರುಧ್ಯದ ಸಂಗತಿಗಳನ್ನು ಇಲ್ಲಿ ಕಾಣಬಹುದಾಗಿದೆ.

ಇವರ ಬಂಡಾಯ ಸಂಪ್ರದಾಯದ ವಿರುದ್ಧವಾಗಿ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಆದರೆ ಕೇವಲ ಇದು ಮಾತ್ರವಾಗಿರದೆ ಒಟ್ಟು ವ್ಯವಸ್ಥೆಯ ಕುರಿತು ಇವರಿಗಿರುವ ಅಸಹನೆಯೇ ಪ್ರತಿಭಟನೆಯಾಗಿ ರೂಪುಗೊಳ್ಳುತ್ತದೆ.

ಕತ್ತಲನು ತ್ರಿಶೂಲ ಹಿಡಿದ ಕಥೆ

ಅಸಹಾಯಕನ ಹಸಿವೇ ಅಂತಿಮವಾಗಿ ಅವನು ಸ್ಫೋಟಗೊಳ್ಳಲು ಕಾರಣವಾಗುವುದೇ ಈ ಕತೆಯ ವಸ್ತು. ಈ ಕತೆಯಲ್ಲಿ ಬರುವ ಮುಖ್ಯ ಪಾತ್ರ ಕತ್ತಲ. ಕತ್ತಲನಿಗೆ ಇಬ್ಬರು ಮಕ್ಕಳು. ದ್ಯಾಮಿ, ಸಿದ್ದಿ ಹಳ್ಳಿಯನ್ನು ಬಿಟ್ಟು ಪೇಟೆಗೆ ಹೋಗಿದ್ದಾರೆ. ಕಾರಣ ಬಡತನ, ಹಸಿವು. ಹೊಟ್ಟೆ ತಾಪ ತ್ರಯ ನಿವಾರಿಸಿಕೊಳ್ಳಲು ಮನೆ ಬಿಟ್ಟು ಪಟ್ಟಣಕ್ಕೆ ಹೋಗಿ ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕತ್ತಲ ಇಳಿಯವಯಸ್ಸಿನವರೆಗೂ ಗೌಡರ ಮನೆಗಾಗಿ ದುಡಿದವನು. ಈಗ ಕೈಲಾಗದವನೆಂದು ಅವನನ್ನು ಕೆಲಸಕ್ಕೆ ಕರೆಯುತ್ತಿಲ್ಲ. ಅನ್ನಕ್ಕೂ 'ತತ್ವಾರ' ಎಂಬ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಒಳ್ಳೆಯುಗಾದಿ ಹಬ್ಬದ ದಿನ ಹಸಿದ ಕತ್ತಲ ಗೌಡರ ಮನೆಕಡೆ ಏನಾದರು ಸಿಗಬಹುದೆಂಬ ಆಸೆಯಿಂದ ಹೋಗುತ್ತಿದ್ದಾನೆ. ಅವನು ಏಳು ಬಾವಿಗಳ ತೋಪನ್ನು ನೆನಸಿಕೊಳ್ಳುತ್ತಾನೆ. ಬಾವಿಗೆ ಬಿದ್ದು ಸಾಯುವ ಆಲೋಚನೆಯಿಂದ ಬಾವಿಯ ಕಡೆ ಹೋಗುತ್ತಾನೆ. ಆದರೆ ಅದು ಸರಿಯಲ್ಲ ಎಂದುಕೊಳ್ಳುತ್ತಾನೆ. ಬದುಕಿಗಿಂತ ಸಾವೇ ಮೇಲು ಎಂದು ಕತ್ತಲನಿಗೆ ಅನಿಸುವುದಾದರೆ ಆ ಬದುಕು ಎಷ್ಟು ಭೀಕರವಾಗಿದೆ ಎಂಬುದನ್ನು ಇಲ್ಲಿ ಗ್ರಹಿಸಬೇಕಾಗಿದೆ.

ಕತ್ತಲ ನೆಲದ ಒಳಗಡೆ ಕೊತ ಕೊತ ಕುದಿಯುತ್ತಿರುವ ಲಾವರಸ ಒಂದಲ್ಲಾ ಒಂದು ದಿನ ಮೇಲುಕ್ಕಿ ಡೊಳ್ಳು ಹೊಟ್ಟೆಗಳನ್ನು ಕಲ್ಲಿನ ಮನೆಗಳನ್ನು ತಿಜೋರಿಗಳನ್ನು ಪೀತಾಂಬರ ಸೀರೆಗಳನ್ನು ನುಂಗಿ ಬಿಡುತ್ತದೆ ಎಂದು ಅರಿವಾಗುವುದು ಕತ್ತಲನ ಹಸಿವು ನೋಡಿದ ಮೇಲೆಯೇ. ನೊಂದ ಜೀವದ ಸಹನೆಗೂ ಮಿತಿಯಿದೆ. ಅಂತಿಮವಾಗಿ ಒಂದು ದಿನ ಸಿಡಿಯಲೇ ಬೇಕು. ಕುವೆಂಪುರವರ 'ಕಲಿಯುಗದಂತ್ಯಕೆ ಅವನೆ ಕಲ್ಕಿ....." ಅಂದರೆ ಬಡತನ, ಅಸಹನೆಯೇ ಕೊನೆಗೆ ಅಸಮಾನತೆಯ ವಿರುದ್ಧ ಸಿಡಿದು ನಿಂತು ಬಂಡೇಳುತ್ತವೆ ಎಂಬ ಮಾತನ್ನು ಇಲ್ಲಿ ಕುವೆಂಪುರವರು ಹೇಳುತ್ತಾರೆ. ಕುಂ.ವೀ ಯವರು ಕತ್ತಲನ ಮನಸ್ಥಿತಿ ಮುಂದೆ ತಳೆಯಬಹುದಾದ ನಿಲುವನ್ನು ಅಸ್ಫೋಟಿಸಬಹುದಾದ ಸಂದರ್ಭವನ್ನು ಮೇಲಿನ ವಿವರಣೆ ಸ್ಪಷ್ಟಪಡಿಸುತ್ತದೆ.

ಗೌಡರ ಮನೆಯ ಅಂಗಳದ ದನದ ಕೊಟ್ಟಿಗೆ, ತಿಪ್ಪೆ, ಸಗಣಿ, ಪುಟ್ಟಿ ಇವುಗಳ ಜೊತೆಗೆ ಮನೆಯ ಪ್ರತಿಯೊಬ್ಬರ ಚಪ್ಪಲಿ, ದನಕರುಗಳ ಪರಿಚಯ ಕತ್ತಲನಿಗೆ. ಅರ್ಜಿ ಅಂದಕೂಡಲೆ ಓಡಿ ಬರುತ್ತಿತ್ತು ಹೋರಿ, ಸೆಗಣಿ, ಪುಟ್ಟಿಗಳ ತಳಕ್ಕೆ ಕಟ್ಟಿದ್ದು ಹೀಗೆ ಕತ್ತಲನು ಗೌಡರ ಮನೆಯಲ್ಲಿ ಕೆಲಸ ಮಾಡುತ್ತಿದ್ದನು.

ಉಗಾದಿಯ ಹಬ್ಬದ ದಿನ ಇವನಿಗೆ ಕೆಟ್ಟ ಹಸಿವು ಈಗೇನಾದರೂ ಈ ಸಂದರ್ಭದಲ್ಲಿ ತಾನೇನು ಮಾಡುತ್ತಿದ್ದೆ ಎಂದು ಯೋಚಿಸುತ್ತಾನೆ. ಕತ್ತಲ ಗೌಡರ ಮನೆಯಲ್ಲಿದಿದ್ದರೆ ಎಮ್ಮೆಗಳ ಮತ್ತಿತರ ಹಸುಗಳ ಮೈ ತೊಳೆಯುತ್ತಿದ್ದ. ಕಲಗಚ್ಚು ತಿನ್ನಿಸುತ್ತಿದ್ದ. ಮಾವಿನೆಲೆ ತೋರಣಕಟ್ಟಿ ಅವರಿವರ ಮುಖ ನೋಡುತ್ತಿದ್ದ. ಗೌಡತಿಯ ಅಡುಗೆ ಮನೆಯಲ್ಲಿ ಸಾರಿಗೆ ಒಗ್ಗರಣೆ ಹಾಕಿದರೆ ಘಾಟು ವಾಸನೆಗೆ

ಮೂಗು ಅರಳಿಸುತ್ತಿತ್ತು. ಹೀಗೆ ಕತ್ತಲನು ಗೌಡರ ಮನೆಯಲ್ಲಿ ಉಗಾದಿ ಹಬ್ಬದ ಸಂಭ್ರಮವನ್ನು ತನ್ನ ಹಸಿವನ್ನು ಅಡುಗೆಯ ಪರಿಮಳದ ಮೂಲಕವೇ ಸಮಾಧಾನಿಸಿಕೊಳ್ಳತ್ತಿದ್ದನು. ಇಲ್ಲಿ ಕತ್ತಲ ಗೌಡರ ಮನೆಯಲ್ಲಿ ಹಬ್ಬದ ಊಟ ಸಿಗುತ್ತದೆ ಎಂದು ಆಸೆಯಿಂದ ಅವರ ಮನೆ ಕಡೆ ಬರುತ್ತಿದ್ದಾನೆ.

ಕಾಗೆಗಳು ಒಂದೆ ಸಮನೆ ಮೊರೆಯುತ್ತಿರುವುದನ್ನು ತಲೆ ಎತ್ತಿ ನೋಡಿದ. ಅವುಗಳ ಮೈಯೊಳಗೆ ಎಂಥದೊ ಕಸುವು ಅವುಗಳ ಮುಖಗಳಲ್ಲಿ ಬಿರಿಯುವ ಕೊಕ್ಕುಗಳಲ್ಲಿ ಎಂಥದೋ ಉತ್ಸಾಹ, ಕಳೆ ಪೂಜೆ ಗೀಜೆ ಮಾಡಿ ಮಾಳಿಗೆ ಮೇಲೆ ಎಸೆಯುವ ಎಂಜಲಿಗಾಗಿ ಅವುಗಳ ಹಾರಾಟ, ಗುದ್ದಾಟ ತಾನು ಒಂದು ಕಾಗೆಯಾಗಿದ್ದರೆ ಕುಪ್ಪಳಿಸಬಹುದಿತ್ತು ಎಂದು ಹೇಳುತ್ತಾನೆ. ಇಲ್ಲಿ ಕತ್ತಲ ಕಾಗೆಗೆ ಇರುವ ಮಾರ‍್ಯಾದೆಯನ್ನು ಕತ್ತಲನಿಗೆ ಇಲ್ಲವಲ್ಲ ಎಂದು ಯೋಚಿಸಿ ತನ್ನನ್ನು ಕಾಗೆಗೆ ಹೋಲಿಕೆ ಮಾಡಿಕೊಳ್ಳುತ್ತಾನೆ. ಜನ ಕಾಗೆಗಾದರೂ ಅನ್ನ ಎಸೆಯುತ್ತಾರೆ. ಅದನ್ನು ಪಡೆಯುವ ಆಸೆಯಿಂದ ತನ್ನ ಮುಂದೆ ಹರಡಿರುವ ಆಹಾರ ಕಂಡು ಕಾಗೆ ಕುಪ್ಪಳಿಸುತ್ತದೆ. ಆದರೆ ಪರಿಶ್ರಮಪಟ್ಟು ದುಡಿಯುವ ಶ್ರಮಿಕರಿಗೆ ಇಲ್ಲಿ ಅನ್ನ ಸಿಗದಿರುವ ಸ್ಥಿತಿ ಇಲ್ಲಿದೆ. ಗೌಡರೋಣಿ, ಕ್ವಾಂಟೆ, ಓಣಿ, ಬಣಜಿಗರ ಓಣಿ ಇವೆಲ್ಲವನ್ನು ಕತ್ತಲನು ನೆನೆಸಿಕೊಳ್ಳುತ್ತಾನೆ. ಒಂದು ಹಳ್ಳಿಯ ಜಾತಿ ಆಧಾರಿತ ವಸತಿ ವ್ಯವಸ್ಥೆಯ ಚಿತ್ರಣವನ್ನೇ ಇಲ್ಲಿ ಕುಂ.ವೀ ಕೊಡುತ್ತಾರೆ. ಕನ್ನೀರವ್ವನ ಬಾವಿ ದೇವಾನುದೇವತೆಯರು ಕಟ್ಟಿದ ತಳವಿಲ್ಲದ ಬಾವಿ. ಒಂದಲ್ಲಾ ಎಲ್ಡಲ್ಲಾ ಯೇಳು ಬಾವಿಗಳ ತೋಪನ್ನು ನೆನಸಿಕೊಳ್ಳುತ್ತಾನೆ. ಬಾರಿಕರಸಂಗ, ಬ್ಯಾಡರ ಸಣ್ಣಿ, ತಿಪ್ಪಿ ಎಲ್ಲರೂ ಬಿದ್ದಿದ್ದು ಅದೆ ಬಾವಿಯಲ್ಲೆ. ಇವೆಲ್ಲವನ್ನು ನೋಡುತ್ತಿದ್ದನು. ಗುದ್ದು ತೋಡುವ ಕೆಲಸ ತನ್ನದೆ ಆಗಿದ್ದರಿಂದ ಆ ಹೆಣಗಳನ್ನು ನೋಡಲು, ಹೆಣವಾಗಲು ಕಾರಣವಾದ ಸನ್ನಿವೇಶಗಳುನ್ನು ತಿಳಿಯಲು ಸಾಧ್ಯವಾಗಿರುತ್ತದೆ.

ಬಾಂಬ್ರು ರಾಘಪ್ಪನಿಗೆ ಕಳ್ಳ ಬಸಿರಾಗಿದ್ದ ತಿಪ್ಪಿ ಮರ್ಯಾದೆ ಹೋಗುತ್ತದೆ ಎಂದು ಬಾವಿಗೆ ಹಾರಿರುತ್ತಾಳೆ. ಹೀಗೆ ಕನ್ನೀರಪ್ಪನ ಬಾವಿಗೆ ಬಿದ್ದಿರುವುದನ್ನು ನೆನಸಿಕೊಳ್ಳುತ್ತಾನೆ. ಅಂದರೆ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾದವರ ಅನೇಕ ಚಿತ್ರಣಗಳು ಇಲ್ಲಿ ಅನಾವರಣಗೊಳ್ಳುತ್ತವೆ. ಇದಕ್ಕೆ ಕಾರಣವಾದ ಸತ್ಯಗಳೂ ಬಯಲಾಗುತ್ತವೆ. ಬಲಿಷ್ಠರ ಅಧಿಕಾರದ ಎದುರು ಕತ್ತಲ ಮೂಲೆಗೆ, ಬಾವಿಯ ತಳಕ್ಕೆ ಸೇರಿಹೋಗುವ ಎಷ್ಟೋ ಸಂಪುಟಗಳು ಕೆಲವರ ಮನದಾಳದಲ್ಲಿ ಗೌಪ್ಯವಾಗಿ ಉಳಿದು ಬಂದಿರುವುದು ಅಷ್ಟೇ ಸತ್ಯ.

'ಸಂಕಲಿ' ಕತ್ತಲನ ಹೆಂಡತಿ. ಈಕೆ ಮತ್ತು ಗೌಡರ ಜೊತೆಗಿನ ಸಂಬಂಧದಿಂದ ಇಬ್ಬರು ಮಕ್ಕಳಾಗುತ್ತಾರೆ. ಆದರೆ ಕತ್ತಲ ಆ ಮಕ್ಕಳನ್ನು ಸುಡುಗಾಡಿಗೆ ಕಳಿಸುತ್ತಾನೆ. ಹುಟ್ಟಿಸೋನು ಅವನ್ನು, ಸಾಕೋರು ನಾವು ಅಂತ ಕತ್ತಲ ಸಿಟ್ಟನ್ನು ತಡೆಯದೆ ಯಾರದೋ ಹೊಲದಲ್ಲಿ ಯಾರೋ ಬಿತ್ತಲು ಅದಕಾ ಕೊಟ್ಟಿರೊ ಮುಗೀತು ಎಂದು ಹಾಳು ನೆನಪುಗಳ ದಾಂದಲೆಯಲ್ಲಿ ಎಲ್ಲಿಗೊ ಬಂದಿದ್ದ. ಕತ್ತಲನಂತವರನ್ನು ಹೀಗೆ ಇರಿಸಿದ ಸಾಮಾಜಿಕ ವ್ಯವಸ್ಥೆ, ಭವ್ಯ ಭಾರತದ ವ್ಯವಸ್ಥೆ, ಅವನ ವೈಯ್ಯಕ್ತಿಕ ಬದುಕನ್ನು ಕಸಿದುಕೊಳ್ಳವ ಹಕ್ಕನ್ನು ಎಗ್ಗಿಲ್ಲದೆ ಪಡೆದುಕೊಂಡ ಗೌಡನಂತವರು ಬೇಕಾದಷ್ಟು ಮಂದಿ.

ಕತ್ತಲನ ಹೆಂಡತಿಯಾದ ಸಂಕಲೆಯು ಹೀಗೆ ಗೌಡನ ಪಾಲಾಗುತ್ತಾಳೆ. ಆದ್ದರಿಂದ ತನ್ನ ಪತ್ನಿ ಸಂಕಲಿ ರೂಪವಂತೆಯಾಗಿದ್ದು ಗೌಡನಿಂದ ಆಕೆಗೆ ಹುಟ್ಟಿದ ಮಕ್ಕಳನ್ನು ತನ್ನ ಮಕ್ಕಳೆಂದು ಕತ್ತಲ ಒಪ್ಪಿಕೊಳ್ಳಲಾರದೆ ಹೋಗುತ್ತಾನೆ. ಹುಟ್ಟಿದ ತಕ್ಷಣ ಆ ಮಕ್ಕಳನ್ನು ಕೊಲ್ಲುವುದರ ಮೂಲಕ ತನ್ನ ಪ್ರತಿಭಟನೆಯನ್ನ ವ್ಯಕ್ತಪಡಿಸುತ್ತಾನೆ. ಹೀಗೆ ಸಂಕಲೆಯ ಸೌಂದರ್ಯ ಹಾಳಾಗಿ ಅವಳು ನಡು ವಯಸ್ಸಿಗೆ ಬಂದ ಮೇಲೆಯೆ ಗೌಡನ ಹಿಡಿತದಿಂದ ಪಾರಾದ ಸಂಕಲೆ ಕತ್ತಲನಿಗೆ ದಕ್ಕುತ್ತಾಳೆ. ಹೀಗೆ ಕತ್ತಲನಂತಹ ತಳಸಮುದಾಯದವರ ಒಟ್ಟಾರೆ ಬದುಕು ಅದು ಅವರ ಪರಿಶ್ರಮವಾಗಿರಲಿ ಅಥವಾ ವೈಯ್ಯಕ್ತಿಕ ಬದುಕಿನ್ನಾಲ್ಲಾಗಲೀ ಉಳ್ಳವರಿಗೆ ಒತ್ತೆಯಾಗಿಸಬೇಕಾದ ಚಿತ್ರಣವನ್ನು ಕುಂ.ವೀ ಇಲ್ಲಿ ಕಟ್ಟಿಕೊಡುತ್ತಾರೆ. ಈ ಸ್ಥಿತಿಮನಮಿಡಿಯುವಂತಹದು. ಇದಕ್ಕೆ ಕಾರಣವಾದ ಶಕ್ತಿಗಳು ಸಾಮಾಜಿಕ ಅಸಮಾನತೆ, ಜಾತಿವ್ಯವಸ್ಥೆ ಇವುಗಳ ಬಗ್ಗೆ ಕತೆಗಾರರಿಗುವಷ್ಟೆ ಅಸಹನೆ ಓದುಗರಾದ ನಮಗೂ ಉಂಟಾಗುತ್ತದೆ.

ಗೌಡರ ಮನೆಯ ಮುಂದೆ ರಂಗವಲ್ಲಿ ಚುಕ್ಕಿಗಳ ಕೆಮ್ಮನೆಯ ಪರಿಮಳಮೂಗಿಗೆ ಬಡಿಯುವಂತಿತ್ತು. ಅವರು ಚೆಲ್ಲವುದರಲ್ಲಿ ತನಗೊಂದು ಹಿಡಿ ನೀಡಬಾರದ್ಯಾಕೆ ಅನ್ನಿಸಿತು. ತನಗೂ ಊಟವನ್ನು ಕೊಡಬಹುದೆಂದು ನಿರೀಕ್ಷಿಸುತ್ತಾನೆ. ನಾಯಿ ಆ ರಂಗವಲ್ಲಿ ತುಳಿಯುತ್ತಾ ಅವರ ಮನೆಯ ಒಳಗೂ ಹೋಗುತ್ತದೆ. ಆದರೆ ಅಲ್ಲಿ ನಾಯಿಗಿಂತ ಅವನನ್ನು ಕೀಳಾಗಿ ಕಾಣುವ ಪ್ರಸಂಗವನ್ನು ಕಾಣುತ್ತೇವೆ. ನಾಯಿಗಿರುವ ಭಾಗ್ಯ ತನಗಿಲ್ಲ ಎಂದು ಕೊಳ್ಳುತ್ತಾನೆ.

ಅನ್ನಕ್ಕಾಗಿ ಹುಡುಕಾಟ ಮಾಡುತ್ತಿದ್ದ ಈತನಿಗೆ ಎಲ್ಲವ್ವ ದೇವಿಗೆ ಪೂಜೆ ಮಾಡುವಾಗಿನ ಗಂಟೆ ಶಬ್ದ ಕೇಳಿ ಪ್ರಸಾದ ಸಿಗುತ್ತದೆ ಎಂದು ಹೋಗುತ್ತಾನೆ. ಇಲ್ಲಿ ಕಿವುಡ ಅನ್ನಕ್ಕಾಗಿ ಹುಡುಕಾಡುವ ಪ್ರಸಂಗವನ್ನು ಕಾಣುತ್ತೇವೆ. ಆದರೆ ಅಲ್ಲಿಯೂ ಸಹ ಕತ್ತಲನ ಹಸಿವು ನೀಗುವುದಿಲ್ಲ. ಹಿಂದೆ ನಡೆದ ಘಾಟನೆ ನೆನಪಿಸಿಕೊಳ್ಳುತ್ತಾನೆ. ಹಸಿವನ್ನು ತಡೆಯಲಾರದೆ ಕತ್ತಲ ನಾಲ್ಕು ಜೋಳದ ತೆನೆ ಮುರಿದು ತರುತ್ತಿದ್ದ. ಒಮ್ಮೆ ಸಣ್ಣಗೌಡನ ಕಣ್ಣಿಗೆ ಬಿದ್ದಾಗ ಏನು ಹೇಳಲಿ ಕತ್ತಲನ ಫಜೀತಿ ಒಂದೆ ಸಮನೆ ಬೆನ್ನಿಗೆ ಬಿದ್ದಿದ್ದವು ಹಸಿದಂಟಿನ ಹೊಡೆತಗಳು. ಹೀಗೆ ಕತ್ತಲನು ತನ್ನ ಹಸಿವೇಗೆ ಕಾರಣವಾಗಿ ಒಡೆತ ತಿಂದಿದ್ದನ್ನು ಕಾಣಬಹುದಾಗಿದೆ. ದಣಿದ ಗೌಡನೆ ಹೊಡೆಯುವುದನ್ನು ನಿಲ್ಲಿಸಿದ. ಗೌಡರ ದೌರ್ಜನ್ಯದ ಪರಮಾವಧಿ ಇದು. ಬೆಳದಾಕಿ ಭೂತಾಯಿ, ಹಸಿದೀನಿ ಅಂತ ತೆನಿ ಕುಯ್ದುದ್ದು ತಪ್ಪೆ? ಕತ್ತಲ ಈ ಮಾತನ್ನು ಎಷ್ಟೊ ಸಾರಿ ಅಂದು ಕೊಂಡಿರುವನೊ. ಕತ್ತಲನಂಥೋರು ನೂರಾರು ಮಂದಿ ಸುರಿಸಿದ ಬೆವರಿನ ರೂಪದ ರಕ್ತದಿಂದಾಗಿಯೇ ಗೌಡರ ಹೊಲಗಳು ಸೇರು ಬಿತ್ತಿದ್ದರೆ ಐದು ಪಲ್ಲ ಬೆಳೆಯುತ್ತಿರುವುದು ಎಂದು ತನ್ನ ಬದುಕಿನ ಪಡಿ ಪಾಟಲನ್ನು ನೆನೆಸಿಕೊಳ್ಳುತ್ತಾನೆ. ಗೌಡರ ಶ್ರೀಮಂತಿಕೆಗೆ ಕಾರಣ ಕತ್ತಲನಂತಹ ವ್ಯಕ್ತಿಗಳ ಪರಿಶ್ರಮ. ಆದರೆ ಅವರ ದುಡಿಮೆಗೆ ತಕ್ಕ ಪ್ರತಿಫಲ ಕೂಲಿ ಕೊಡದೆ ಇದ್ದಾಗ ಅವರ ಅಗತ್ಯಗಳಿಗಾಗಿ ಕೊನೆಗೆ ಹಸಿವನ್ನು ನೀಗಿಸಿಕೊಳ್ಳಲು ಕಳ್ಳತನ ಅನಿವಾರ್ಯವಾಗುತ್ತದೆ. ಇದನ್ನೆಲ್ಲಾ ಯೋಚಿಸುತ್ತಾ ಕತ್ತಲ ದೇವಸ್ಥಾನದ ಬಳಿ ಬಂದು ಪ್ರಸಾದ ಯಾಚಿಸುತ್ತಾನೆ. ನಿನ್ನಂಥೊವ್ಕ ಕ್ವಡೋಕಲ್ಲ ಅದಿರೋದು ಅಂದ ಪೂಜಾರಿಯ ಈ ಮಾತು ಕೇಳಿ ಕತ್ತಲನ ಮೈಯೊಳಗ ಎಂಥದೋ ಆವೇಶ ತುಂಬಿಕೊಂಡಿತು

ಪರ್ಸಾದವಂತೆ ಪರ್ಸಾದ ಅಂದವನೇ ಕತ್ತಲ ಪೂಜಾರಿಯನ್ನೀಚೆ ತಳ್ಳಿ ಒಳನುಗ್ಗಿದ್ದ ಅವನನ್ನು ಮುಟ್ಟಿದರೆಲ್ಲಿ ತನ್ನ ಮೈ ಸುಟ್ಟು ಹೋಗುವುದೋ ಎಂದು ಹೆದರಿ ಪೂಜಾರಿ ಕತ್ತಲನನ್ನು ತಡೆಯದೆ ಅಂಗಳದಲ್ಲಿ ನಿಂತು ಬೊಬ್ಬೆ ಹಾಕತೊಡಗಿದ. ಈ ಕಥೆಯಲ್ಲಿ ಕಿವುಡನಂತಹವರಿಗೆ ಹೊಳೆದಾಟಲು ದೊಣ್ಣೆ ನಾಯಕನ ಅಪ್ಪಣೆ ಎಂಬತೆ ಪೂಜಾರಿಯತದೆತಡೆ "ದೇವರು ವರ ಕೊಟ್ಟರು ಪೂಜಾರಿ ವರ ಕೊಡಲಿಲ್ಲ" ಎನ್ನುವ ರೀತಿಯಾಯಿತು. ಆಗ ಊರಿನ ಜನರೆಲ್ಲರೂ ಬರುತ್ತಾರೆ. ಆಗ ಕತ್ಲನು ದೇವರ ಹತ್ತಿರ ಇರುವ ತ್ರಿಶೂಲವನ್ನು ಹಿಡಿದು ನಿಲ್ಲುತ್ತಾನೆ. ಇಲ್ಲಿ ಕತ್ತಲನ ಹಸಿವೇ ಆಕ್ರೋಶವಾಗಿ ಮಾರ್ಪಡಾಗುತ್ತದೆ. ಕೆಳಜಾತಿಯವನು ಎಂಬ ಕಾರಣಕ್ಕಾಗಿ ದಲಿತರಿಗೆ ದೇವಾಲಯ ಪ್ರವೇಶ ನಿಸಿದ್ಧ. ಸವರ್ಣೀಯರು ಮಾಡಿದ ಈ ನಿಯಮವನ್ನು ಮಿರಿದಾಗ ಆಗುವ ಶಿಕ್ಷೆ ತೀವ್ರತರವಾದದ್ದು. ಎಲ್ಲರನ್ನೂ ಕಾಪಾಡುವೆನೆಂಬ ದೇವರು ಹಾಗಾದರೆ ಯಾರ ಸ್ವತ್ತು. ದೇವರನ್ನೂ ತಮ್ಮದೇ ಖಾಸಗಿ ಆಸ್ತಿ ಎಂದು ಪರಿಗಣಿಸಿರುವ ಮನುವಾದಿಗಳಿಗೆ ಮಾನವೀಯತೆಯ, ಸಮಾನತೆಯ ತತ್ವದ ಪರಿಚಯ ಎಳ್ಳಷ್ಟು ಇಲ್ಲದಿರುವುದು ಇಲ್ಲಿರುವ ವಿಷಾದನೀಯ ಸಂಗತಿ.ಮೇಲ್ನೋಟಕ್ಕೆ ಎಲ್ಲರೂ ಹಿಂದುಗಳು ಆದರೆ ಒಬ್ಬ ಹಿಂದೂ ಮತ್ತೋಬ್ಬ ಹಿಂದುವನ್ನು ಹೀಗೆ ಅವಮಾನಿಸುವುದು ಎಷ್ಟರ ಮಟ್ಟಿಗೆ ನ್ಯಾಯ ಇವನಿಗೆ ದೇವಾಲಯಕ್ಕೆ ಪ್ರವೇಶಿಸಬೇಕೆಂಬ ಆಕಾಂಕ್ಷೆ ಇರಲಿಲ್ಲ. ಅವನಿಗೆ ಬೇಕಾದದ್ದು ಅಲ್ಲಿದ್ದ ಅನ್ನವಷ್ಟೆ.

ಈ ಕತೆಯಲ್ಲಿ ದಲಿತರ ಹಸಿವನ್ನು, ಉಳ್ಳವರ ಅಜ್ಞಾನವನ್ನು ಕಾಣುತ್ತೇವೆ. ಮೊದಲನೆಯದಾಗಿ ನಾಯಿ, ಎಮ್ಮೆ, ಕಾಗೆಗಳಿಗಿರುವ ಮರ್ಯಾದೆ ಕತ್ತಲನಿಗೆ ಸಿಗುವುದಿಲ್ಲ. ಎರಡನೆಯದಾಗಿ ಜನರು ಕೆಳವರ್ಗದ ಹೆಣ್ಣನ್ನು ಯಾವ ರೀತಿ ಶೋಷಿಸುತ್ತಾರೆ ಎಂಬುದನ್ನು ತಿಳಿಯಬಹುದು. ಪುರೋಹಿತ ಶಾಹಿಯ ಅಟ್ಟಹಾಸ, ಇದರಿಂದ ದಲಿತರಿಗೆ ಆಗುತ್ತಿರುವ ಅನ್ಯಾಯ, ಅವಮಾನಗಳ ಚಿತ್ರಣದಟ್ಟವಾಗಿದೆ. ಹಸಿವಿನ ನಿವಾರಣೆಗೆಂದು ಪ್ರಸಾದವನ್ನು ತೆಗೆದುಕೊಂಡಾಗ ಪೂಜಾರಿ ಊರವರು ತಡೆಯುವ ಯತ್ನಮಾಡಿದಾಗ ಅವನು ದೇವರ ತ್ರಿಶೂಲವನ್ನೇ ಕೈಗೆ ತೆಗೆದುಕೊಂಡು ಈ ಬಲಿಷ್ಠರನ್ನು ಎದುರಿಸಬೇಕಾಯಿತು.

ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ

ಅನ್ನವಿರುವ ತನಕ ಪ್ರಾಣವು । ಜಗಕೆಲ್ಲ

ಅನ್ನವೇ ದೈವ ಸರ್ವಜ್ಞ,

ಹೊಟ್ಟೆ ತುಂಬಿದವರಿಗೆ ಬೇರೆ ದೇವರು ಇದ್ದಾರೆ. ಅನ್ನವಿಲ್ಲದವನಿಗೆ ಅನ್ನವೇ ದೇವರು.

ಧರ್ಮ ಮಾರ್ಗದಲ್ಲಿ ಹಣದ ಸಂಪಾದನೆ ಮಾಡಿ ತನ್ನ ಮೂಲಭೂತ ಅವಶ್ಯ ಕತೆಗಳನ್ನು ಪೂರೈಸಿಕೊಳ್ಳವುದರಲ್ಲಿ ಬದುಕಿನ ಪರಿ ಪೂರ್ಣತೆ ಇದೆ ಎಂಬುದು ಬೇಂದ್ರೆಯವರ ಅಭಿಪ್ರಾಯ.

ಆದರೆ ಇಲ್ಲಿ ಧರ್ಮ ಮಾರ್ಗದಿಂದ ದುಡಿದರೂ ಬದುಕಿನ ಇಳಿಗಾಲದಲ್ಲಿ ಅನ್ನದ್ದೇ ಒಂದು ದೊಡ್ಡ ಸಮಸ್ಯೆಯಾಗಿರುವುದು. ಈ ದೇಶದ ಜಾತಿ ವ್ಯವಸ್ಥೆ ನಿರ್ಮಿಸಿದ ಬಹುದೊಡ್ಡ ವಿಪರ್ಯಾಸದ ಸಂಗತಿ. ಇಲ್ಲಿ ಕತ್ತಲ ದೇವರ ಪ್ರಸಾದ ತೆಗೆದುಕೊಂಡ ಎಂಬುದಕ್ಕಿಂತಲೂ, ದೇವಾಲಯ ಪ್ರವೇಶಿಸಿದ್ದು ಸವರ್ಣೀಯರಿಗೆ ಅಘಾತಕಾರಿ ಸಂಗತಿಯಾಗಿದೆ. ಇಂದಿಗೂ ದಲಿತರ ದೇವಾಲಯ ಪ್ರವೇಶದ ಕುರಿತಾಗಿ ನಡೆಯುತ್ತಿರುವ ಅತಿರೇಕದ ಪ್ರಸಂಗಗಳನ್ನು ನಾವಿಲ್ಲಿ ನೆನೆಯಬಹುದಾಗಿದೆ.

ಕಿವುಡ ನಾಯಿಯಾದ ಪ್ರಸಂಗ

ಈ ಕತೆಯಲ್ಲಿ ಅಂಗಡಿ ಅಜ್ಜಪ್ಪನ ಹನ್ನೆಲ್ಡ್ ವರ್ಷದ ಈರಮ್ಮ ಸತ್ತಿರೋ ಸುದ್ದಿ ಕೇಳಿ ಮಾದಿಗರ ಕಿವುಡಗೆ ಎಷ್ಟು ಸಂತೋಷವಾಯಿತೆಂದರೆ ತನ್ನ ಐವತ್ತು ವರ್ಷದ ಅನುಭವದಲ್ಲಿ ಅಷ್ಟೊಂದು ಸಂತೋಷದ ದಿನವನ್ನು ಆತ ಎಂದೂ ಕಂಡಿರಲಿಲ್ಲ. ಈ ಕತೆಯ ಪ್ರಾರಂಭದಲ್ಲಿಯೇ ಅಂಗಡಿ ಅಜ್ಜಪ್ಪನ ಮಗಳು ಸತ್ತಿರುವ ಸುದ್ದಿ ತಿಳಿಯುತ್ತದೆ. ಕಿವುಡನಿಗೆ ತುಂಬಾ ಸಂತೋಷವಾಗುತ್ತದೆ. ಯಾರದಾದರೂ ಸಾವಿನ ಸುದ್ದಿ ಕೇಳಿದಾಗ ಹೀಗೆ ಸಂತೋಷ ಪಡುವುದುಂಟೆ? ಈ ಬಗ್ಗೆ ಬೇಸರವೆನಿಸುತ್ತದೆ. ಆದರೆ ಕಿವುಡನ ಸಂತೋಷದ ಕಾರಣ ಸ್ಪಷ್ಟವಾದ ಹಾಗೆ ಅವನ ಬಗ್ಗೆ ನಮ್ಮ ಈ ನಿಲುವೂ ಬದಲಾಗುತ್ತವೆ. ಇಲ್ಲಿ ಈರಮ್ಮ ಸತ್ತ ವಿಷಯ ಕಿವುಡನಿಗೆ ಸಂತೋಷ ತರುವುದು ಇಲ್ಲಿ ಅಚ್ಚರಿಯ ಸಂಗತಿಯೆನಿಸುತ್ತದೆ. ಆದರೆ ಇದಕ್ಕಿರುವ ಕಾರಣತಿಳಿದರೆ ಅದೂ ಇನ್ನೂ ಮಿಗಿಲಾದ ಅಚ್ಚರಿಯನ್ನುಂಟು ಮಾಡುತ್ತದೆ. ಊರಲ್ಲಿ ಯಾರಾದರೂ ಸತ್ತಾಗ ಗುಂಡಿ ತೋಡುವ ಕೆಲಸ ದಲಿತರದ್ದು. ಅದಕ್ಕಾಗಿ ಅವರಿಗೆ ಒಂದಿಷ್ಟು ಹಣ ಕೊಡುತ್ತಾರೆ. ಹಸಿವಿನಿಂದ ತತ್ತರಿಸಿದ ಜೀವ ತನ್ನ ಈ ಅನಿವಾರ್ಯಕ್ಕಾಗಿ ಮತ್ತೊಬ್ಬರ ಸಾವಿನ ಸುದ್ದಿ ಕೇಳಿ ಸಂತೋಷಪಡುತ್ತನೆ. ಅದರಿಂದಲಾದರು ಹಸಿವನ್ನು ನೀಗಿಸ ಬಹುದೆಂದು. ಈ ಹಸಿವಿಗೆ ಕಾರಣ ಅತನ ಜಾತಿ ಕಾರಣದಿಂದ ಉಂಟಾಗಿರುವ ಅತಂತ್ರ ಸ್ಥಿತಿ.

ಕಿವುಡ ಎಂದೂ ಯಾರೂ ಹಾಕಿದ ಗೆರೆಯನ್ನು ದಾಟಿದವನಲ್ಲ. ಉಗುಳು ತುಳಿದವನಲ್ಲ. ನಂಬಿಕೆಯ ವಿಷಯದಲ್ಲಿ ಕೆಲವರು ಅವನನ್ನು ನಾಯಿಗೆ ಹೋಲಿಸುತ್ತಿದ್ದುದುಂಟು. ಅದನ್ನು ಕೇಳಿದಾಗಲೆಲ್ಲ ಕಿವುಡ ನಾಯಿಗಿರೋ ಸವಲತ್ತು ತನಗಿಲ್ಲವಲ್ಲ ಅಂತ ಮುಖ ಸಪ್ಪಗೆ ಮಾಡಿಕೊಳ್ಳದೆ ಇರುತ್ತಿರಲಿಲ್ಲ. ನಾಯಿಗಾದರು ಯಾರಾದರು ಕರೆದು ಅನ್ನ ಹಾಕುತ್ತಾರೆ. ಅದರ ನಿಯತ್ತನ್ನು ಸ್ಮರಿಸುತ್ತಾರೆ. ಅದರೆ ಅದಕ್ಕಿಂತ ಈತನ ಬಾಳು ನಿಕೃಷ್ಟ ಸ್ಥಿತಿಯಲ್ಲಿರುವುದೆ ಇಲ್ಲಿನ ದುರಂತ. ಆದರೆ ಕಿವುಡನಂತೊರು ದಿನಕ್ಕೊಪ್ಪತ್ತಾದರು ಉಂಡರೆ ಅದು ಅವರ ಪುಣ್ಯವಾಗಿತ್ತು. ಹೊಟ್ಟೆ ತುಂಬ ಊಟ ಬೇಕೆಂದರೆ, ಕೊಟ್ಟೋರ ಗಂಟು ವಾಪಸು ಕೊಡಬೇಕೆಂದರೆ ಊರಲ್ಲಿ ಯಾರಾದಾದರು ಎತ್ತೊ ಅಥವಾ ಎಮ್ಮೆಯೋ ಸಾಯಬೇಕು. ಅಂತ ದೊಡ್ಡ ಜೀವ ಇತ್ತೀಚೆಗೆ ಯಾವುದೂ ಹೋಗಿಲ್ಲ. ಪರಿಸ್ಥಿತಿ ಹೀಗಿರುವಾಗ ತನ್ನ ಒಕ್ಕಲಿನಲ್ಲಿಯೇ ಉತ್ತಮಸ್ಥಾನದ ಅಂಗಡಿ ಅಜ್ಜಪ್ಪನ ಮಗಳೆ ಹೋದ ಸುದ್ದಿ ಕಿವಿಗೆ ಬಿದ್ದಾಗ ಕಿವುಡ ಸಂತೋಷಗೊಳ್ಳದೆ ಇರಲು ಹೇಗೆ ಸಾಧ್ಯ: ಇಲ್ಲಿ ಅಜ್ಜಪ್ಪನ ಮಗಳು ಸತ್ತಿರುವುದರಿಂದ ಅದು ಕಿವುಡನ ಹಸಿವನ್ನು ನೀಗಬಹುದುದಾದ ಸೂಚನೆ ಕೊಡುತ್ತವೆ. ಈ ಮೂಲಕ ಕಿವುಡನ ಕುಟುಂಬದ ಚಿತ್ರಣವೂ ಮತ್ತು ಆ ಕುಟುಂಬದ ದಟ್ಟ ದಾರಿದ್ರ್ಯವನ್ನು ಮತ್ತಷ್ಟು ವಿಷದಪಡಿಸುತ್ತದೆ.

ಮಕ್ಕಳನ್ನು ಸುತ್ತ ಕೂಡಿಸಿಕೊಂಡು ಕತ್ತಲನ ಹೆಂಡತಿ ಕೆಂಚವ್ವ ಜೋಳದ ಬೆಳೆಸಿ ಉದ್ದಿಕೊಡುತ್ತಿದ್ದಳು. ಅದೆ ಸಮಯಕ್ಕೆ ಕಿವುಡ ಬರುತ್ತಾನೆ. ಆಗ ಕೆಂಚಿ "ನಿನ್ನ ನೆಚ್ಚಿಕೊಂಡು ಉಂಡಂಗೆ ನೋಡು ಅಂತ ಮಾಸ ಮುರಿದಳು" ಅರಿನಡಿ ಅಜ್ಜಪ್ಪೋರ ಮಗಳು ಒಂಟೋಡ್ಲಂತೆ ಒತ್ತಳೆಯುತ್ಲೆ ನಾಕು ಸಿಗ

ಬವುದು ಅಂದಾ ಸ್ವಲ್ಪ ಹಣ ಸಿಗಬಹುದು ಎಂಬ ಲೆಕ್ಕಾಚಾರ. "ಅಯ್ಯೋ ಪಾಪ" ಎಂದು ಮೂಕಿಯಂತೆ ಜೋಳದ ತೆನೆ ಉಜ್ಜ ತೊಡಗಿದಳು "ಜ್ವಾಳದ ತೆನಿ ಸಿಗದಿದ್ರೆ ತ್ರಾಸಿತ್ತು" ಅಂದಳು ಮತ್ತೊಮ್ಮೆ ಒಂಭಾವತ್ತಿದ್ದು ಹಟ್ಟಿತಾವ ಯಾರೂ ಬಂದಿಲ್ಲ? ಅಂತ ತಿಳಿದುಕೊಂಡು ಕಿವುಡ ಆ ಕಡೆಗೆ ಹೊರಟನು.

ಗುದ್ದಿಲಿ, ಸಲಿಕೆ, ಪುಟ್ಟಿಯನ್ನು ಒತ್ತಟ್ಟಿಗಿಟ್ಟು ಕಲ್ಲುದಿಬ್ಬದ ಮೇಲೆ ಕುಂತು ಕೊನೆ ಬೀಡಿಗೆ ಬೆಂಕಿ ತಗುಲಿಸಿದ. ಸೂರ್ಯ ಮಳುಗಲು ಪಶ್ಚಿಮ ದಿಗಂತದಲ್ಲಿ ಕೇವಲ ಒಂದೇ ಒಂದು ಮಾರಿನಷ್ಟು ಜಾಗ ಬಾಕಿ ಇತ್ತು ಯಾಕ ಇನ್ನೂ ಬರ್ಲಿಲ್ಲ ಎಂಬ ಚಿಂತೆ.

ಅವರು ಇನ್ನೂ ಬರೋದು ಯಾವಾಗ?

ಹೆಣ ಉಗಿಯೋದು ಯಾವಾಗ?

ತನಗೆ ಮಾಮೂಲು ಕೊಡೋದು ಯಾವಾಗ?

ಅದನ್ನೋಯ್ದು ತಾನು ಜೋಳ ತರೋದು ಯಾವಾಗ?

ತನ್ನ ಹೆಂಡ್ತಿ ಕೆಂಪಿ ಬೀಸಿ ಗಂಜಿ ಕುಚ್ಚೋದು ಯಾವಾಗ?

ಅದನ್ನು ನಾಕು ಹುಡುಗರು ಕಮ್ಮನೆ ಉಂಡು ತಂಬಿಗೆ ನೀರು ಕುಡಿದು ಅಂಗಳದಲ್ಲಿ ಗೋಣಿ ತಟ್ಟಿನ ಮೇಲೆ ಉರುಳಿ ಗೊರಕೆ ಹೊಡೆಯುತ್ತ ನಿದ್ದೆ ಏರಿಸುವುದು ಯಾವಾಗ? ಇತ್ಯಾದಿ..... ಹೀಗೆ ಕತ್ತಲು ಅದಷ್ಟು ಬೇಗ ಈರಮ್ಮನ ಶವ ಬಂದರೆ ಕಿವುಡನಿಗೆ ಒಂದಿಷ್ಟು ಹಣ ಬರುತ್ತದೆ ಎಂಬ ನಿರೀಕ್ಷೆಯಲ್ಲಿ ಇರುತ್ತಾನೆ.

ನಿರೀಕ್ಷಿಸಿದಂತೆ ಈರಮ್ಮನ ಹೆಣ ಬಂತು... ಹೆಣವನ್ನು ಕುಣಿಯ ಪಕ್ಕ ಉದ್ದೋಕೂ ಮಲಗಿಸಿದರು ಸಾಳೇರ ಎಲ್ಲಪ್ಪ ಪೂಜೆ ಶಾಸ್ತ್ರ ಮಾಡಿದರು. ಆ ಪ್ರದೇಶ ವಿಲಕ್ಷಣ ಘಮ ಘಮ ವಾಸನೆಯಿಂದ ತುಂಬಿಕೊಂಡಿತು. ಹೀಗೆ ಈರಮ್ಮನ ಹೆಣವನ್ನು ಮಣ್ಣು ಮಾಡಿದ ಮೇಲೆ "ಸಲಿಕೆ, ಗುದ್ಲಿ, ಪೂಜಿದ ನಾಕ್ಕೈದಾಣೆ ಕ್ವಡ್ರೀಧಣಿ" ಅಂತ ಕಿವುಡ ಕೇಳಿ ರೂಪಾಯಿ ನೋಟನ್ನು ಅಜ್ಜಪ್ಪನ ಜೇಬಿನಿಂದ ಅವನ ಬೊಗಸೆಗೆ ವರ್ಗವಾಯಿತು. ಇದರಿಂದ ಅವನಿಗೆ ತುಂಬಾ ಸಂತೋಷವಾಯಿತು.

ಕೈಯಲ್ಲಿ ಕಾಸಿದ್ದರೆ ಮೈಗೆ ಆನೆ ಬಲ ಎಂದು ಹೋಗುತ್ತಿದ್ದಾನೆ. ಇನ್ನೇನು ಲೈಟು ಕಂಬ ದಾಟುವಷ್ಟರಲ್ಲಿ ಜೀವವೇ ಅರಗಳಿಗೆ ಹೋಯಿತು. "ಇಲ್ಕೊಡು ಇಲ್ಕೊಡಂತ ಸಾಬಿಯೇ ಮುಂದು ಬಿದ್ದು ಕಿವುಡನ ಮುಷ್ಠಿಯಲ್ಲಿದ್ದ ಕಾಸು ಕಿತ್ತುಕೊಂಡು ಎಣಿಸಿ ಒಕ್ಕಣದಲ್ಲಿಟ್ಟುಕೊಳ್ಳುತ್ತ "ಇನ್ನಾರು ಬರ್ಬೇಕು ಕಿವುಡ ಎಲ್ಡು ದಿನದಲ್ಲಿ ಚುಕ್ತಾ ಮಾಡಿಬಿಡು ಎಂದು ಹೇಳಿ ಅಲ್ಲಿಂದ ಕದಲಿದ ಸಾಬಿ. ಓಂದೆ ಕೊಟ್ಟದ್ದು ಸಾಲಿವನ್ನು ಸಾಬಿ ಹೀಗೆ ಕಿತ್ತುಕೊಂಡ. ಅದುವರೆಗೆ ಜೀವ ಕಳೆದುಕೊಂಡವನಂತೆ

ನಿಂತಿದ್ದ ಕಿವುಡನ ಕಣ್ಣುಗಳಿಂದ ನೀರು ದಳದಳ ಸುರಿಯತೊಡಗಿತು ಇದ್ದಕ್ಕಿದ್ದಂತೆ ಅವನಿಗೆ ಹೊಳೆಯಿತು. ಎಲ್ಲಿ ಪಾಪ-ಪುಣ್ಯ ಕರ್ಮಕ್ಕಿಂತ ದೊಡ್ಡದು ಹೊಟ್ಟೆ. ಬಂದದಾರಿಗಂಟ ನಡೆದು ಸುಡುಗಾಡು ಮುಟ್ಟಿದನು. ಪೂಜಿಸಿದ್ದ ಸಮಾಧಿಯನ್ನು ಮತ್ತೆ ಅಗೆಯುವುದು ಸಂಪ್ರದಾಯದ ಮನಸ್ಸಿಗೆ ಪಾಪದ ಕೆಲಸ. ಆದರೆ ಹಸಿವಿನ ಸಂಕಟದ ಮುಂದೆ ಎಲ್ಲಾ ಪಾಪಗಳೂ ಅರ್ಥ ಕಳೆದುಕೊಳ್ಳುತ್ತವೆ. ಕಿವುಡನೂ ಈ ನಿರ್ಧಾರಕ್ಕೆ ಬರುತ್ತಾನೆ.

ಈ ಕತೆಯಲ್ಲಿ ದಲಿತರ ಹಸಿವು ಅವರನ್ನು ಯಾವ ಹಂತಕ್ಕೆ ಕರೆದೊಯ್ಯತ್ತದೆ ಎಂಬುದನ್ನು ತಿಳಿಯಬಹುದು. ಹೆಣ ಹೂಳಲು ಗುಂಡಿತೋಡುವುದು ಇವರ ಕೆಲಸ. ಇದರಿಂದ ಬರುವ ಹಣ ಇವರ ಬಡತನವನ್ನೂ, ಹಸಿವನ್ನೂ ಸಂಪೂರ್ಣವಾಗಿ ನಿವಾರಿಸುತ್ತದೆಯೇ? ಇಲ್ಲ ಕೆಲವು ರೂಪಾಯಿಗಳು ಒಂದು ಹೊತ್ತಿನ ಗಂಜಿಗೆ ದಾರಿ ಮಾಡಬಹುದುಷ್ಟೆ. ಕಿವುಡನಂತಹ ದಲಿತರನ್ನು ಯಾವ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ ಮತ್ತು ಅದರಿಂದ ಸಿಗುವ ಪ್ರತಿಗಾಸಿಗಾಗಿ ಅವರು ಹಂಬಲಿಸುವ ಬದುಕಿನ ಅನಿವಾರ್ಯತೆಯನ್ನು ಇಲ್ಲಿ ಲೇಖಕರು ಸ್ಪಷ್ಟಪಡಿಸುತ್ತಾರೆ. ಇದರಿಂದ ಅವರ ಹಸಿವು ನೀಗಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ತಿಳಿಯಬಹುದು. ಆದರೆ ಹಸಿವಿನ ಅನಿವಾರ್ಯ ಅವರನ್ನು ಹೇಗೆ ಯಾವ ಸ್ಥಿತಿಗೆ ತಳ್ಳುತ್ತದೆ ಎಂಬುಹುದು ಮುಖ್ಯ. ಈ ಕತೆಯಲ್ಲಿ ದಲಿತರು ಅತ್ಯಂತ ಕೀಳು ಮಟ್ಟದಲ್ಲಿ ಇರುವ ಪ್ರಸಂಗವನ್ನು ಕಾಣುತ್ತವೆ. ಕಿವುಡನು ನಾಯಿಗಿಂತ ಕೀಳು ಮಟ್ಟಕ್ಕೆ ಇರುವುದನ್ನು ಕಾಣುತ್ತೇವೆ. ಹೆಣದ ಕಾಲುಬುಡದಲ್ಲಿದ್ದ ಎರಡು ತೆಂಗಿನಕಾಯಿಗಳಿಗೆ ತನ್ನೆರಡು ಕೈಗಳನ್ನು ಹಚ್ಚಿದ ಇಲ್ಲಿ ಕಿವುಡನು ಅತ್ಯಂತ ದಯನೀಯ ಪರಿಸ್ಥಿತಿಗೆ ಬಂದಿರುವುದನ್ನು ಕಾಣುತ್ತೇವೆ. ಕಿವುಡ ಸ್ಮಶಾನದಲ್ಲಿ ಇರುವ ತೆಂಗಿನ ಕಾಯಿ ತೆಗೆದು ತಿನ್ನುವ ಪರಿಸ್ಥಿತಿಯನ್ನು ಕಾಣುತ್ತೇವೆ. ಕಿವುಡನು ಹಣವನ್ನು ಸಂಪಾದನೆ ಮಾಡಿದರು ಸಹ ತನ್ನ ಹಸಿವನ್ನು ನೀಗಿಸುವುದಕ್ಕೆ ಆಗುವುದಿಲ್ಲ ಎಂದು ಪರಿತಪಿಸುತ್ತಾನೆ. ಸಾಮಾನ್ಯವಾಗಿ ಸ್ಮಶಾನದ ಕಡೆ ನೋಡಲೂ ಯಾರೂ ಇಷ್ಟಪಡುವುದಿಲ್ಲ. ಸ್ಮಶಾನದಲ್ಲಿ ಬೆಳೆದ ಹೂವು, ಅಲ್ಲಿಯ ಹಣ್ಣು ಯಾರ ಬಳಕೆಗೂ ಯೋಗ್ಯವಲ್ಲ ಎಂಬುದೇ ಸಾಮಾನ್ಯ ಸಂಗತಿ. ಹೀಗಿರುವಾಗ ಅಲ್ಲಿ ಹೆಣದ ಬಳಿ ಇಟ್ಟಿದ್ದ ತೆಂಗಿನಕಾಯಿಯನ್ನೇ ತೆಗೆದು ತನ್ನ ಮತ್ತು ತನ್ನ ಕುಟುಂಬಕ್ಕೆ ಆ ದಿನದ ಆಹಾರದ ಅಗತ್ಯವನ್ನು ಪೂರೈಸುವುದಲ್ಲಾ ಎಂದು ಯೋಚಿಸಿ ಅವುಗಳನ್ನು ತೆಗೆದುಕೊಂಡು ಹೋಗುವುದರಲ್ಲಿ ಕೇವಲ ಕತ್ತಲಿನ ಬಾಳಿನ ಕತ್ತಲ ಸ್ವರೂಪ ಮಾತ್ರವಲ್ಲ ಇಡೀ ನಮ್ಮ ಭಾರತದ ಜಾತಿವ್ಯವಸ್ಥೆ ಉಂಟುಮಾಡಿರುವ ಕರಾಳತೆಯ ದರ್ಶನ ಮಾಡಿಸುತ್ತದೆ. ಇದು ಉತ್ಪ್ರೇಕ್ಷಿತ ಸಂಗತಿಯೇನೂ ಅಲ್ಲ ಕುಂ.ವೀ ದಲಿತರ ಬದುಕಿನ ವಾಸ್ತವದ ಚಿತ್ರಣವನ್ನೇ ಕೊಟ್ಟಿದ್ದಾರೆ. ಅರವಿಂದ ಮಾಲಗತ್ತಿಯವರ ತಮ್ಮ ಆತ್ಮಕಥನವಾದ "ಗೌರ್ನಮೆಂಟ್ ಬ್ರಾಹ್ಮಣ" ದಲ್ಲಿ ದಲಿತರು ಊರವರ ಸಂಸ್ಕಾರ ಕ್ರಿಯೆಗಳಲ್ಲಿ ಹೇಗೆ ಕೆಲಸಮಾಡುತ್ತಾರೆ ಎಂಬುದರ ವಿವರ ಕೊಡುತ್ತಾರೆ. 'ಹೆಣ' ವನ್ನು ಸ್ಮಶಾನಕ್ಕೆ ಸಾಗಿಸುವಾಗ ಅದರ ಮೇಲೆ ಗೌರವ ಸೂಚಕವಾಗಿ ಉಳ್ಳವರು ನಾಣ್ಯಗಳನ್ನು ಎಸೆದಾಗ ಅದನ್ನು ಆರಿಸಿಕೊಳ್ಳಲು ದಲಿತ ಮಕ್ಕಳಾದ ತಾವೆಲ್ಲಾ ನುಗ್ಗುತ್ತಿದ್ದದು, ಗುಂಡಿತೋಡಿದ ದಲಿತರು, ಬಂಧುಗಳು ಅಲ್ಲಿಂದ ನಿರ್ಗಮಿಸುವ ದಾರಿಯಲ್ಲಿ ಬಟ್ಟೆಹಾಸಿಕೊಂಡು ಕುಳಿತಾಗ ಅವರು ಎಸೆದ ನಾಣ್ಯಗಳನ್ನು ತಾವು ಆರಿಸಿಕೊಳ್ಳುತ್ತಿದ್ದದೂ, ಇತ್ಯಾದಿ ವಿವರಗಳಲ್ಲಿ ದಲಿತರ ಬದುಕಿನ ಅಸಹಾಯಕತೆಯ ಬಡತನದ ಚಿತ್ರಣವಿದ್ದು ಇದು ಕುಂ.ವೀ ಯವರ ಮೇಲಿನ ವಿವರವನ್ನು ಪುಷ್ಟೀಕರಿಸುತ್ತದೆ. ಸಾಂಪ್ರದಾಯಿಕವಾಗಿ ಬಂದ ಸಮಾಧಿ ಪೂಜೆ, ಅದರ ಪಾವಿತ್ರ್ಯತೆ ಇವೆಲ್ಲವುಗಳು

ಅವನಿಗೆ ಇಲ್ಲಿ ಮುಖ್ಯವಾಗುವುದೇ ಇಲ್ಲ ಈ ಎಲ್ಲಾ ವ್ಯವಸ್ಥೆಯ ವಿರುದ್ದದ ಬಂಡಾಯವೆ ಇವನು ಸಮಾಧಿಯಲ್ಲಿದ್ದ ತೆಂಗಿನಕಾಯಿಯನ್ನು ತೆಗೆದುಕೊಳ್ಳುವುದು ಇವರ ಅಗಾಧವಾದ ಹಸಿವು ಅವನನ್ನು ಈ ಬಗೆಯ ವರ್ತನೆಗೆ ಪ್ರೇರಣೆಯಾಗುತ್ತದೆ. ಹಸಿವಿನ ಸಂಕಟ ಅದಕ್ಕೆ ಕಾರಣವಾದ ಶಕ್ತಿಗಳ ಕುರಿತು ಇಡೀ ನಮ್ಮ ಭಾರತದ ಸಾಮಾಜಿಕ ವ್ಯವಸ್ಥೆಯ ಕುರಿತು ಆಲೋಚಿಸುವಂತೆ ಮಾಡುತ್ತದೆ.

ಡೋಮ

ಈ ಕತೆಯಲ್ಲಿ ಡೋಮ ಮುಖ್ಯ ಪಾತ್ರವಾಗಿದ್ದಾನೆ ಮೂರು ಮಾರುದ್ದ ಐದೂವರೆ ಮಾರಗಲದ ಒಂದು ಹಟ್ಟಿ ಗಜಾಪುರದ ವೈರುತ್ಯದ ಮೂಲೆಯಲ್ಲಿದ್ದುದರಿಂದ ಡೋಮನಿಗೆ ಮೂಲಿ ಮನಿ ಡೋಮನೆಂದು ಕರೆಯುತ್ತಿದ್ದರು. ಡೊಮನ ತಾತ ತಾಶೀಲ್ದಾರರೊಬ್ಬರ ಹಿಂದೆ ತಿರುಗಿದ್ದರಿಂದ ಡೋಮನನ್ನು ತಾಶೀಲ್ದಾರ್ ಡೋಮನೆಂದು ಕರೆಯುವುದುಂಟು. ಡೋಮನು ದೊಡ್ಡ ಸಿದ್ದನ ಮಗಳು ಗುಂಡವ್ವನನ್ನು ಕೂಡಿಕೆ ಮಾಡಿಕೊಂಡಿದ್ದ. ಗುಂಡವ್ವ ಮೂರು ಹೆಣ್ಣು ಮತ್ತು ಎರಡು ಗಂಡು ಮಕ್ಕಳನ್ನು ಹೆತ್ತು ಸತ್ತಳು. ಎರಡನೇ ಹೆಂಡತಿ ಚಿಕ್ಕುಜ್ಜಿ ಮೂರು ಹಲ್ಲು ಉದುರಿದ್ದರೂ ರಂಡೆ ಸಣ್ಣಿಯ ಕಾಲ್ಗುಣ ನೆಟ್ಟಗಿಲ್ಲ ಎಂಬ ಕಾರಣಕ್ಕಾಗಿ ಆಕೆಯ ಎಡತೊಡೆಯ ಒಳಭಾಗದಲ್ಲಿ ಎಂಟಾಣೆ ಗಾತ್ರದ ಮಚ್ಚೆ ಇದೆ ಎಂಬ ಕಾರಣಕ್ಕಾಗಿ ಆಕೆಯನ್ನು ತಿರಸ್ಕರಿಸಿದ್ದ. ಡೋಮನೂ ಕೂಡ ಆಕೆಯನ್ನು ಬಳಸಿ ಬಿಸಾಡಿರುವುದರ ಸೂಚನೆಯೂ ಇಲ್ಲಿದೆ.

ಹುಟ್ಟಿದ ಎಲ್ಲ ಮಕ್ಕಳನ್ನು ರೋಗಗಳ ದೆಸೆಯಿಂದ ಕಳೆದು ಕೊಂಡಿದ್ದನು. ಇನ್ನು ಮೂರು ಮಕ್ಕಳು ಕುಂಟಿ, ದ್ಯಾವ, ರಂಗ ಎರಡನೇ ಮಗ. ದ್ಯಾವನ ಬಲಗಣ್ಣಲ್ಲಿ ಕಳ್ಳಿಹಾಲು ಹಿಂಡಿ "ಅಯ್ಯೊ ನನ ಸಿವನೆ ನನ್ನ ಕೈಯಿಗೆ ಕರಿನಾಗ್ರವೂ ಕಡಿಯಾ" ಎಂದು ತನಗೆ ತಾನೆ ತನ್ನ ಮುರ್ಖತನವನ್ನು ಅಳಿದುಕೊಂಡಿದ್ದನು. ಬಸ್ಯ ಎಂದು ಕರೆಯಲಾಗದೆ ರಂಗ ಎಂದು ಕರೆಯುತ್ತಿದ್ದರು ರಂಗ ಅಧ್ಯಾಪಕರಾದ ಹನುಮಂತಯ್ಯನಿಗೇ ಬೇಸರ ಉಂಟು ಮಾಡುತ್ತಿದ್ದ. ಇದರಿಂದ ಡೋಮ ರಂಗನನ್ನು ಇವನಿಗೆ ವಿದ್ಯೆ ಹೇಗೆ ಅತ್ತುವುದು ಎಂದು ಬೇಸರ ಪಡುತ್ತಿದ್ದನು. ಪ್ರತಿನಿತ್ಯ ಸತ್ತು ಮರುಹುಟ್ಟು ಪಡೆಯುತ್ತಿದ್ದ ಸೂರ್ಯ ತನ್ನ ಹಾಗೆ ಎಂದು ಭಾವಿಸಿದ್ದ ಡೋಮ ಬದುಕಿನ ಬಗ್ಗೆ ಎಂದು ಚಿಂತಿಸಿದವನಲ್ಲ. ಡೋಮ ಆಲಿಯಾಸ್ ತಾಶೀಲ್ದಾರು ಆರಕ್ಕೇರಲೂ ಇಲ್ಲ, ಮೂರಕ್ಕೆ ಇಳಿಯಲೂ ಇಲ್ಲ. ಡೋಮ ತನ್ನ ಸುಕ್ಕುಗಟ್ಟಿದ ಮಖದ ತುಂಬ ಹುರುಕ ಬರುಕ ಬೆಳೆದಿರಬಹುದಾದ ಕೂದಲು ಗಡ್ಡ ಇರುವ ಮಖ ಕಿರೀಪು ಮಾಡಿಸಿಕೊಂಡಿರದ ತಲೆ ಜೋತು ಬಿದ್ದಿರುವ ಜೋಲೆ ಎದೆ, ಅದರ ಕೆಳಗೊಂದು ಹೊಟ್ಟೆ ಇಂಥ ಲಕ್ಷಣಗಳಿಂದ ಡೋಮ ಅಪರಿಚಿತರಿಗೆ ಕೋಮಟಿಗನೊಬ್ಬನು ಇದ್ದಕ್ಕಿದ್ದಂತೆ ಬಡವನಾಗಿರುವಂತೆ ಕಂಡು ಬರುತ್ತಿದ್ದನು. ಇದಕ್ಕೆ ಪೂರಕವಾಗಿ ಕೊರಳಗುಂಟೆ ಇಳಿಬಿಟ್ಟು ಕೊಂಡಿರುವ ಕಾಶೀದಾರದಲ್ಲಿ ಎರಡು ಬೀಗದ ಕೈಯಗಳನ್ನು ಸೊಂಟದ ಸುತ್ತ ಬಿಗಿದಿರುವ ಏಳುಸುತ್ತಿನ ಉಡುದಾರದಲ್ಲಿ ಎರಡು ತೂ ತು ಬಿಲ್ಲಿಗಳನ್ನು ಹಾಕಿಕೊಂಡಿರುವವನು. ಹೀಗಾಗಿ ಡೋಮ ನಡೆಯುವಾಗಲೆಲ್ಲ ದೇಹದಿಂದ ಪ್ರತಿ ಹೆಜ್ಜೆಗೆ ಭಜನೆ ಸದ್ದು ಕೇಳಿ ಬರುತ್ತಿತ್ತು. ಡೋಮನ ಮುಖದಲ್ಲಿ ಸಂತೋಷವನ್ನು ಕಾಣುವುದಾದರೆ ಅದು ದ್ಯಾವನಿಂದ ಮಾತ್ರ ತನ್ನ ಒಂದು ಕಣ್ಣು ಕುರುಡಾದರೇನು? ಇನ್ನೊಂದು ಕಣ್ಣು ಹೃದಯದಲ್ಲಿರುವುದು ಎಂದು ತಿಳಿದನು. ದ್ಯಾವನ ದೇಹ ಪಾದರಸದಿಂದ ತಯಾರಾಗಿರುವಂಥದ್ದು. ಕಾಲೀಲೆ ಹೇಳಿದರೆ ತಲೀಲೆ ಹೊತ್ತು ಮಾಡುವ ನಾಯಿಯಂಥ ಮನುಷ್ಯ. ದೊಡ್ಡವರು ಉಗುಳುವ ಉಗುಳನ್ನು ಅದರ ಪಿಂಡದ ಕೂಳನ್ನು ತಿನ್ನಲಿಕ್ಕೂ

ನಾಚುವ ಕಾಗೆಗೆ ತಿನ್ನಿಸುವಂಥ ಕಾಗೆ ಬಣ್ಣದ ಮನುಷ್ಯ ಇನ್ನೊಬ್ಬರ ಹೊಟ್ಟೆತುಂಬಿದ್ದನ್ನು ನೋಡಿ ತಾನು ಹೊಟ್ಟೆ ಹಸಿದಿದ್ದರೂ ತೇಗುವ ಮನುಷ್ಯ ನೀತ. ಉಣ್ಣುವವರನ್ನು ನೋಡಿ ಡೇಗುವ ಮನುಷ್ಯ. ಈ ಕತೆಯಲ್ಲಿ ದ್ಯಾವನ ಸಹನೆ ಮತ್ತೊಬ್ಬರ ಸುಖದಲ್ಲಿ ಸಂತೋಷ ಪಡುವ ಇವನ ಮನಸ್ಥಿತಿಯನ್ನು ಇಲ್ಲಿ ತಿಳಿಯಬಹುದಾಗಿದೆ. ದ್ಯಾವನ ಸುಗ್ಗಿಯಲ್ಲಿ ತನ್ನ ಹರವಾದ ಬೆನ್ನಿನ ಮೇಲೆ ಗೌಡರ ಇಟೊಬಿಯನ್ನು ಕುಂಡ್ರಿಸಿಕೊಂಡು ಒಂದೇ ಒಂದು ದಿನದಲ್ಲಿ ಎರಡೆಕರೆ ನವಣೆಯನ್ನು ಕೊಯ್ದು ಕೀರ್ತಿಗೆ ಪಾತ್ರನಾಗಿದ್ದನು. ಡೋಮನಿಗೆ ದ್ಯಾವ ಬಲಗೈಯಾದರೆ ರಂಗ ಮಾತ್ರ ಕೆಲಸಕ್ಕೆ ಬಾರದ ಎಡಗೈ ಆಗಿದ್ದನು.

ತಿಂಗಳಿಗೊಮ್ಮೆ ಹಚ್ಚೇರಿನಷ್ಟು ಬೆವರನ್ನು ಸಹ ಚೆಲ್ಲದೆ ಮನೆ ಮಂದಿಯನ್ನು ಬೆದರಿಸಿಕೊಂಡು ಇಸಪೀಟು ಮಂದಿಯ ಜೊತೆಗೆ ತಿರುಗುವ ತನ್ನ ತಮ್ಮ ರಂಗ ಅಂದರೆ ದ್ಯಾವನಿಗೆ ಜಾಲಿಮುಳ್ಳು ಇದ್ದಂತೆ. ಕುಂಟಿಯ ಸೊಂಟದ ಬಾಳೆಕಾಯಿಂದ ಪಾವಲಿ ಎಂಟಾಣಿ ಉದುರಿಸಿ ಸಿಗರೇಟು ಸೇದುತ್ತಿದ್ದನು. ಇಂಥವನಿಗೆ ಅಣ್ಣನಾಗಿ ಹುಟ್ಟಲು ತಾನು ಹಿಂದಿನ ಜೆನುಮದಲ್ಲಿ ಮಾಡಿದ್ದಾದರೂ ಏನು? ಎಂದು ಪರಿತಪಿಸುತ್ತಿದ್ದನು. ಹೆತ್ತವರ ಮನಸ್ಸಿನ ತುಂಬ ಗಾಯ ಮಾಡುವ ನಾಯಿಯೊಂದನ್ನು ಸಾಕಿದನು. ಶಿವಣ್ಣನ ಕರುವಿನಿಂದ ಮಾಡಿದ ಚರ್ಮದ ಪಟ್ಟಿಯೊಂದನ್ನು ತಂದು ಕೊರಳಿಗೆ ಕಟ್ಟಿದನು. ಕುರ್ರೋ ಕುರ್ರೋ ಎಂದು ಕರೆದಾಗಲೆಲ್ಲ ಬಾಲ ಅಳ್ಳಾಡಿಸುವಂತಿತ್ತು. ನಾಯಿಯೂ ಮತ್ತು ಡೋಮನೂ ಸಮನಾಗಿ ಉಸಿರಾಡುತ್ತಿದ್ದದ್ದು ಇಂಥ ಶ್ವಾಸೋಚ್ಛ್ವಾಸದಿಂದಾಗಿ ನಾಯಿಯೊಳಗೆ ಡೋಮನೋ ಡೋಮನೊಳಗೆ ನಾಯಿಯೋ ಎಂಬತ್ತಿತ್ತು. ಆದರೆ ಎರಡರಲ್ಲೂಯಾವುದೇ ವ್ಯತ್ಯಾಸ ಕಾಣುತ್ತಿರಲಿಲ್ಲ. ಇಲ್ಲಿ ಡೋಮ ನಾಯಿಯನ್ನು ಮನುಷ್ಯರಂತೆ ಪ್ರೀತಿಸುತ್ತಿರುವುದನ್ನು ಕಾಣುತ್ತೇವೆ. ಬಹುಶಃ ಈ ಕೆಲಸಕ್ಕೆ ಬಾರದ ಮಗ ರಂಗನಿಗಿಂತಲೂ ಈ ನಾಯಿಯೇ ಹೆಚ್ಚು ನಂಬಿಕೆಗೆ ಅರ್ಹ ಎಂಬ ಮನೋಭಾವನೆ ಡೋಮನದಾಗಿರಬಹುದು. ಡೋಮ ಮತ್ತು ಅವನ ಇತರ ಮಕ್ಕಳಿಗಿಂತ ತುಸು ಭಿನ್ನವಾಗಿ ಬದುಕಲು ಪ್ರಯತ್ನಿಸುವವನು ರಂಗನೆ. ರಂಗ ಎರಡಕ್ಷರ ಕಲಿತಿದ್ದು ಡೋಮನ ಮನೆಯಲ್ಲಿ ಒಂದು ಬಗೆಯ ಸಾಮಾಜಿಕ ಸಂಘರ್ಷವನ್ನು ಪ್ರಾರಂಭ ಮಾಡಿಬಿಟ್ಟಿದೆ. ಸ್ಥಗಿತಗೊಂಡಿದ್ದ ಡೋಮನ ಕೌಟುಂಬಿಕ ಜೀವನದಲ್ಲಿ ಹೊಸ ಕಂಪನಗಳನ್ನು ಎಬ್ಬಿಸಿದೆ. ಈ ಕಂಪನ ಈ ಚಲನೆ ಡೋಮನ ಬದುಕಿನ ನಿರಾಸೆಗಳನ್ನೆ ಒಂದು ಸಾಮಾಜಿಕ ಸ್ಥಿತಿಯಿಂದ ಇನ್ನೊಂದು ಸಾಮಾಜಿಕ ಸ್ಥಿತಿಯ ಕಡೆಗೆ ಸಾಗಿಸುತ್ತಿದೆ. ವಿದ್ಯಾಭ್ಯಾಸ ಮಾಡುವುದರ ಮೂಲಕ ಭಿನ್ನವಾದ ಉತ್ತಮ ಬದುಕನ್ನು ಕಟ್ಟಿಕೊಳ್ಳ ಬಹುದೆಂಬ ನಿರೀಕ್ಷೆ ಡೋಮನಂತವರಿಗೆ ಬರಬೇಕು. ಇದೇ ಒಂದು ದೊಡ್ಡ ಸಂಚಲನ. ಅವನ ವರ್ಗದಲ್ಲಿ ಮೊದಲ ಹೆಜ್ಜೆ ಹಾಕಿರುವನು ರಂಗನೆ. ಕುಂಟೆ ಹೇಳಿದ, ಸತ್ತ ದನವನ್ನು ತಿಂದಿದ್ದ ನಿನ್ನೆಯೇ ಸತ್ತ ನಾಯಿಯ ಕಳೇಬರ ಕಳ್ಳಿ ಸಾಲಿನಲ್ಲಿ ಬಿದ್ದಿರುವ ಸಂಗತಿಯನ್ನು ಕೇಳಿ ಡೋಮನಿಗೆ ಸಿಡಿಲೆರಗಿದಂತಾಯಿತು. ರೆಕ್ಕೆ ಸುಟ್ಟ ಹಕ್ಕಿಯಂತೆ ವಿಲವಿಲನೆ ಒದ್ದಾಡಿದ ನಂತರ ನಿಧಾನವಾಗಿ ಚೇತರಿಸಿಕೊಂಡನು. ಇಡೀ ಒಂದು ವಾರ ಜ್ವರದಿಂದ ನರಳಿದನು. ಹೀಗೆ ಅವನು ಹನುಮಂತಪ್ಪನ ತಾಯಿತವನ್ನು ಕಟ್ಟಿಕೊಂಡು ಚೇತರಿಸಿಕೊಂಡನು. ಸ್ವರ್ಗದಲ್ಲಿರುವ ಹೆಂಡತಿ ಮತ್ತು ನಾಯಿ ಇಬ್ಬರೂ

ಜೊತೆಗೂಡಿ ತನ್ನನ್ನು ಸ್ವಾಗತಿಸಿದಂತಾಯಿತು. ಬೆವೆತು ನಿದ್ದೆಯೆ ಮಾಡುತ್ತಿರಲಿಲ್ಲ ಹೀಗೆ ಡೋಮ ಹೆಂಡ್ತಿಗಿಂತ ತನ್ನ ನಾಯಿ ಸತ್ತ ಸುದ್ದಿಯಿಂದಲೇ ತುಂಬಾ ದುಖಃವನ್ನು ಹೊಂದಿದ್ದನು. ಈ ಬಗೆಯ ಅಪರೂಪದ ಬಾಂಧವ್ಯ ನಾಯಿ ಮತ್ತು ಈತನದ್ದು. ಹೀಗೆ ಡೋಮನು ಗೌಡರ ತೋಟದಲ್ಲಿ ಸ್ವಲ್ಪ ದಿನಗಳ ಕಾಲ ಕೆಲಸ ಮಾಡಿದನು. ಇದರಿಂದ ಅವನಿಗೆ ತುಂಬಾ ಸಂತೋಷವಾಯಿತು. ಇವರಿಗೆ ಕಾಗೆ ಮತ್ತು ಕೋಗಿಲೆ ತುಂಬಾ ಪ್ರಿಯವಾದ ಹಕ್ಕಿಗಳಾಗಿದ್ದವು. ಎತ್ತರದ ತೆಂಗಿನ ಮಂಗಳು ಹಳ್ಳದ ಸಾಲಗುಂಟೆ ಬೇಲಿಯೋಪಾದಿಯಲ್ಲಿ ಕೇದಗೆಯ ಪೆಳೆಗಳೂ... ಇವೆಲ್ಲವನ್ನು ನೋಡಿದಾಗ ಡೋಮನಿಗೆ ತಾನು ಕೂಡ ನೆಲದಾಳಕ್ಕೆ ಬೇರು ಬಿಟ್ಟಂತೆ ಚಕ ಚಕ ಜಿಗಿತಂತೆ ಹೂವು ಹಣ್ಣು ಬಿಟ್ಟಂತೆ ತನ್ನ ಮೇಲೆ ಸಾವಿರಾರು ಪಕ್ಷಿಗಳು ಕೂತು ಕಿಲಕಿಲ ನಕ್ಕಂತೆ ಭಾಸವಾಯಿತ್ತು. ಹೀಗೆ ಅವನು ತನ್ನ ಹಟ್ಟಿಯ ಹಿತ್ತಲಲ್ಲಿ ಅಂದರೆ ಜಳಕ ಮಾಡುವ ಹಾಸುನಲ್ಲಿ ಪಕ್ಕ ಯಾವುದಾದರೊಂದು ಫಲ ಕೊಡುವ ಗಿಡ ನೆಡಬೇಕೆಂದು ನಿಶ್ಚಯಿಸಿದನು. ಇವನ ಕಣ್ಣುಗಳ ಮುಂದೆಯೇ ತೆಂಗು, ಮಾವು, ದಾಳಿಂಬೆ, ಪುಟ್ಲಾಸು ಹೀಗೆ ಒಂದಲ್ಲಾ ನೂರಾರು ಗಿಡಗಳನ್ನು ನೋಡಿ ಜಾಗವನ್ನು ನಿಗದಿಪಡಿಸಿಕೊಂಡನು. ಹೊಸ ಉತ್ಸಾಹ ಮೂಡಿತು. ಇದರ ಫಲವಾಗಿ ಬಂದ ಆಲೋಚನೆಯೆಂದರೆ ಗಿಡ ನೆಡುವ ಆಸೆ ಇದೊಂದು ಜೀವಂತಿಕೆಯ ಲಕ್ಷಣ.

ಸೀನಪ್ಪನವರು ಗಿಡಗಳನ್ನು ಪುಗಸಟ್ಟೆ ಕೊಡುತ್ತಾರೆಂದು ತಿಳಿದುಕೊಂಡು, ಅನೇಕ ಹಸಿರುಕ್ರಾಂತಿ ಬಣ್ಣದ ಅಕ್ಷರಗಳಿಂದ ಫಲಕಗಳನ್ನು ನೋಡಿ ಸಂತೋಷ ಪಟ್ಟನು. ಸೀನಪ್ಪನು ದೂರದಿಂದ ಬರುವುದನ್ನು ನೋಡಿ ಶಿಶುಪಾಲ ದಂತವಕ್ರ ಮೊದಲಾದ ರಾಕ್ಷಸರನ್ನು ಸಂಹರಿಸಿದಂಥ ಆ ಶ್ರೀ ಕೃಷ್ಣ ಪರಮಾತ್ಮನಂತೆ ಕಂಡು ಬಂದನು. ಸೀನಪ್ಪನಿಗೆ ನಮಸ್ಕರಿಸಿದನು. ಆಗ ಸೀನಪ್ಪ ಡೋಮನಿಗೆ ಖರ್ಜೂರ ಮತ್ತು ಸೇಬು ಹಣ್ಣಿನ ಗಿಡಗಳನ್ನು ಕೊಡುವುದಾಗಿ ಹೇಳಿದನು. ಇದರಿಂದ ಡೋಮ ತುಂಬಾ ಸಂತೋಷಪಟ್ಟನು.

ಆ ಗಿಡಗಳು ಎಷ್ಟೆತ್ತರ ಬೆಳೆಯುತ್ತವೆ?

ಆ ಹಣ್ಣುಗಳ ಬಣ್ಣ ಎಂಥಾದ್ದು?

ಆ ಹಣ್ಣುಗಳ ರುಚಿ ಎಂಥಾದ್ದು?

ಹೀಗೆ ಗೊತ್ತಾಗದೆ ಕಕ್ಕಾವುಕ್ಕಿಯಾದ ಡೋಮ ಈ ಎರಡು ಹಣ್ಣುಗಳ ಬಗ್ಗೆ ತಿಳಿಕೊಳ್ಳಲು ಡೋಮ ಗೌಡರ ಮತ್ತು ಜಂಗಮರ ಓಣಿಗಳಲ್ಲಿ ಕಜ್ಜಿ ನಾಯಿಯಂತೆ ತಿರುಗಾಡುತ್ತಿದ್ದನು. ಮಲ್ಲಿಗೆಯಂಥಾ ಬಳ್ಳಿಯಲ್ಲಿ ಖರ್ಜೂರ ಬಿಡುತ್ತದೆಂದು ಒಬ್ಬ ಹೇಳಿದ್ದರೆ ಇನ್ನೊಬ್ಬರು ತೆಂಗಿನ ಮರಕ್ಕಿಂತಲೂ ಎತ್ತರ ಬೆಳೆಯುವ ಒಂಟಿಗಾಲಿನ ಮರದಲ್ಲಿ ಸೇಬು ಬಿಡುತ್ತದೆಂದು ತಮಾಷೆ ಮಾಡುತ್ತಿದ್ದರು, ಹೀಗೆ ಡೋಮನ ಮುಗ್ಧ ಮನಸ್ಸಿನ ತುಂಬಾ ಹಣ್ಣಿಗೆ ಸಂಬಂಧ ಪಟ್ಟ ಭಾವನೆಗಳ ತುಂಬಿಕೊಂಡವು. ಡೋಮ ತನ್ನ ನಾಲಿಗೆಯಿಂದ ಮೂಗಿನ ತುದಿಯನ್ನು ಸವರಿಕೊಳ್ಳುವುದರಲ್ಲಿ ಊರ್ತುಂಬ

ಪ್ರಖ್ಯಾತನಾಗಿದ್ದನು. ಆದ್ದರಿಂದ ಮೂಗಿಗೆ ತುಪ್ಪ ಸವರೋ ಕೆಲಸ ಎಂಬ ಗಾದೆಗೆ ಅವನು ಹೆಸರು ವಾಸಿಯಾಗಿದ್ದನು. ಇದೆಲ್ಲಾ ಇವನ ಮುಗ್ಧತೆಯನ್ನು, ಅದರೊಂದಿಗೆ ಅರಿಯುವ ಕುತೂಹಲವನ್ನು ಮತ್ತು ಶ್ರದ್ದೆಯನ್ನೂ ಗುರುತಿಸಬೇಕಾಗುತ್ತದೆ.

ಗೌಡರು ಗಿಡಗಳನ್ನು ಬೆಳೆಸುವುದರಲ್ಲಿ ಸಾಧ್ಯವಿಲ್ಲದಿರುವಾಗ ಕಾಟೆಗರವನದ ಡೋಮ ಗಿಡದ ಆರೈಕೆ ಮಾಡುವುದು ಸಾಧ್ಯವಾಗದ ಮಾತು ಎಂದು ವಿವರವಾಗಿ ಹೇಳಿದರು. ಇವನ ವೃತ್ತಿಯೇ ಬೇರೆ ಹಾಗಾಗಿ ಗಿಡ ಬೆಳೆಸುವ ಅನುಭವ ಅವನಿಗಿಲ್ಲ. ಹೀಗೆ ಅವನನ್ನು ಗ್ರಾಮ ಸೇವಕರು ಹೀಯಾಳಿಸುತ್ತಿದ್ದರು. ಡೋಮ ಅಷ್ಟಕ್ಕೆ ಕೈ ಕಟ್ಟಿ ಕೂಡಲಿಲ್ಲ. ಗೌಡರ ತೋಟದಲ್ಲಿ ಒಂದು ಸಸಿಯನ್ನು ಮಾತ್ರ ಕಿತ್ತೊಯ್ದು ತನ್ನ ಹಟ್ಟಿಯ ಹಿತ್ತಲಲ್ಲಿ ನೆಟ್ಟರೆ ಎಂಬ ಯೋಚನೆ ಡೋಮನ ತಲೆಯಲ್ಲಿ ಮೊಳೆಯಿತು. ಅವತ್ತೇ ಅವನು ಕಾರ್ಯಗತ ಮಾಡಿದನು. ಇಲ್ಲಿ ಡೋಮ ಸಸಿಗಳನ್ನು ನೆಟ್ಟು ತನ್ನ ಕಷ್ಟವನ್ನು ನೀಗಿಸಬಹುದೆಂದು ತಿಳಿಯುತ್ತಾನೆ. ಆದರೆ ಅಲ್ಲಿ ಯಾರೂ ಸಹ ಅವನಿಗೆ ಗಿಡ ಕೊಡದ್ದೇ ಇದ್ದಾಗ ಕಳ್ಳತನ ಮಾಡುವ ಪರಿಸ್ಥಿತಿಗೆ ಒಳಗಾಗುತ್ತಾನೆ. ಇಲ್ಲಿ ಪರಿಸ್ಥಿತಿಯ ಅನಿವಾರ್ಯ ಇವನನ್ನು ಕಳ್ಳನನ್ನಾಗಿಸುತ್ತದೆಯೇ ಹೊರತು ದೋಚುವಿಕೆ ಅವನ ಪ್ರವೃತ್ತಿಯಲ್ಲ. ಒಡಲಾಳದಲ್ಲಿ ಬರುವ ಕಾಳಣ್ಣ ಕಡ್ಲೆಕಾಯಿ ಕಳ್ಳತನ ಮಾಡಿದ ಪ್ರಸಂಗ ಇಲ್ಲಿ ನೆನಪಾಗುತ್ತದೆ. ಅತಂತ್ರ ಪರಿಸ್ಥಿತಿ ನಾಡಿನ ಯಾವ ಮೂಲೆಯಲ್ಲಿದ್ದರೂ ಒಂದೆ. ಮಸರೆ ಮಣ್ಣಿನ ಸಹಿತ ಗೇಣುದ್ದದ ಗಿಡವೊಂದನ್ನು ದೋತರದ ಮರೆಯಲ್ಲಿ ಹುಷಾರಿಂದ ಒಯ್ದು ಹಟ್ಟಿಯ ಹಿತ್ತಿಲಲ್ಲಿ ಹಾಸುಗಲ್ಲಿಗೆ ಎರಡೂವರೆ ಮೊಳ ದೂರದಲ್ಲಿ ಪಾತಿ ಮಾಡಿ ಸಿಹಿ ನೀರೆರೆದ. ಬ್ಯಾಡರ ಹನುಮಕ್ಕನ ಹಟ್ಟಿ ಸುತ್ತ ಉದುರಿದ್ದಿರ ಬಹುದಾದ ಕೋಳಿ ಗೊಬ್ಬರವನ್ನಾಯ್ದು ತಂದು ಹಾಕಿದ. ಚಿಕ್ಕ ಪುಟ್ಟ ಕಳೆ ತೆಗೆದು ನೀಟು ಮಾಡಿದ ತನ್ನ ಗಿಡ ಓಣಿಯವರ ಹಾಳು ಕಣ್ಣುಗಳಿಗೆ ಬೀಳುವುದು ಎಂಬ ಭಯ ಹೊಂದಿದವನಾಗಿ ಇಡೀ ಹಿತ್ತಲಿಗೆ ಆಳೆತ್ತರದ ನೆರಕೆ ಕಟ್ಟಿದನು. ಹೀಗೆ ಗಿಡವನ್ನು ತನ್ನ ಹಿತ್ತಲಿನಲ್ಲಿ ಬೆಳೆಸ ತೊಡಗಿದ್ದನು. ಮೊದಲು ಸಸಿ ಬಾಡಿದಂತೆ ಕಂಡು ಬಂತು. ನಂತರ ಆರು ದಿನಗಳಲ್ಲಿ ಎಲೆಗಳೆಲ್ಲ ಉದುರಿ ಬರಿ ಕಡ್ಡಿಯಷ್ಟೆ ನಿಂತಿತ್ತು. ಗಿಡ ಬೆಳೆದಿದ್ದಾಗ ಕುಕ್ಕುರುಗಾಲಲ್ಲಿ ಕುಂತು ಯೋಚಿಸತೊಡಗಿದ್ದನು. ಮೈಲಿಗೆಯ ಸೀರೆ ಗಿಡಕ್ಕೆನಾದರೂ ತಗುಲಿರಬಹುದೇ ಅಂತ ಕಣಿಯನ್ನು ಕೇಳಿದನು. ಮುಟ್ಟು ನಿಂತಿದ್ದ ಸಿಟ್ಟಿನಿಂದ ಕುಂಟ ಡೋಮನನ್ನು ಗದರಿಸಿಕೊಂಡಳು. ಸಿವಾ ಇಟ್ಟಂಗಾಗತೈತಿ ಎಂದು ಚಿಂತಿಸ ತೊಡಗಿದ್ದನು.

ಡೋಮ ಪ್ರೀತಿಯಿಂದ ಅನೇಕ ನಿರೀಕ್ಷೆ ಇಟ್ಟು ಕೊಂಡು ಬೆಳೆಸಿದ ದ್ಯಾವಗ ತಂದೆಯ ಇಷ್ಟಕ್ಕೆ ವಿರುದ್ದವಾಗಿ ಮದುವೆ ಯಾಗಿದ್ದ. ಚವುಡಪ್ಪ ತಾಯಿಯ ಗುಡಿಯಲ್ಲಿ ತನ್ನ ಪ್ರೀತಿಯ ಮಗ ದ್ಯಾವಗ ಚಿಕ್ಕೀರಿಯ ಕೊರಳಿಗೆ ತಾಳಿ ಕಟ್ಟುತ್ತಿದ್ದಾಗ ಡೋಮ ಹಟ್ಟಿಯ ಹಿತ್ತಿಲಿನಲ್ಲಿಯೇ ಇದ್ದನು. ತಾನು ಹಾಕಿದ ಉಗುಳು ದಾಟಿದ ಮಗ ಇದ್ದರೆಷ್ಟು ಸತ್ತರೆಷ್ಟು? ಎಂದು ಯೋಚಿಸಿತೊಡಗಿದ್ದನು. ಮಾದೇವಯ್ಯನವರ ಅಟವಾಳಿಗೆಯಲ್ಲಿ ಇಸಪಿಟ್ಟು ಆಡುವವರಿಗೆ ಕಾಫಿ ಬೀಡಿ ಸಿಗರೇಟು ಸಪ್ಲೆ ಮಾಡುವ ಮಗ ರಂಗನ ಮೈಯೊಳಗೆ ಚೂರೂಪಾರು ಗೌಡರ ಗುಣಗಳಿವೆ ಎಂಬ ಕಾರಣಕ್ಕಾಗಿ

ಅವನ ಕಣ್ಣಿಗೆ ಗಿಡ ಬೀಳದಂತೆ ನೋಡಿಕೊಳ್ಳುತ್ತಿದ್ದನು. ಈ ಕತೆಯಲ್ಲಿ ಭೂಮಿಗೂ ಮತ್ತು ಡೋಮನಂಥ ಮನುಷ್ಯರಿಗು ನಡುವೆ ಇರಬಹುದಾದ ಸಂಬಂಧದ ಆಪ್ತತೆಯ ಸಂಕೇತವೆ ಆ ಗಿಡ. ತನ್ನ ಹೃದಯವೆ ಗಿಡದ ರೂಪದಲ್ಲಿ ಬೆಳೆಯುತ್ತಿರಬಹುದೇನೋ ಎಂದು ಡೋಮನಿಗೆ ಅರಿವಾದಾಗ ಎದೆ ಸೆಟೆದು ನಡೆದಾಡತೊಡಗಿದ. ಮೇಲೆಯೇ ಕೂಡು ಹುಬ್ಬಿನ ಸೊಸೆ ಸರಿಯಾಗಿ ಉಂಬಾಕಿಡದಿದ್ದರೂ ಊರು ಮಾಡುವ ಗೌಡ ಸರಿಯಾಗಿ ಕೂಲಿ ಕೊಡದೆ ಇದ್ದರೂ ಡೋಮ ಬರುಬರುತ್ತ ಹುಡುಗನಾಗುತ್ತಿರುವನಲ್ಲಾ ಊರಿನ ಮುಖ್ಯ ಬೀದಿಗಳಲ್ಲಿ ಎದೆಸೆಟೆಸಿ ತಿರುಗಾಡುತ್ತಿರುವನಲ್ಲ, ದವುಶೇರ ಮುಖದಲ್ಲಿಬಹುದಾದ ರಾಜಕಳೆ ಕಾಟೆಗರನಾದ ಡೋಮನ ಸುಕ್ಕುಗಟ್ಟಿದ ಹಿಡಿಗಾತ್ರದ ಮುಖದ ಮೇಲೆ ನೆಲೆಸಿರುವುದಲ್ಲಾ?... ಗಿಡ ಚೆನ್ನಾಗಿ ಬೆಳೆಯುತ್ತಿರುವುದನ್ನು ಕಂಡು ಅವನ ಆತ್ಮ ವಿಶ್ವಾಸ ದೃಢವಾಗುತ್ತದೆ. ಇತ್ಯಾದಿಯಾಗಿ ಅರ್ಥ ಮಾಡಿಕೊಳ್ಳುವ ಹಿನ್ನೆಲೆಯಲ್ಲಿಯೇ ಊರಿನ ಹಲವರು ಯೋಚಿಸುವಂತೆ ಕಂಡು ಬಂದರು ಒಂದು ಗಿಡ ಬೆಳೆಸಿದಾಗ ಡೋಮನ ಮುಖದಲ್ಲಿ ಮೂಡಿದ ಆತ್ಮ ವಿಶ್ವಾಸ ಇಲ್ಲಿ ಅದ್ಭುತವಾದುದು. ಇಂತಹವರಿಗೆ ಒಂದಿಷ್ಟು ಹೊಲ ಇಲ್ಲಿ ಬೆಳೆ ಬೆಳೆಯುವ ಅವಕಾಶ ಸಿಕ್ಕರೆ? ಎಂಬ ಯೋಚನೆಗಳನ್ನು ಈ ಪ್ರಸಂಗ ಮೂಡಿಸುತ್ತದೆ. ಆದರೆ ಭೂವಿಯ ಮೇಲೆ ಅಧಿಕಾರವನ್ನು ಹೊಂದುವ ಹಕ್ಕನ್ನು ಮನುವಾದಿಗಳು ಈ ದಲಿತರಿಗೆ ಕೊಟ್ಟಿಲ್ಲ. ಅದ್ದರಿಂದ ಭೂದೇವಿಯನ್ನು ತಮ್ಮ ಆಸ್ತಿಯನ್ನಾಗಿ ಮಾಡಿಕೊಳ್ಳುವ ಅವಕಾಶ ಇಲ್ಲದವರಿವರು.

ಡೋಮನ ಮನೆ ಮುಂದೆ ಗಿಡ ಬೆಳೆದಿರುವುದನ್ನು ಕೇಳಿದ ಗೌಡ ಡೋಮನ ಹಿತ್ತಲಲ್ಲಿ ಹಣ್ಣಿನ ಗಿಡವೊಂದು ಬೆಳೆದು ನಿಂತಿದೆ ಎಂಬುದನ್ನು ತಾನೇ ಖುದ್ದಾಗಿ ಸರ್ಕಾರಕ್ಕೆ ಹೇಳುತ್ತಾನೆ. ಆಗ ಹ್ಞಾ... ಒಬ್ಬ ಕಾಟೆಗರವ ಒಂದು ಹಣ್ಣಿನ ಗಿಡ ಬೆಳೆಸುವುದಂದರೇನು? ಎಂದು ಆತ ಮೈ ಪರಚಿಕೊಂಡನು. ಡೋಮ ತನ್ನ ತೋಟದಿಂದಲೆ ಸಸಿ ಕದ್ದೊಯ್ದು ಹಚ್ಚಿ ಕೊಂಡಿರುವನೆಂಬುದರಲ್ಲಿ ಗೌಡನಿಗೆ ಸಂಶಯವಾಗಿತ್ತು ಈ ಕತೆಯಲ್ಲಿ ಸಾಮಾಜಿಕವಾಗಿ ಕೂಡ ಡೋಮ ಹಣ್ಣಿನ ಗಿಡದ ಬೆಳೆಸುವಿಕೆಯಲ್ಲಿ ಮನುಷ್ಯನ ಶ್ರದ್ದೆ ಅನಾವರಣಗೊಳ್ಳುತ್ತದೆ. ಹಾಗೆಯೇ ಗೌಡನ ನಡವಳಿಕೆ ಕಂಡಾಗ ಶೋಷಣೆಯ ಪ್ರತಿನಿಧಿಕ ಸ್ವರೂಪವನ್ನು ಕಾಣುತ್ತೇವೆ. ಗಿಡವನ್ನು ಉಳಿಸಿಕೊಳ್ಳ ಬೇಕೆಂಬ ಇಚ್ಚೆ ಡೋಮನಲ್ಲಿ ಪ್ರಬಲವಾಗುತ್ತಿದ್ದಂತೆ ಗೌಡ ಅದನ್ನು ನಾಶಮಾಡಬೇಕೆಂದು ಪ್ರಯತ್ನಿಸುತ್ತಾನೆ. ಅದಕ್ಕೆ ಅವನ ಮಗ ರಂಗನನ್ನು ಬಳಸಿಕೊಳ್ಳುವುದು ಡೋಮನ ಬದುಕಿಗೆ ಬದ್ದ ಬಹುದೊಡ್ಡ ಹೊಡೆತವಾಗುತ್ತದೆ. ತನ್ನ ಜಮೀನಿನಲ್ಲಿ ಬೆಳೆಯಲು ಸಾದ್ಯವಾಗದಿದ್ದಾಗ ತನ್ನ ಆಳಿನ ಮನೆಯಂಗಳದಲ್ಲೂ ಬೆಳೆಯಬಾರದೆಂಬ ದುಷ್ಟತನ ಗೌಡನಿಗೆ. ಒಳಿತೆಲ್ಲವೂ ಸದಾ ನಮ್ಮ ಪಾಲಿನದೇ ಅಗಿರಬೇಕೆಂಬ ಮೇಲ್ವರ್ಗದ ಕೆಟ್ಟತನ ಇಲ್ಲಿಯೂ ಹೊರಹೊಮ್ಮುತ್ತದೆ.

ಭೂಪಕರ್ಣ ಗೌಡ ಅಷ್ಟಕ್ಕೂ ಬಿಡಲಿಲ್ಲ ಗೌಡ ಕಣ್ಣುಮುಚ್ಚಿ ಮಲಗಿದ್ದರೆ ಸಾಕು ಬೆಳೆದ ಗಿಡ ಒಕ್ಕರಿಸಿ ಕೊಕ್ಕರಿಸಿ ನಕ್ಕಂತಾಗಿ ಬಿಡುವುದು ಗಿಡದ ಪ್ರತಿ ಎಲೆ ಡೋಮನ ನಗೆಯನ್ನು ಪ್ರತಿಧ್ವನಿಸಿದಂತಾಗಿ

ಬಿಡುವುದು ಗೌಡ ಏನಾದರೂ ಆಗಲಿ ಎಂದು ನಿರ್ಧರಿಸಿ ಕೈಯಲ್ಲಿ ಮಚ್ಚು ಹಿಡಿದುಕೊಂಡು ಮೈತುಂಬ ಕಂಬಳಿ ಹೊದ್ದು ತಿಮ್ಮನ ಮನೆಯ ಹಿಂದಿನ ಸಂದಿಯಿಂದ ಡೋಮನ ಹಟ್ಟಿ ಕಡೆ ನಡೆದನು. ಈ ಕತೆಯಲ್ಲಿ ಗೌಡ ಡೋಮನ ಮನೆ ಮುಂದೆ ಗಿಡ ಬೆಳೆಯುವುದನ್ನು ಕಂಡು ಹೊಟ್ಟೆ ಕಿಚ್ಚು ಪಡುವುದನ್ನು ಕಾಣುತ್ತೇವೆ. ಅಂದರೆ ಮೇಲ್ ವರ್ಗದವರು ಕೆಳವರ್ಗದವರನ್ನು ಮುಂದುವರೆಯಲು ಬಿಡುವುದಿಲ್ಲ ಎಂದು ತಿಳಿಯಬಹುದಾಗಿದೆ. ಸಹಿಸಿಕೊಳ್ಳದ ಹೊಟ್ಟೆ ಕಿಚ್ಚಿನ ಪರಮಾವದಿ ಇಲ್ಲಿದೆ ಕೊರಡ್ಕಲ್ ಶ್ರೀ ನಿವಾಸರಾಯರ 'ಧನಿಯರ ಸತ್ಯನಾರಾಯಣ' ಕತೆಯಲ್ಲಿ ಮಕ್ಕಳು ಬೆಳೆಸಿದ ಬಾಳೆಗಿಡ ದನಿಯರ ಮನೆಯ ಪೂಜೆಗೆ ಬಳಕೆಯಾಗುವುದು, ಬೆಸಗರ ಹಳ್ಳಿ ರಾಮಣ್ಣನವರ ಚೆಲುವನ ಪರಂಗಿ ಗಿಡಗಳಿಗಾದ ದುಃಸ್ಥಿತಿ ಈ ಕತೆಯ ಸಂದರ್ಭವನ್ನು ಹೋಲುತ್ತದೆ.

ಗೌಡ ಗಿಡ ಕಡಿಯಲಾಗದ ತನ್ನ ಹೇಡಿತನಕ್ಕೆ ತನ್ನಷ್ಟಕ್ಕೆ ತಾನೆ ಅಸಹ್ಯಪಡುತ್ತಾನೆ. ಡೋಮನ ಗಿಡವನ್ನು ತುಂಡರಿಸಿ ನಾಯಿನರಿ ಹದ್ದುಗಳಿಗೆ ಚಲ್ಲಿಸದಿದ್ದಲ್ಲಿ ತಾನು ನಡುಬಾನ ಹಳ್ಳಿ ಎಂಕನ ಗೌಡನಿಗೆ ಹುಟ್ಟಿದವನಲ್ಲ ಎಂದು ಎಪ್ಪಾರ ಎಲಿಗೆವ್ವನ ಮೇಲೆ ಶಪಥ ಮಾಡುತ್ತಾನೆ. 'ಮಾತು ಆಡಿದರಾಯ್ತು ಮುತ್ತು ಒಡೆದರೆ ಹೋಯ್ತು' ಎಂದು ತಿಳಿದಿದ್ದ ಜ್ಞಾನಿ ಗೌಡನಾಗಿದ್ದ ಹೀಗೆ ಚಡ ಪಡಿಸುತ್ತಿದ್ದಾಗ ಅಷ್ಟು ದೂರದಲ್ಲಿ ಬರುತ್ತಿದ್ದ ರಂಗ ವೈಶಾಖದ ಮಧ್ಯಾಹ್ನದಲ್ಲಿ ಪ್ರಕಟವಾದ ಚಂದ್ರೋದಯದಂತೆಯೇ ಜಟಾಯುವಿನ ರೆಕ್ಕೆಗಳನ್ನು ಕಚಕಚ ಅಂತ ಕತ್ತರಿಸಿದ ರಾವಣನಂತೆಯೇ ಗೋಚರಿಸಿದ. ಇಲ್ಲಿ ಡೋಮನ ಮಗನನ್ನು ಗೌಡರು ದುರ್ಬಳಕೆ ಮಾಡಿಕೊಳ್ಳುವ ಚಿತ್ರಣವಿದೆ.

ಡೋಮ ಸೋಮವಾರದಂದು ಕನಸನ್ನು ಕಾಣುತ್ತಾನೆ. ಗಿಡವೆಲ್ಲ ಕೆಂಪಾನು ಕೆಂಪಗೆ ಬೆಳೆದಿದ್ದವು. ಗಬಗಬನೆ ತಿಂದು ಮರುಕ್ಷಣ ಚಪ್ಪರ ಚನ್ನಪ್ಪನ ಹದಿನೆಂಟು ಮಾಣ ತೂಕ ಯುವಕನಾದಂತೆಯೂ ತೆರೆದ ತೋಳಿನಿಂದ ಸಂಜೀವಪ್ಪನನ್ನು ಗಾಢವಾಗಿ ಅಪ್ಪಿಕೊಂಡು ಸುಖವಾಗಿ ನರಳಿದಂತೆಯೂ ಕನಸು ಕಂಡಿದ್ದನು. ಈ ಕತೆಯಲ್ಲಿ ಡೋಮನ ಆಸೆ ನಿರಾಶೆಗೊಳಗಾಗುವುದು ವಿಷಾದದ ಸಂಗತಿ ಎಂದು ತಿಳಿಯಬಹುದಾಗಿದೆ. ಆದರೆ ಗೌಡ ಆ ಗಿಡಗಳನ್ನು ಮಚ್ಚಿನಿಂದ ಕಡಿದಿರುವುದನ್ನು ಅವನಿಗೆ ಅಗಾಧವಾದ ನೋವು ಉಂಟುಮಾಡಿರುವುದನ್ನು ಕಾಣುತ್ತೇವೆ.

ಗಿಡದ ಒಂದೊಂದು ಎಲೆಯೂ ತಮ್ಮೊಳಗೆ ಒಂದೊಂದು ತಲೆಮಾರಿನ ಸಾವಿನ ಗುಟ್ಟೆ ಅಡಗಿರುವ ರೀತಿಯಲ್ಲಿ ಬಾಡಿದ್ದವು. ಗೌಡನಂತಹ ಮೇಲ್ವರ್ಗದ ಊಳಿಗಮಾನ್ಯರ ಹಿಡಿತಕ್ಕೆ ಸಿಕ್ಕು ಶತಶತಮಾನಗಳಿಂದ ನರಳಿ ನಲುಗಿ ಹೋದ ಲೆಕ್ಕವಿಲ್ಲದಷ್ಟು ಜನರ ಬದುಕು ನಾಶವಾಗಿರುವುದು ನಮ್ಮ ಭಾರತದ ಇತಿಹಾಸದ ಒಂದು ಮಗ್ಗುಲೆಂಬುದು ಸತ್ಯ. ಹಿತ್ತಲ ಸೌಂದರ್ಯವೆ ಮಣ್ಣುಗೊಂಡಿತ್ತು ಒಟ್ಟಿನಲ್ಲಿ ತನ್ನ ದೇಹದ ರುಂಡ ಮುಂಡ ಕೈಕಾಲುಗಳ ಜೊತೆಗೆ ಪಂಚೇಂದ್ರಿಯಗಳು ನವರಂಧ್ರಗಳು ವಿಧವಿಧಗೊಂಡು ಅಲ್ಲೊಂದು ಇಲ್ಲೊಂದು ಬಿದ್ದಿರುವುದು ಎಂದೆ ಭಾವಿಸುವುದು ಡೋಮಗೆ ಅನಿವಾರ್ಯವಾಗಿತ್ತು. ತನ್ನ ಹೆಂಡತಿ ಸತ್ತಾಗಲೂ ಇಷ್ಟೇ ದುಃಖವನ್ನು ಅನುಭವಿಸಿದ್ದನು.

ಈ ತನ್ನ ಗಿಡದ ಮೇಲಿನ ಆಸೆಯು ಹೀಗೆ ನಿರಾಸೆಗೆ ಒಳಗಾಗು ಮಾಡಿ ಅವನನ್ನು ಈ ವ್ಯಥೆಗೆ ದೂಡಿರುವುದು ಇಲ್ಲಿರುವ ವಾಸ್ತವ.

ಗೌಡ ಕೊಟ್ಟ ಎಂಜಲಿಗೆ ಕಟ್ಟು ಬಿದ್ದು ತನ್ನ ಇದ್ಯಾವಂತ ಮಗ ರಂಗನೆ ತನ್ನ ಪ್ರಾಣಕ್ಕೆ ಸಮನಾದ ಗಿಡವನ್ನು ಕತ್ತರಿಸಿದ ಎಂದು ತಿಳಿದು, ಡೋಮ ಮಾದೇವಯ್ಯನವರ ಇಸಪೀಡು ಆಟದ ಮನೆಗೆ ನುಗ್ಗಿ ಕಪ್ಪು ಲೋಟ ತೊಳೆಯುತ್ತಿದ್ದ ರಂಗನ ಕೊರಳ ಪಟ್ಟಿ ಹಿಡಿದು ನಿನ್ನ ಕೈಗೆ ಕರಿನಾಗ್ರಾವು ಕಡಿಯಾ... ನಾನೇನ್ ನಿಂಗ ದ್ರೋಹ ಮಾಡಿದ್ದೆ ಅಂತ ನೀನ್ ನನ್ ಗಿಡ ಕಡ್ದು ಆಕ್ದೆ... ಅಡುದೋನ್ಗಿಂತ ಗೌಡನ ಎಂಜ್ಲು ಎಚ್ಚಾಯ್ತೇನು, ಯಾವತ್ತೋ ಕುಡಿದು ಬಿಟ್ಟಿದ್ದ ಸಾರಾಯಿಯ ಅಮಲು ಅವತ್ತು ನೆತ್ತಿಗೇರಿ ಬಿಟ್ಟು ತನ್ನ ತಂದೆಯಾದ ಡೋಮನನ್ನು ಜಾಡಿಸಿ ತಳ್ಳಿದನು. ಬುಗಂಟೆ ಹಣೆಯ ನಡುಬತ್ತಿನಲ್ಲಿಯೇ ಉಬ್ಬಿ ಬೆಟ್ಟದ್ದರಿಂದ ಡೋಮ ಹೆಚ್ಚು ಕಡಿಮೆ ಖಡ್ಗಮೃಗದಂತೆಯೇ ಕಾಣಿಸುತ್ತಿದ್ದನು. ಈ ಕತೆಯಲ್ಲಿ ಗೌಡರ ದೌರ್ಜನ್ಯಕ್ಕೆ ಡೋಮ ಬಲಿಯಾಗುವುದದನ್ನು ಕಾಣುತ್ತೇವೆ. ಜೊತೆಗೆ ಡೋಮ ಗೌಡರ ಗಿಡಗಳನ್ನು ನಾಶಮಾಡುವ ಆಕ್ರೋಶವನ್ನು ತಳೆಯುತ್ತಾನೆ.

ಡೋಮ ಗೌಡನ ಮೇಲೆ ಸಿಟ್ಟನಿಂದ ಗಿಡಗಳನ್ನೆಲ್ಲ ಕತ್ತರಿಸುತ್ತಾನೆ. ಆವೇಶ ಬಂದವನಂತೆ ಗಿಡಗಳನ್ನು ಕಡಿಯುತ್ತಿದ್ದ ಬಾಯಿಯಲ್ಲಿ ಬೇವಿನ ಕಡ್ಡಿಯ ಕಹಿ ಕಫದ ಜೊತೆಗೆ ಕಲೆತು ಅಸಹ್ಯ ಬರಿಸುತ್ತಿದ್ದರೂ ಲೆಕ್ಕಿಸದೆ ಊರೊಳಕ್ಕೆ ಓಡಿಹೋಗಿ ಏಳೆಂಟು ಮಂದಿಯನ್ನು ಕರೆದುಕೊಂಡೆ ಬಂದ. ಎಲ್ಲರೂ ಕೂಡಿ ಹುಲಿಯನ್ನು ಹಿಡಿಯುವ ರೀತಿಯಲ್ಲಿ ಡೋಮನನ್ನು ಹಿಡಿದರು. ಡೋಮನ ಪ್ರತಿಭಟನೆ ಗೌಡರ ವಿರುದ್ಧವಾಗಿ ಈ ರೀತಿ ವ್ಯಕ್ತವಾಯಿತು. ಅಸಹಾಯಕತೆಯೇ ಕೊನೆಗೆ ಆಕ್ರೋಶವಾಗಿ ಮಾರ್ಪಡುವುದು ಇಲ್ಲಿನ ವಿಶೇಷ.

ಗೌಡನನ್ನು ಏಕೆ ಪ್ರಶ್ನಿಸುವುದಿಲ್ಲ ಗೌಡ ಮೇಲ್‌ವರ್ಗದವರಾದ್ದರಿಂದ ಜನ ಅವನನ್ನು ಪ್ರಶ್ನೆಕೇಳಲು ಹಿಂಜರಿಯುತ್ತಾರೆ. ಡೋಮನನ್ನು ಪಂಚಾಯಿತಿ ಕಟ್ಟೆಯ ಮೇಲೆ ಕೂರಿಸಿ ಎಲ್ಲರೂ ಪ್ರಶ್ನೆಗಳನ್ನು ಹಾಕತೊಡಗಿದ್ದರು. "ಡೋಮ ನೀಯಾಕ ಗೌಡರ ತ್ವಾಟ ಆಳು ಮಾಡ್ದೆ?" ಎಂದು ಪ್ರಶ್ನೆಯ ಸುರಿಮಳೆಯನ್ನು ಕೆಳತೊಡಗಿದ್ದರು ಒಬ್ಬೊಬ್ಬರ ನೂರು ಮಾತುಗಳಿಗೆ ಉತ್ತರವಾಗಿ ಒಂದು ಮಾತನ್ನು ಆಡದೆ ಡೋಮ ಮಿಕಿ ಮಿಕಿ ಎಲ್ಲರನ್ನು ನೋಡಿದ ಕೊನೆಗೆ ಗಹಗಹಿಸಿ ನಗತೊಡಗಿದ. ಕರ್ಣಕಠೋರವಾಗಿದ್ದ ಆ ನಗು ದೈವಸ್ಥರ ನಾಲಿಗೆಗೆ ಲಗಾಮು ಹಾಕಿತು. ಗಹಗಹಿಸಿ ನಗುತ್ತ ವಾಯುವ್ಯ ದಿಕ್ಕಿನ ಕಡೆ ನಡೆದ ಡೋಮನನ್ನು ಯಾರೂ ತಡೆಯಲಿಲ್ಲ. ಎಲ್ಲರೂ ಡೋಮನಿಗೆ ಹುಚ್ಚು? ಅಥವಾ ದೆವ್ವವೋ? ಎಂದು ಎಲ್ಲರು ಮಾತನಾಡಿಕೊಳ್ಳುತ್ತಿದ್ದರು.

ಕತೆಯ ಸಂದರ್ಭದಲ್ಲಿ ಸೂಚಿತವಾಗುವಂತೆ ವೈಯಕ್ತಿಕ ವಿಮೋಚನೆಯ ಮೊದಲ ಮಾರ್ಗದಲ್ಲಿ ಹೀಗೆ ಸೋಲನ್ನು ಎದುರಿಸುವ ಡೋಮ ಎರಡನೆಯ ಉಗ್ರಗಾಮೀ ಮಾರ್ಗದಲ್ಲೂ ತನ್ನ ನಾಶವನ್ನೇ

ಕಂಡುಕೊಳ್ಳುತ್ತಾನೆ. ಇದು ಅವನ ಪಾಲಿಗೆ ಅನಿವಾರ್ಯವೆನ್ನಿಸಿದರೂ ಅವನ ವರ್ಗದ ವಿಮೋಚನೆಗಾಗಿ ವೀರಭದ್ರಪ್ಪನವರು ಕಲ್ಪಿಸಿಕೊಳ್ಳುವ ಮಾರ್ಗ ಯಾವುದು ಎಂಬ ಸೈದ್ಧಾಂತಿಕ ಪ್ರಶ್ನೆ ಏಳುತ್ತದೆ.

ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಅಕ್ಷರ ಕಲಿಯುವ ಸ್ಥಿತಿಯು ಮಾನವೀಯತೆಯೊಡನೆ ಸಂಪರ್ಕ ಕಲ್ಪಿಸಿಕೊಳ್ಳುವುದಿಲ್ಲ ಎಂಬುದನ್ನು ರಂಗ ಪ್ರತಿನಿಧಿಸುತ್ತಾನೆ. ಡೋಮ ಇಟ್ಟುಕೊಂಡ ಯಾವ ಭರವಸೆಯನ್ನು ಈಡೇರಿಸಿಕೊಳ್ಳದಂತಹ ಆವರಣವು ಸೃಷ್ಠಿಯಾಗುವುದನ್ನು ಕಾಣುತ್ತವೆ.

ಕುಂ.ವೀ ರವರ ಕತೆಗಳ ವಿಶಿಷ್ಟವೆಂದರೆ ಮಧ್ಯಮವರ್ಗದ ಓದುಗರಿಗೆ ಅಷ್ಟಾಗಿ ಪರಿಚಿತವಲ್ಲದ ಅವರನ್ನು ಬೆಚ್ಚಿ ಬೀಳಿಸಬಲ್ಲ ಕೆಳವರ್ಗದ ಜೀವನ ಪ್ರಪಂಚ ಕೆಳವರ್ಗದ ಸ್ಥಿತಿಯನ್ನು ದಾಖಲಿಸುತ್ತವೆ. ಅವರ ಸಾಧ್ಯತೆಯನ್ನು ಕಾಣಬಯಸುವ ಮಹಾತ್ವ ಕಾಂಕ್ಷೆಯನ್ನು ಇಟ್ಟುಕೊಂಡು ಬರೆಯುತ್ತಾರೆಂದು ಕುಂ. ವೀರಭದ್ರಪ್ಪನವರನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇವರ ಕಥೆಗಳಲ್ಲಿ ಬರುವ ಮುಖ್ಯ ಪಾತ್ರಗಳು ಡೋಮ, ಬಸವ, ಠೊಣ್ಣಿ, ಕಿವುಡ, ಕತ್ತಲ ಮುಂತಾದವರು ವಿಲಕ್ಷಣ ವ್ಯಕ್ತಿಗಳೆಂಬ ಏಕೈಕ ಕಾರಣದಿಂದ ಮುಖ್ಯರಾಗದೆ ಒಂದು ವರ್ಗದ ನೋವು ನಲಿವುಗಳನ್ನು ದುಃಖ ದುಮ್ಮನಗಳನ್ನು ಕನಸುಗಳನ್ನು ಸಾಂಕೇತಿಸುವುದರಿಂದ ವೀರಭದ್ರಪ್ಪನವರ ಬರವಣಿಗೆಗೆ ಸಾಂಸ್ಕೃತಿಕ ಮಹತ್ವ ಇರುವುದನ್ನು ಕಾಣುತ್ತೇವೆ. ಇವರು ವಿಲಕ್ಷಣ ವ್ಯಕ್ತಿಗಳಾದಂತೆ ಕಂಡು ಬಂದರೂ ಇದಕ್ಕೆ ಕಾರಣ ಒಂದು ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆ ಎಂಬುದು ಸುಸ್ಪಷ್ಟ. ವ್ಯವಸ್ಥೆಯ ಕ್ರೌರ್ಯ ಅವರು ವ್ಯವಸ್ಥೆಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವಂತೆ ಮಾಡುತ್ತದೆ. ಇದು ನೋಡುವವರಿಗೆ ವಿಲಕ್ಷಣ ಎಬಿಸಬಹುದು. ಆದರೆ ಇದು ಆಗಬೇಕಾದದ್ದೆ. ಇದು ಅನಿವಾರ್ಯ. ಇದು ಒಂದು ಬಗೆಯಲ್ಲಿ ಸಂಸ್ಕಾರವಂತ! ಸಮಾಜಕ್ಕೆ ಪಾಠವಾಗಬೇಕು.

ದೇವರ ಹೆಣ

ಈ ಕತೆಯಲ್ಲಿ ಮುಖ್ಯ ಪಾತ್ರ ರೊಣ್ಣಿ. ರೊಣ್ಣಿ ಅನ್ನ ಎಂಬ ಶಬ್ದ ಕಿವಿಗೆ ಬೀಳುತ್ತಲೆ ಹ್ವ ಹ್ವ ಅಂತ ನಕ್ಕು ಬಿಟ್ಟಿದ್ದನು. ಒಂದು ಹನಿ ಮಳೆ ಇಡೀ ನೆಲ ಎಂಬೋ ನೆಲ ಕೆಟ್ಟದಾಗಿ ಹಸಿದ ಹೊಟ್ಟೆಯಂಥಾಗಿ ಉರಿಉರಿಯತೊಡಗಿತ್ತು ರೊಣ್ಣಿಗೆ ಹೊಗೆಸೊಪ್ಪು ಮತ್ತು ಎಕ್ಕದ ಎಲೆ ಇದ್ದರೆ ಸಾಕು, ತಲೆಯೊಳಗಿನ ಮಿದಿಳನ್ನು ಸರಿಪಡಿಸಲಿಕ್ಕೆ ಮತ್ತು ಹೊಟ್ಟೆಯನ್ನು ಭರಭರನೆ ಊದಿಸಿ ನರನಾಡಿಗ ವಿಚಿತ್ರವಾದ ಸುಖ ನೀಡಲಿಕ್ಕೆ. ಈ ಕತೆಯಲ್ಲಿ ರೊಣ್ಣಿಗೆ ಎಕ್ಕದ ಎಲೆ ಮತ್ತು ಹೊಗೆಸೊಪ್ಪು ಚೈತನ್ಯ ನೀಡುವ ಶಕ್ತಿಗಳಾಗಿದ್ದವು.

ಊರನ್ನು ಆವರಿಸಿಕೊಂಡಿರುವ ಬರ, ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿರುವ ಪರಿಸ್ಥಿತಿ ತುತ್ತು ಅನ್ನಕ್ಕೂ ತೊಂದರೆ ಯಾಗಿರುವುದು ಈ ಚಿತ್ರಣದಲ್ಲಿದೆ. ಇದರ ಮಧ್ಯೆ ತಂಬಾಕು ಸೇದಿ ಚೈತನ್ಯ ಪಡೆಯುವುದು ತಾತ್ಕಾಲಿಕ ಬಿಡುಗಡೆಯ ಪ್ರಯತ್ನ. ಇಲಿಯೊಂದನ್ನು ಸುಟ್ಟು ತಿಂದು ಮುಖದ ತುಂಬ ನಳನಳಿಸುವ ಕಳೆ ತುಂಬಿಕೊಂಡಿದ್ದ ಹಿರೇಮಗ ಕೊಕ್ಕ ತನ್ನ ಟೆರಿಕಾಟು ಅಂಗಿಯ ಹತ್ತಾರು ಸಂದಿಗಳಲ್ಲಿ ನಿಗೂಢವಾಗಿ ಅಡಗಿರಬಹುದಾದ ನುಸಿ ಕ್ರಿಮಿಗಳನ್ನಾಯುವುದರಲ್ಲಿ ಮಗ್ನನಾಗಿರುವುದು ರೊಣ್ಣಿಗೆ ಕಂಡಿತು. ತಿಮ್ಮಿ, ಕುಲ್ಡಿ ಕನಸೆಂದರೆ ಊಟ. ಆದ್ದರಿಂದ ಊಟದ ಆಟವಾಡುವುದು ಕಣ್ಣಿಗೆ ಬಿದ್ದಿತ್ತು. ಆ ಆಟದಲ್ಲಿ ತಿಮ್ಮಿ ನವಣಕ್ಕಿ ಬಾನದ ಪಾಲ್ಬು ಮಾಡಿದಳು. ಕುಲ್ಡಿ ಘಮಾಡಿಸುವ ಸಾರಿನ ಪಾಲ್ಬು ಮಾಡಿದವಳು. ಇವೆರಡು ಉಂಡಂತೆ ದೇಗಿದಂತೆ ಕನಸುಕಂಡರು ಹೀಗೆ ಇವರಿಬ್ಬರೂ ಊಟ ಮಾಡುವುದು ಕನಸಾಗಿತ್ತು. ಊಟವೆ ಒಂದು ದೊಡ್ಡ ಕನಸು ಆಗಿದ್ದು ಈ ಆಸೆಯೇ ಇಲ್ಲಿ ಆಡುವ ಆಟವಾಗಿರುವುದು ಇಲ್ಲಿನ ವ್ಯಂಗ್ಯ.

ರೊಣ್ಣಿಯ ಬಳಿ ಪರಂಪಾರಗತವಾಗಿ ಬಂದಿದ್ದ ಒಂದು ಜೊತೆ ಕೆರಗಳಿದ್ದವು, ಆದರೆ ಅವುಗಳ ಪೈಕಿ ಒಂದನ್ನು ನಾಯಿ ಎತ್ತೊಯ್ದು ಏಳುಮುಖದ ಮಾರೆಮ್ಮನ ಗರ್ಭಗುಡಿಯಲ್ಲಿ ತಿಂದು ಮುಗಿಸಿತ್ತು. ಗೂಡಲ್ಲಿದ್ದ ಒಂದೆ ಚಪ್ಪಲಿ ಗಂಡ ಸತ್ತ ರಂಡೆಯಂತಿತ್ತು. ಚಲಿಸದೆ ಒಂಟಿಯಾಗಿತ್ತು. ಬೆಟ್ಟದಂಥ ಮನಸ್ಸಿನಿಂದ ಅದನ್ನು ನೋಡಿ ಉದ್ದನೆಯ ಉಸಿರು ಬಿಟ್ಟನು. ಇಲ್ಲಿ ಕೆರಗಳು ಸಹ ಇಲ್ಲದಿರುವ ಸನ್ನಿವೇಶವನ್ನು ಕಾಣುತ್ತೇವೆ ಬಸವದೇವರ ಗುಂಡಿ ಪವುಳಿಯಲ್ಲಿ ಇನ್ನೆಂಟು ದಿನಗಳೊಳಗಾಗಿ ಮಳೆ ಬಾರದಿದ್ದಲ್ಲಿ ಸಾಯುವದಾಗಿ ಎರಡು ವಾರಗಳ ಹಿಂದೆಯೇ ನುಡಿದು ತತ್ಪಲವಾಗಿ ಅನ್ನ ತ್ಯಜಿಸಿ ಮರಣಕ್ಕಾಗಿ ಎದುರು ನೋಡುತ್ತ ಕಳೇ ಬರದಂತೆ ಕೂತಿದ್ದ ತಾತ ಇರುವುದು ನೆನಪಾಯಿತ್ತು. ಎಲ್ಲಿರಿಗಿಂತಲೂ ಮೊದಲು ತಾತ ಸಾಯುವುದೇ ಎಂದು ಆಲೋಚಿಸುತ್ತಾನೆ. ಊರನ್ನು ಆವರಿಸಿ ಕೊಂಡಿರುವ ಬರದ ಚಿತ್ರಣ ಇಲ್ಲಿದೆ.

ಹೀಗೆ ದಾರಿ ಉದ್ದಕ್ಕೂ ಯೋಚಿಸುತ್ತಾ ಹೊಗೆಸೊಪ್ಪನ್ನು ಸೇದಲು ಎಕ್ಕೆ ಎಲೆಗಾಗಿ ಹುಲುಲಿ ಹಳ್ಳದ ಕಡೆ ಹೋಗಬೇಕಾದರೆ ದಾರಿಯಲ್ಲಿ ಬಂಡಿಯೊಂದು ಬರುವುದನ್ನು ಕಾಣುತ್ತಾನೆ. ಬಂಡಿಗೆ ಕಡೆಗೀಲಲ್ಲ

ಎಂದು ನೆನಪು ಮಾಡುತ್ತಾನೆ. ಆತ ಗಾಲಿ ಸರಿಪಡಿಸಿದ ನಂತರ ಕಡ್ಡಿ ಕೇಳುತ್ತಾನೆ. ಶೊಣ್ಣಿಯ ಪುಣ್ಯಕ್ಕೆ ಆ ಪಟ್ಟಣದಲ್ಲಿ ಎರಡು ದೀಪದ ಕಡ್ಡಿಗಳಿದ್ದವು, ಆದರೆ ಅವುಗಳ ಪೈಕಿ ಒಂದಕ್ಕೆ ಮಾತ್ರ ಮದ್ದಿತ್ತು. ಪರಖವೆಯ ಮರೆಯಲ್ಲಿ ಕೂತು ಜಾಣ ಶೊಣ್ಣಿ ತನ್ನ ಮನೆ ದೇವರನ್ನ ನೆನಯುತ್ತ ಚಿಲಿಮೆಗೆ ಬೆಂಕಿ ಹಚ್ಚಿ ಕೊಂಡನು. ಒಂದು ಸಾರಿಗೆ ಅವನು ಎಳೆದುಕೊಂಡ ಘಾಟು ಹೊಗೆ ಅವನ ದೇಹದ ಸಾವಿರದ ಕೋಣೆಗಳ ಬಾಗಿಲು ತೆರೆದಾಂಗಾಯಿತ್ತು. ಇಲ್ಲಿ ಹೊಗೆಸೊಪ್ಪು ಇವನಿಗೆ ತನ್ನ ಕಷ್ಟವನ್ನು ಮತ್ತು ಹಸಿವನ್ನು ನಿವಾರಿಸುವ ಔಷಧಿಯಂತಿದೆ. ಹೊತ್ತು ಕಳೆದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬ ಗಾದೆಯನ್ನು ತಿಳಿದವನಾದ ಶೊಣ್ಣಿ ಓಡುವವನಂತೆ ಊರ ಕಡೆ ಮುಖ ಮಾಡಿ ನಡೆಯತೊಡಗಿದನು. ಇಷ್ಟೊತ್ತಿಗಾಗಲೆ ಎತ್ತು ಸತ್ತಿರಬಹುದೆ ಹಾಗೆ ಸತ್ತಿದ್ದರೆ ಶಿವಪೂಜೆ ಗೌಡರು ತಮ್ಮ ಮನೆಗೆ ಮಾದಿಗನಾದ ತನಗಾಗಿ ಎದುರುನೋಡುತ್ತಿರ ಬಹುದೆಂದು ತಿಳಿಯುತ್ತಾನೆ. ಹೀಗೆ ಹೋಗುತ್ತಿರಬೇಕಾದರೆ ಕರಗಲ್ಲು ಕಂಡಿತ್ತು. ಕರಗಲ್ಲ ನೆತ್ತಿ ಮೇಲಿತ್ತು ಹುಚ್ಚೆಳ್ಳ ಎಣ್ಣೆ, ಅದನ್ನು ನಾಯಿಯೊಂದು ನೆಕ್ಕುತ್ತಿದ್ದಿತು. ಕರಗಲ್ಲು ಬೇರೆ ಅಲ್ಲ ಪರಮೇಶ್ವರನ ನೆತ್ತಿ ಬೇರೆ ಅಲ್ಲ ಎಂದು ತಿಳಿದಿದ್ದವನಾದ ಶೊಣ್ಣಿಗೆ ಸಿಟ್ಟು ಬಂತು ಹಚಾ ಎಂದು ಗದರಿಸಿದ್ದನು.

ಹೀಗೆ ಸುಮಾರು ನಾಕು ಮಾರು ದೂರದಲ್ಲಿ ಹೋಗುತ್ತಿರ ಬೇಕಾದರೆ ಎತ್ತಿನ ಯೋಗಕ್ಷೇಮವನ್ನು ವಿಚಾರಿಸಬೇಕೆಂದು ಗೌಡರ ಮನೆಯ ಕಡೆ ನಡೆಯುತ್ತಾನೆ. ಆದರೆ ಕೇಳುವುದು ಸರಿಯಲ್ಲ ಎಂದು ಶೊಣ್ಣಿ ಗೌಡರ ಮನೆ ಮಾದಿಗನೆಂದ ಮೇಲೆ ಮುಗಿಯಿತು ತಾನು ಅವರಿಗೆ ಜೇಷ್ಠ ಪುತ್ರನಿದ್ದಂತಯೇ ಲೆಕ್ಕ ಹಾಕಿದನು. ಅದೂ ಅಲ್ಲದೆ ಸತ್ತ ಎತ್ತು ಹೊತ್ತೊಯ್ದು ಕೊಯ್ಯುವುದು ತೊಗಲು ಮಾರಿ ತನ್ನ ಸ್ಥಿತಿಗತಿ ಸುಧಾರಿಸಿಕೊಳ್ಳುವುದು ತನ್ನ ಹಕ್ಕು ಎಂದು ನಿರ್ಧರಿಸಿದನು. ಹೀಗೆ ಹೋಗುತ್ತಿರಬೇಕಾದರೆ ಕೆಮ್ಮುತ್ತ ಕುಂತಿದ್ದ ಅಸ್ತಮ ರೋಗಿ ಕಟುಗರ ದಯಾನಂದಪ್ಪನ ಮುಂದೆ ನಿಂತು ಎಪ್ಪೋ ತೊಗಲಿನ ರೇಟು ಎಂಗೈತಿ ಎಂದು ಕೇಳಿದನು. ಎತ್ತಿಂದೋ, ಎಮ್ಮಿದೋ ಅಂತ ಕೇಳಿದನು. ಶೊಣ್ಣಿ ಆಗ ಎತ್ತಿಂದಪ್ಪೋ ಅಂದನು. ಹಂಗಾದ್ರೆ ತಕ್ಕಂಬಾ ಅಂದನು. ದಯಾನಂದ ಎಂಗೋ ತೊಗಲು ಬರೋದು ಗ್ಯಾರಂಟಿ ಅಂತ ತಿಳಿದು ಮುಂಗಡ ಯಾಕೆ ಒಂದೈದು ಇಸ್ಕಬಾರ್ದು ಎಂದು ಪಿಲಾನು ಹಾಕಿದನು "ಒಂದೈದು ಅಡ್‌ವಾನ್ಸು ಕೊಡೆಪ್ಪೋ... ಜ್ವಾಳ್ವ ತಕ್ಕಬೇಕು ಅಂತ ಕೇಳಿಯೇ ಬಿಟ್ಟನು ಆಗ ದಯಾನಂದನಿಗೆ ಕೋಪ ಬಂದು ಓಗು ಓಗಲೆ, ಎಡಗೈಯಾಗ ತೊಗ್ಲಿಡು, ಬಲಗೈಯಾಗ ರೊಕ್ಕ ಎಣಿಸಿಗ್ಯ ಅಂದು ಬಿಟ್ಟನು. ಅದೂ ಸೈ ಬಿಡು ಅಂತ ಶೊಣ್ಣಿ ಬೆನ್ನು ಮಾಡಿ ತನ್ನ ಒಕ್ಕಲು ಮನೆ ಕಡೆ ನಡೆಯತೊಡಗಿದನು. ಇಲ್ಲಿ ಶೊಣ್ಣಿ ಎತ್ತು ಸತ್ತಿರುತ್ತದೆ ಅದನ್ನು ಮಾರಿ ದುಡ್ಡು ತಗೊಬಹುದೆಂದು ತಿಳಿಯುತ್ತಾನೆ ಆದರೆ ಅಲ್ಲಿನ ವಾಸ್ತವವೇ ಬೇರೆಯಾಗಿರುತ್ತದೆ.

ಪ್ರತಿ ಹೆಜ್ಜೆಗೂ ತುಳುಕುವ ಜೊಲ್ಲನ್ನು ಕುಡಿಯುತ್ತ ಇನ್ನೇನು ತನ್ನ ದಾರಿದ್ರ್ಯ ನಾಶವಾಯಿತೆಂದು ಬಗೆದನು. ಗೌಡರ ಮನೆಯಲ್ಲಿ ತಾನು ಬಂಡಿಗಟ್ಟಲೆ ಕಟ್ಟಿಗೆ ಕಡಿದದ್ದು, ದನದ ಕೊಟ್ಟಿಗೆಯನ್ನು ನುಣಗೆ ಬಳಿದಿದ್ದು, ಅದರ ನೆಲದಲ್ಲಿ ತನ್ನ ಮುಖವನ್ನು ತಾನು ದಿನಂಪ್ರತಿ ನೋಡಿಕೊಳ್ಳುತ್ತಿದ್ದದ್ದು, ತೆನಿ ಮೇಲೆ

ಗುಬ್ಬಿ ಕೂತು ಮೈಲಿಗೆ ಮಾಡದ ಹಾಗೆ ಹೊಲದ ತುಂಬ ಲಕ್ಷ ಕಣ್ಣು ಮೂಡಿಸಿ ಕಾಯುತ್ತಿದ್ದದ್ದು. ಈ ಪ್ರಕಾರವಾಗಿ ಒಂದಲ್ಲ ಎರಡಲ್ಲ ನೂರಾರು ಸೇವೆಗಳನ್ನು ಆ ಮನೆಗಾಗಿ ಮಾಡಿರುವುದು ನೆನಪಿಸಿಕೊಂಡನು. ಹೀಗೆ ನಾನು ಗೌಡರ ಮನೆಯಲ್ಲಿ ಕಾಲಿಟ್ಟಿದ್ದು ಗೌಡರು ಖಂಡಿತವಾಗಿಯೂ ತನ್ನ ಬೊಗಸೆಗೆ ಗಣೇಶನನ್ನು ಎಸೆದು ತನ್ನ ಯೋಗಕ್ಷೇಮ ವಿಚಾರಿಸಿ ಎತ್ತೊಯ್ಯಲು ಅಪ್ಪಣೆ ಕೊಡಿಸುವರೆಂದು ಯೋಚಿಸುತ್ತ ರಂಗವಲ್ಲಿಯ ರೇಖೆಗಳಿದ್ದ ಆ ಅಂಗಳದಲ್ಲಿ ನಿಂತಿದ್ದನು ಎತ್ತು ಸತ್ತ ಸುದ್ದಿ ತಿಳಿದು ತನ್ನ ದಾರಿದ್ರ್ಯ ನಿವಾರಣೆ ಆಯಿತ್ತೆಂದು ತಿಳಿದು ಗೌಡರ ಮನೆಯ ಕಡೆ ಹೊರಡುತ್ತಾನೆ. ಠೊಣ್ಣಿಯು ಒಳಗೆ ಇಣುಕಿ ನೋಡಿದನು. ಗೌಡರ ದೇಹ ಬಾಗಿಲಾಚೆ ಇದ್ದಿತು. ಎಲ್ಲರ ಮಾತಿನಲ್ಲೂ ಎತ್ತು ಸತ್ತಿರುವ ಸುದ್ದಿಯೇ ಬರುತ್ತಿತ್ತು. ಠೊಣ್ಣಿಗೆ ಮಾತ್ರ ಎತ್ತು ಸತ್ತಿರುವುದು ತನ್ನ ಪುಣ್ಯಕ್ಕೆ ಎಂದು ರೋಮಾಂಚನಗೊಂಡನು. ಸತ್ತ ಎತ್ತನ್ನು ಸಾಗಿಸಲೂ ಯಾರ ಯಾರ ಸಹಾಯ ಪಡೆಯಬೇಕೆಂದು ಯೋಚಿಸತೊಡಗುತ್ತಾನೆ. ಹಾಗೆಯೇ ಗೌಡರನ್ನು ನೋಡಿ ದೇವ್ರ ಆರೋಗ್ಯ ಎಂಗೈತ್ತಿ ಧಣಿ ಎಂದು ಕೇಳಿಯೇ ಬಿಟ್ಟನು, ಅದಕ್ಕೆ ಗೌಡರು ಇನ್ನೆಲೈತಿ ಸಿವ್ನ ಪಾದ ಸೇರ್‌ಬುಡ್ತು ನಿನ್ ದೇವ್ರು ಎಂದು ಹೇಳಿದ ಮಾತನ್ನು ಕೇಳಿ ಠೊಣ್ಣಿ ಒಳಗೊಳಗೆ ನಕ್ಕನು. ಸತ್ತ ಎತ್ತು ತನಗೆ ಸೇರುತ್ತೆಂದು ಠೊಣ್ಣಿ ತುಂಬಾ ಸಂತೋಷದಿಂದ ಇರುವುದನ್ನು ಕಾಣುತ್ತೇವೆ. ತಾನು ದೇವರನ್ನು ಎಂದು ಹೊಡೆದಿರಲಿಲ್ಲ, ರೋಗ ಬರದಂತೆ ಔಷದಿ ಕಲೆಸಿ ಹಾಕುತ್ತಿದ್ದ. ಎಲ್ಲಾ ನೆನಪಾಗಿ ಗೌಡರಿಗೆ ಹೇಳತೊಡಗಿದ್ದನು. ಎತ್ತನ್ನು ಸಾಕಿದ ರೀತಿಯನ್ನು ನೆನಪು ಮಾಡಿಕೊಳ್ಳುತ್ತಾನೆ. ಗೌಡರು ಎತ್ತು ಸತ್ತ ಮೇಲೆ ತನ್ನ ಒಕ್ಕಲು ಮಗನಿಗೇ ಕೊಡಬೇಕಾದದ್ದು ಎಂದು ತಿಳಿದು ಕೊಟ್ಟೇ ಕೊಡುತ್ತಾರೆಂಬ ಲೆಕ್ಕಾಚಾರ ಈತನದು.

ಗೋಡ್ರೆ ದೇವ್ರಾ ಎಣಾ ತುಂಬಿದ ಮನ್ಯಾಗ ಬಾಳ ಒತ್ತು ಇರೋದು ಬೇಷ್ ಕಾಣೋವಲ್ದು, ತಕ್ಕೊಂಡೋಗ್ಲೆ ಮಾದಿಗ ಅಂತ ಅಪ್ಣೆ ಕೊಡ್ರಿ ಧಣಿ ಒಯ್ದು ಬುಡ್ತಿನಿ ಎಂದು ಕೇಳಿದನು ಅದಕ್ಕೆ ಗೌಡರು ಕೋಪ ಮಾಡಿಕೊಂಡು ನಿಂಗೆ ಕೊಡೋಕೆ ಸತ್ತಿರೋದು ಅಗಸ್ರ ಕತ್ತಿ ಅಲ್ಲಲೆ, ಮನೆಯ ಎತ್ತು ಅದ್ನ ನಿನ್ ಕೈಗೊಪ್ಸಿ ನಾನ್ಯಾವ ನರಕಕ್ಕೋಗ್ಲಿ" ಅಂದು ಬಿಟ್ಟರು. ಈ ಮಾತನ್ನು ಕೇಳಿ ಠೊಣ್ಣಿಯ ಜಂಘಬಲವೆ ಉಡುಗಿ ಬಿಟ್ಟು ಮೈ ತಣ್ಣಗಾಗಿ ಮತ್ತೆ ಬೆಚ್ಚಗಾಯಿತು. ವಯೊವೃದ್ದರೂ, ಜ್ಞಾನವೃದ್ದರೂ ಆದ ಗೌಡರ ಬಾಯಿಯಿಂದ ಇಂಥ ಮಾತುಗಳು ಕೇಳಬಹುದೆಂದು ಕನಸು ಮನಸ್ಸಿನಲ್ಲೂ ಊಹಿಸಿಕೊಂಡಿರಲಿಲ್ಲ. ನಿಮ್ಮಂಥೋರೆ ಇಂಥ ಮಾತಂದ್ರೆ ಎಂಗ್ರಿ ಧಣಿ ನಾವು ಎಣಾ ತಿಂದು ಬದುಕೋ ಮಂದಿ ದ್ಯಾವ್ರ ಎಣಾ ಕೊಡಿ ಕ್ವಯ್ದು ತಿಂದು ಬದಿಕಂತೀವಿ ಎಂದು ಜೋರಾಗಿ ಹೇಳಿದನು. ಮೊದಲೆ ಹುಲಿಯಂಥ ಎತ್ತು ಸತ್ತ ಚಿಂತೆಯಲ್ಲಿದ್ದ ಗೌಡ ಓಗು ಓಗಲೆ ಅಂತ ಗದರಿಸಿ ಬಿಟ್ಟರು. ಎರಡು ಹೆಜ್ಜೆ ಸರಿದು ಠೊಣ್ಣಿ ತಿಳ್ದೋರೆ ಇಂಗಂದ್ರೆ ಮನಿ ಮಾದಿಗ್ರು ನಾವೆತ್ಲಾಗೆ ಓಗ್ಬೇಕು ಧಣಿ ನಿಮ್ಮೆಂಜ್ಲು ತಿನ್ನೊ ಅಕ್ಕೈತಿ ಕೆಳ್ತೀವಿ ಓಗ್ಲಿ ನಿಂ ಪಾದಕ್ಕೆ ಒಂದು ಜೊತೆ ಚರ್ಮದ್ ಚಪ್ಪಲಿ ಮಾಡ್ಕೊಡ್ತಿವಿ, ದೇವ್ರ ಹೆಣಾ ಕ್ವಡ್ರಿ ಎಂದು ಆವೇಶದಿಂದ ಕೇಳಿ ಬಿಟ್ಟನು. ಇದು ಬಿಡೋ ಪೈಕಿಯಲ್ಲ ಎಂದು ಅರಿತ ಗೌಡ ಓಕ್ಕಿಯೋ ಇಲ್ಲಲೆ ಎಂದು ಗದರಿಸಿದರು. ಇದರಿಂದ ಠೊಣ್ಣಿಗೆ ಜಾಗ ಖಾಲಿಮಾಡುವುದು ಅನಿವಾರ್ಯವಾಯಿತು ಈ ಕತೆಯಲ್ಲಿ ಠೊಣ್ಣಿ ತಾನು ಆಸೆ ಇಟ್ಟಿದ್ದ ಎತ್ತಿನ

ಕಳೇಬರ ತನಗೆ ಸಿಗದಿದ್ದಾಗ ಗೌಡರ ಮೇಲೆ ಕೋಪ ಮಾಡಿಕೊಳ್ಳುತ್ತಾನೆ ಕಣ್ಣು ತುಂಬಾ ಉಕ್ಕಿ ಬಂದ ನೀರನ್ನ ತಡೆದು ಅಯ್ ಸಿವ್ನ ಎಂದು ಕೂಗುತ್ತಾನೆ.

ಬಡತನ, ಅಸಹಾಯಕತೆ ಅಹಾರದ ಅವಶ್ಯಕತೆ ಇಲ್ಲಿ ದಲಿತರು ಸತ್ತದ್ದನ್ನಾದರು ತಿನ್ನಲೇ ಬೇಕೆಂಬ ಅನಿವಾರ್ಯ ಸೃಷ್ಟಿಸಿದೆ. ಇಲ್ಲಿ ಬದುಕಿರುವ ಪ್ರಾಣಿಯನ್ನು ತಿನ್ನಲು ಕೊಡಿ ಎಂದು ಚೋಣ್ಣಿ ಕೇಳುತ್ತಿಲ್ಲ ಸತ್ತಿರುವುದನ್ನ ಕೇಳುತ್ತಿದ್ದಾನೆ. ಸತ್ತ ದನವನ್ನು ಅವರ ಒಕ್ಕಲ ಮಕ್ಕಳಿಗೆ ಕೊಡುವುದು ಪದ್ಧತಿ. ರೋಗ ಬಂದು ಸತ್ತ ಪ್ರಾಣಿಯನ್ನು ತಿನ್ನ ಬೇಕಾದ ಅವರ ಅನಿವಾರ್ಯಕ್ಕೆ ಕಾರಣ ಬಡತನ. ಇದಕ್ಕೂ ಕಲ್ಲುಬಿದ್ದಾಗ ಚೋಣ್ಣಿ ವ್ಯಥೆ ಪಡುವುದು ಸಹಜ. ಸತ್ತಿರೋ ಎತ್ತು ಕ್ವಡಿಸ್ರೆಪ್ವೋ ಆ ಎತ್ತು ತಿನ್ನೋದು ನನ್ ಅಕ್ಕಪ್ರೊ ಇವತ್ತು ಅನ್ಯಾಯ ನಂಗಾಯ್ತದೆ. ಅದೇ ನಾಳೆ ನಿಮ್ಗು ಆಯ್ತದೆ ಇಂಗಾದ್ರೆ ಒಕ್ಕಲಿಗರ ವಕ್ಕಲ ಮಕ್ಕಳು ಮಣ್ತ್ತಿನ್‌ಬೇಕಾಯ್ತ್ತದೆ. ಅಂತ ತಮ್ಮ ಕೇರಿಯ ಪ್ರತಿ ಹಟ್ಟಿಯ ಮುಂದೆ ನಿಂತು ನಿವೇದಿಸಿಕೊಂಡನು. ಆದರೆ ಯಾರೂ ಅವನ ಮಾತನ್ನ ಕೇಳುವುದಿಲ್ಲ. ಈ ಜನುಮದಾಗೆ ನೀವ್ಯಾರು ಉದ್ದಾರಾಗಲ್ಲ ಎಂದು ಶಾಪ ಹಾಕುತ್ತಾನೆ. ಇದಾದ ಸ್ವಲ್ಪ ಹೊತ್ತಿಗೆ ಎತ್ತಿಗೆ ಪೂಜೆ ನಡೆಯುತ್ತಿತ್ತು. ಹೆಂಡತಿಯ ಹತ್ತಿರ ಕಾಡಿಬೇಡಿ ಕಾಸನ್ನು ತೆಗೆದುಕೊಂಡು ದುಕ್ಕಮರೀ ಬೇಕಪ್ವೋ ಅಂತ ಗೋಗರೆದು ಎಲ್ಡುದರಾಮು ಕುಡಿದನು. ಇಲ್ಲಿ ತನ್ನ ದುಃಖವನ್ನು ಮರೆಯುವುದಕ್ಕಾಗಿ ಸಾರಾಯಿ ಕುಡಿಯುತ್ತಾನೆ. ಗೌಡಾಗಿದ್ರೆ ಅವ್ನು ಅವನಿಗೆ ಆಗಿದ್ದಾನು... ಬಿಟ್ಟನ್ನಾ ಶಿವ್ನ ಎಂದವನೆ ತೂರಾಡುತ್ತ ಗೌಡರ ಮನಿ ಕಡೆ ನಡೆದನು. ಪ್ರತಿಭಟಿಸುವ ಧೈರ್ಯ ಇಲ್ಲಿ ಚೋಣ್ಣಿಗಿದೆ. ಆದರೆ ಅದಕ್ಕೆ ಬೆಂಬಲ ಕೊಡಲು ಕೇರಿಯ ಜನ ಮುಂದೆ ಬರುತ್ತಿಲ್ಲ ಬೆಂಬಲಿಸಿದರೆ ಗೌಡರನ್ನು ಎದುರು ಹಾಕಿಕೊಂಡಂತಾಗುತ್ತದೆ. ಮುಂದೆ ಇದರಿಂದ ತಮಗೆ ಕೆಡುಕಾಗುತ್ತದೆ ಎಂಬ ಭಯ ಕಾರಣವಾಗಿ ಸಹಾಯ ಮಾಡಲು ಮುಂದೆ ಬರುವುದಿಲ್ಲ.

ದಲಿತ ಸಮುದಾಯ ತನಗೆ ಅನ್ಯಾಯವಾಗುತ್ತಿದೆ ಎಂದು ತಿಳಿದಿದ್ದರೂ ಹೇಗೆ ತಟಸ್ಥಾರಾಗುತ್ತಾರೆ. ಬೆಂಬಲ ಸಿಗದಿದ್ದಾಗ ಚೋಣ್ಣಿಯ ಪ್ರತಿಭಟನೆಯೂ ಹೇಗೆ ಶಕ್ತಿ ಕಳೆದು ಕೊಳ್ಳುತ್ತದೆ ಎಂಬುದಕ್ಕೆ ನಿದರ್ಶನವಾಗುತ್ತದೆ. ಉದಾ: ಸಿದ್ಧಲಿಂಗಯ್ಯನವರ 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಕವಿತೆ ಇಲ್ಲಿಗೆ ನೆನಪಿಗೆ ಬರುತ್ತದೆ. ಒಂದು ಕಿರು ಹಳ್ಳ ಎಷ್ಟು ದೂರ ಓಡಲು ಸಾದ್ಯ? ಚೋಣ್ಣಿಯ ಅಸಹಾಯ ಕತೆಯ ಚಿತ್ರಣವಿದೆ. ಅವನು ಹೋಗುವ ಹೊತ್ತಿಗೆ ಬಂಡಿ ಮೇಲೆ ದೇವರನ್ನು ಮಲಗಿಸಿದ್ದರು. ಸತ್ತ ಎತ್ತು ಎದ್ದು ಬರುವ ರೀತಿಯಲ್ಲಿ ಪೂಜಾ ಪುನಸ್ಕಾರ ಸಿಂಗಾರವನ್ನು ಮಾಡಿದ್ದರು. ಊದುಬತ್ತಿ ಹೊಗೆ ನಡುವೆ ದೇವರ ಕಣ್ಣು ಮಿಟುಕಿಸಿದಂತೆ ಕಂಡು ಬಂದಿತು. ರಾಮನ ಬ್ಯಾಂಡು ಸುರುವಾಗಿ ಇನ್ನೇನು ಹೊಲ್ಡಬೇಕೆನ್ನುವಷ್ಟರಲ್ಲಿ ಚೋಣ್ಣಿ ಏಯ್ ಗೌಡ ಬುಟ್ ಬುಡು ಅಂದ್ರೆ ಬುಟ್ ಬುಡು ಬದುಕಿರೋವರ್ಗೂ ನಿಮ್ದು ಸತ್ ಮೇಲೆ ನಮ್ದು ಎಂದು ತೂರಾಡುತ್ತ ದೇವರ ಹೆಣ ಅವುಚಿಕೊಳ್ಳಲು ಹೋದನು. ಎಲ್ಲಾ ಇವ್ನ ಲೆ ಸುಮ್ನ ಓಕಿಯೋ ಇಲ್ವೋ ಇದು ನನ್ನ ಮಾನ ಮರುವಾದಿ ಪ್ರಶ್ನೆ. ಬಿಡ್ಲಿಲ್ಲ ಅಂದ್ರೆ ಮತ್ತೆನನ್ನೊ ಹೇಳಬೇಕೆಂದು ಹೊರಡುತ್ತಾನೆ. ಆದರೆ ಗೌಡರು ಆಳುಗಳನ್ನು ಕರೆಸಿ ಹೊಡೆಸುತ್ತಾರೆ. ಮತ್ತೆ ಚೇತರಿಸಿಕೊಂಡು ನೋಡ್‌ಕೊತ್ತಿನಿ ಹೋಗು ಎಂದು ಹೇಳಿ

ಕಷ್ಟ ಪಟ್ಟು ಹೆಜ್ಜೆಗಳನ್ನು ಇಡುತ್ತಾ ಸೀದಾ ಹಟ್ಟಿಕಡೆ ಹೋದನು. ಹೆಂಡತಿಯ ಕೈಯಿಂದ ಮೈಗೆ ಕಾವು ಕೊಡಿಸಿಕೊಂಡನು. ದುಡಿದ ಎತ್ತಿಗೆ ಸಂಸ್ಕಾರ ಮಾಡುವ ಗೌಡ ದುಡಿದ ವ್ಯಕ್ತಿಯನ್ನ ಹೇಗೆ ನಡೆಸಿಕೊಂಡ ಇದು ಯಾವ ಸಂಸ್ಕೃತಿ? ಎಂಬ ಪ್ರಶ್ನೆಯನ್ನು ಲೇಖಕರು ಇಲ್ಲಿ ನಮ್ಮ ಮುಂದಿಡುತ್ತಾರೆ.

ಹೀಗೆ ಅವತ್ತೆಲ್ಲ ಅವನ ಜೀವಕ್ಕೆ ಸಮಾಧಾನವೆ ಇರಲಿಲ್ಲ. ರೋಷಕ್ಕೆ ಮಿಗಿಲಾಗಿ ವಟ್ಟೆಯಲ್ಲಿ ಕಾಣಿಸಿಕೊಂಡಿತ್ತು ಹಸಿವೆ, ಎಂಬ ಹಸಿವೆ. ಹೀಗೆ ರೋಷದಿಂದ ಶೊಣ್ಣಿ ತನ್ನ ಹೊಟ್ಟೆಯ ಸಂಕಟವನ್ನು ಅನುಭವಿಸುತ್ತಿದ್ದನು. ಸಂಜೆ ಹೊತ್ತಿಗೆ ಹುಲಿತಲಿ ನೇವರಿಸುತ್ತ ಕುಳಿತಿದ್ದ ಶೊಣ್ಣಿ ತುಕ್ಕುಹಿಡಿದು ಮೂಲೆ ಹಿಡಿದಿದ್ದ ಮಚ್ಚು ತೆಗೆದು ಮಸ್ದು ಮಸ್ದು ಅದರಲ್ಲಿ ತನ್ನ ಮುಖವನ್ನು ನೋಡಿಕೊಂಡು ಯಾರಿಗೂ ಹೇಳದೆ ಕೇಳದೆ ಸಲಿಕೆ ಪುಟ್ಟ ತಕ್ಕೊಂಡು ವಾಸನೆಗುಂಟೆ ಹೆಜ್ಜೆ ಹಾಕಿದ.

ಹಿಂದೆ ಹಿಂದೆ ಹುಲಿ ಹೀಗೆ ಮಣ್ಣಿನೊಳಗಿರುವ ದೇವರ ಹೆಣ ತೆಗೆಯಲು ಹೋದನು. ತೊಗಲು ಇಸ್ತ್ರಿ ಮಾಡಿದ ಅಂಗಿಯಂತಿರಬಹುದು, ಎಲ್ಲದಕ್ಕಿಂತ ಹೆಚ್ಚಾಗಿ ತನ್ನ ಇಚ್ಛಾಶಕ್ತಿಯೇ ಮಣ್ಣಿನೊಳಗೆ ಕೊಳೆಯುತ್ತಿದೆಯೋ ಎಂಬಂತೆ ಯೋಚಿಸತೊಡಗಿದ್ದನು. ಜೇನ್ನೊಣವೊಂದೆ ಹೂವರಸಿಕೊಂಡು ಹೋಗುವ ರೀತಿಯಲ್ಲಿ ಶೊಣ್ಣಿ ಅಡ್ಡಾಡ ತೊಡಗಿದ. ಸ್ವಲ್ಪ ಹೊತ್ತಿಗೆ ದೇವರ ಗುದ್ದನ್ನು ಕಂಡು ಹಿಡಿದನು. ಗುದ್ದಿನ ಮೇಲಿದ್ದ ಇಬತ್ತಿ ಉಂಡೆ ಕಣಗಿಲೆ ಹೂವುಗಳು ಅವನ ಸಲಿಕೆ ಏಟುಗಳಿಗೆ ತತ್ತರಿಸಿ ಹೋದವು. ಮೈಯೊಳಗೆ ದೆವ್ವ ಹೊಕ್ಕಂಡವನಂತೆ ತೋಡೀ ತೋಡಿ ದೇವರ ಹೆಣ ತೆಗೆದನು ದೇವರ ಹೆಣದ ಮೂಲೆ ಮೂಲೆ ಮೂಸಿ ಸಂತೋಷಪಟ್ಟನು. ದೇವರ ಹೆಣವನ್ನು ಚಕಚಕ ಅಂತ ಕೊಯ್ಯತೊಡಗಿದನು. ಕಣ್ಣೆ ಕಣ್ಣೆ ಮಾಂಸವನ್ನು ಪುಟ್ಟಿಗೆ ತುಂಬಿ ಹಸಿ ತೊಗಲನ್ನು ಮಡಚಿ ಹೊತ್ತುಕೊಂಡು ಹೋದನು. ಉಳಿದಿದ್ದನ್ನು ಹುಲಿಯನಿಗೆ ಒಪ್ಪಿಸಿ ಬಿಟ್ಟನು. ಹೀಗೆ ಶೊಣ್ಣಿ ದೇವರ ಹೆಣವನ್ನು ಕದ್ದು ಕೊಯ್ದು ತಿನ್ನಲು ಪ್ರಯತ್ನಿಸುವುದು ಇಲ್ಲಿನ ಮುಖ್ಯ ಸಂಗತಿ. ವಿಕ್ರಮಾರ್ಜುನ ಬೇತಾಳವನ್ನು ಹೊತ್ತೊಯ್ದ ಪರಿಯಂತೆ ಶೊಣ್ಣಿಯು ಗೋಣಿ ಚೀಲದೊಳಗೆ ದೇವರ ತೊಗಲನ್ನು ಹಾಕಿಕೊಂಡಿದ್ದನು. ಕಟುಗರ ದಯಾನಂದನ ಮನಿ ಮುಂದೆ ಪ್ರತ್ಯಕ್ಷನಾದನು.

ಈ ವೃತ್ತಿಗೂ ಈ ಹೆಸರಿಗೂ ಅವರ ಸ್ವಭಾವಕ್ಕೂ ಇರುವ ವೈರುದ್ಯಗಳ ಚಿತ್ರಣ ಇಲ್ಲಿದೆ. ಕಟುಗರ ದಯಾನಂದನು ಶೊಣ್ಣಿಯ ಮುಖ ದರ್ಶನದಿಂದ ಸಿಂಡರಿಸಿಕೊಂಡನು. ದಯಾನಂದ ಶೊಣ್ಣಿಯ ನೆತ್ತಿ ಹತ್ತಿ ಕೂತಿದ್ದ ಚೀಲ ಕಂಡೊಡನೆ ಅದರೊಳಗೆ ಎಂಥದೋ ಗುಟ್ಟು ಅಡಗಿದೆ ಎಂದುಕೊಂಡನು. ಆ ಚೀಲದೊಳಗಿಂದ ದೇವರ ತೊಗಲಿನ ದರ್ಶನ ಮಾಡಿಸಿ ಏಟು ಕೊಡ್ತಿಯಪ್ಪೊ ಅಂದನು. ನಿನ್ನ ಕೇಳಿದ್ರೆ ಗಂಟು ಎತ್ತಾಕೋರಂಗೆ ಮಾತಾಡ್ದೆ ಈ ಗ್ನೋಡು ಎಂಗೈತಿ ಅಂತ ಮತ್ತೆ ಗೆಲುವಾಗಿ ನುಡಿದನು. ಕರುಣೆಯಿಲ್ಲದ ದಯಾನಂದ ಗೌಡರ ಮನೆಗೆ ಹೋಗಿ ಈ ಸುದ್ದಿಯನ್ನು ಗೌಡರಿಗೆ ತಿಳಿಸಿದನು. ಆ ಕ್ಷಣ ಗೌಡರು ಈ ನನ್ಮಕ್ಳು ಇಲ್ಲಿವರ್ಗ್ಗೂ ಬಂದ್ರಾ ಸಿವ ಸಿವಾ ಇವತ್ತು ಎತ್ತಿನ ಎಣಾ ಕಿತ್ಗಂಡು ತಿಂದ್ರು ನಾಳೆ ನಮ್ಮೆಣಾನು ಅದೆಂಗ ಬುಟ್ಟಾರು ಸಣ್ಣಗಿದ್ದಾಗಲೇ ಬುದ್ದಿ ಕಲಿಸಬೇಕು ಎಂದು ನಿರ್ಧರಿಸಿಕೊಂಡನು. ಗೌಡರು ಶೊಣ್ಣಿಯನ್ನು ಹಿಡಿದುಕೊಂಡು ಬರಲು ತನ್ನ ಮಗ ವಕೀಲ ಕೊಟ್ರ

ಗೌಡನ ನೇತೃತ್ವದಲ್ಲಿ ಆಳನ್ನು ಕಳಿಸಿದನು. ಇಂಥ ವಿಚಾರ ಸಿಕ್ಕುವುದೆ ದೊಡ್ಡದು. ಬಿಡುವ ಪೈಕಿ ಅಲ್ಲ ಆದರೂ ವಕೀಲರಿಗೂ ಹೆದರದ ರೊಣ್ಣಿ ದಯಾನಂದನ ಕಡೆ ತಿರುಗಿ ನೋಡಿದನು.

ತಾಳ್ಮೆಗೂ ಕಾಯುವಿಕೆಗೂ ಒಂದು ಮಿತಿ ಇರುತ್ತದೆ. ಇದನ್ನು ಮೀರಿದಾಗ ವ್ಯಕ್ತಿಸ್ವತಃ ಧೈರ್ಯದಿಂದ ವರ್ತಿಸಲೇ ಬೇಕಾಗುತ್ತದೆ. ಗೌಡರನ್ನು ಕಂಡ ಮೇಲೂ ರೊಣ್ಣಿಯ ಎದೆ ಯಾಕೋ ಬಗ್ಗಲೇ ಇಲ್ಲ ಎತ್ ಮುಟ್ಟೋವಸ್ಟು ತಾಕತ್ತು ಐತೆನ್ಲೇ ಮೈಯಾಗ? ಎಂದು ಗೌಡರು ಒಂದೆ ಸಮನೆ ಪ್ರಶ್ನೆ ಕೇಳತೊಡಗಿದ್ದರು. ರೊಣ್ಣಿ ತಡವರಿಸಿದೆ ಐತಪ್ಪೋ ಐತಿ ಅಸಗಂಡೂ ಅಸಗಂಡೂ ಏನ್ನಿಲ್ಲಿ ಏನ್ಬುಡ್ಲಿ ಅನ್ನಂಗಾಗೈತಿ ಅಂದನು. ಈ ಮಾತನ್ನು ಕೇಳಿ ಎಲ್ಲರೂ ಸಿಟ್ಟಿನಿಂದ ರೊಣ್ಣಿಯನ್ನು ಹೊಡೆದರು. ಆದರೂ ರೊಣ್ಣಿ ಹೆದರದೆ ಇರುವುದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತ್ತು. ಗೌಡರು ತಮ್ಮ ಮಕ್ಕಳೊಂದಿಗೆ ಸಮಾಲೋಚಿಸಿ ರೊಣ್ಣಿಯನ್ನು ಪೊಲೀಸರಿಗೆ ಒಪ್ಪಿಸೋದೆ ಸರಿ ಎಂದು ತೀರ್ಮಾನ ತೆಗೆದು ಕೊಂಡರು. ಸ್ವಲ್ಪ ಹೊತ್ತಿನ ನಂತರ ಪೊಲೀಸರು ಜೀಪಿನಿಂದ ಇಳಿದ ಸಬ್‌ಇನ್ಸ್‌ಪೇಕ್ಟರ್ ನೋಡಿ ಊರಿಗೆ ಊರೆ ಉಸಿರುಗಟ್ಟುವಂತೆ ಇತ್ತು. ಆ ಕ್ಷಣ ಅವರೆಲ್ಲರು ಕರ್ಣಪಟಲ ಹರಿಯುವಂತೆ ಅಳುತ್ತಾರೆ. ಪೊಲೀಸರೆಂದರೆ ಇವರಿಗೆ ಭಯ. ರಕ್ಷಣೆಗಾಗಿ ಇರುವ ಪೊಲೀಸರು ಯಾರನ್ನು ರಕ್ಷಿಸುತ್ತಿದ್ದಾರೆ? ಉಳ್ಳವರನ್ನೋ? ಅತಂತ್ರರನ್ನೋ? ರೊಣ್ಣಿಯ ಕುಟುಂಬ ಸದಸ್ಯರು ಅಯ್ಯೋ ಅಂತ ಎದೆ ಬಡಿದು ಕೊಂಡು ಅಳಲು ಪ್ರಾರಂಭಿಸಿದ್ದರು. ಹುಲಿಯ ಸಹ ಅಂಗಳದ ಮೂಲೆಯಲ್ಲಿ ಲಬೊ ಲಬೋ ಅಂತ ಬಾಯಿ ಬಡಿದುಕೊಳ್ಳುತ್ತಿತ್ತು. ನಿಮ್ಮಂತವ್ರನ್ನೆಲ್ಲಾ ಒಂದಾರು ತಿಂಗ್ಳು ಜೈಲಿಗೆ ಹಾಕಿ ಬುದ್ದಿ ಕಲಿಸಬೇಕು. ನಮ್ಮ ದೇಶದ ಸಂಸ್ಕೃತಿ ಸಂಸ್ಕಾರ ತಿಳಿದಿದೆಯಾ? ಎಂದು ಎಸ್.ಐ ರೊಣ್ಣಿಯನ್ನು ಗದರಿಸುತ್ತಾನೆ.

ಈ ಮಾತಿಗೆ ರೊಣ್ಣಿ ತಕ್ಷಣ ಸಾರ್ ನಿಮ್ಗೆ ಪುಣ್ಯ ಬರತೈತ್ತೀ ದ್ಯಾವ್ರು ಆರ್ತಿಂಗಳ್ಯಕೆ ಒಂದ್ವರ್ಸ ಆಕಿ ಬುಡಿ ಎಪ್ಪ ಕಾಲಿಗೆ ಬೇಕಾದರು ಬೀಳ್ತಿನಿ ಎಂದು ನುಡಿದನು ರೊಣ್ಣಿ ನುಡಿದ ಮಾತಿನಿಂದ ಪೊಲೀಸರು ರೊಣ್ಣಿಯನ್ನು ಇಂಥೋರ್ನೆಲ್ಲ ಜೇಲಿಗಾಕೋದ್ರಿಂದ ಏನಪ್ಪ ಯೋಗ ಅಂತೀನಿ ಅಂದ ಜೇಲಂದ್ರೆ ಪೊಲೀಸಂದ್ರೆ ರೊಣ್ಣಿ ಹೆದರದಿರುವುದನ್ನು ಕಂಡು ಗೌಡರಿಗೂ ಭಯ ಆಯಿತ್ತು ಇಲ್ಲ ಅಂದರೆ ಒದ್ದು ಬುದ್ದಿ ಕಲ್ಸಿ ಓಗ್ರಿ ಅಂತ ಅಂದರು ಇಂಥೋರ್ನ ಒದೀಲಿಕ್ಕೂ ನಮ್ಗೆ ಭಯ ಆಗ್ತದ್ರಿ ಗೌಡ್ರೆ ಏನೋ ತಿಂದೀವಂತ ಬೈಯಬಹುದು ಎಂದು ಹೇಳಿದನು. ರೊಣ್ಣಿಯ ಸಣಕಲ ದೇಹ ಕಂಡ ಎಸ್.ಐ ಗೆ ಹೊಡೆಯಲೂ ಭಯ.

ಸಂಸ್ಕೃತಿಯ ಸಂಸ್ಕಾರಯುತ ನಡವಳಿಕೆ ಕುರಿತು ಪಾಠ ಹೇಳುವ ಎಸ್.ಐ ಗೆ ನೈತಿಕತೆ ಯಾವುದು? ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗ ಬೇಕಿದೆ. ದುಡಿದ ಎತ್ತಿಗೆ ಸಂಸ್ಕಾರ ಮಾಡಿ ಗೌರವಿಸುವ ಸಂಸ್ಕಾರ ಇರುವವರಿಗೆ ದುಡಿದ ವ್ಯಕ್ತಿಗೆ ಅನ್ನಕೊಡುವ ಸಂಸ್ಕೃತಿಏಕಿಲ್ಲ? ಎಂಬ ಪ್ರಶ್ನೆಯೇ ಇಲ್ಲಿ ಮುಖ್ಯವಾಗುತ್ತದೆ. ಹೊಸ ಆಸೆ, ಹೊಸ ಮಂದಹಾಸ ಮೂಡಿದ ಮುಖದಲ್ಲಿ ರೊಣ್ಣಿಯ ಬಳಿಗೆ ಹೋಗಿ ನಿಂತಾಗ ಇನ್ಸಪೆಕ್ಟರ್ ಕಾಲೊಳಗೆ ನಡುಕ ಹುಟ್ಟಿತು. ಈ ಸಾರಿ ತಪ್ ಮಾಡಿರೋದ್ನ ಕ್ಷಮಿಸಿ

ಬಿಡ್ತಿದೀನಿ. ಇನ್ನೊಂದ್ಸಾರಿ ಬಾಲಬಿಚ್ಚಿದೇ ಅಂದ್ರ ಎಂದು ಹೇಳುತ್ತಿದ್ದಂತಯೇ, ಠೊಣ್ಣಿ ಆವೇಶದಿಂದ ಅದೆಂಗ ಬಿಟ್ ಓಗ್ತೀರೊ ನೋಡೇ ಬಿಡ್ತೀನಿ, ಈಗ್ ನನ್ ಕರ್‍ಕೊಂಡೊಗ್ಲಿಲ್ಲಾಂದ್ರೆ ಇದ್ಕಿಂತ ದೊಡ್ ತಪ್ ಮಾಡ್ತೀನಿ. ಹೀಗೆ ಮಾತನಾಡುತ್ತಿರಲು ಕೂಡಲೆ ಇನ್ಸಪೆಕ್ಟರ್ ಎದೆ ಡವಡವ ಬಡಿದುಕೊಳ್ಳತೊಡಗಿತ್ತು. ಆ ಕ್ಷಣ ಅಲ್ಲಿಂದ ಹೊರಡಲು ನಿರ್ಧರಿಸಿದ್ದರು.ಇಲ್ಲ ಠೊಣ್ಣಿಯನ್ನು ಕಂಡು ಇವರೇ ಭಯ ಪಟ್ಟಿದ್ದರು.

ಠೊಣ್ಣಿ ಪೊಲೀಸರು ತಪ್ಪಿಸಿಕೊಂಡು ಹೋಗುವುದನ್ನು ನೋಡಿ ಒಂದೆ ಏಟಿಗೆ ಜೀಪನ್ನು ಏರಲು ಜಿಗಿದನು. ನನ್ನೂ ಜೇಲಿಗಾಕ್ರೀ ತಪ್ ಮಾಡಿದ್ರೂ ಯಾಕ್ರಿ ಜೇಲಿಗಾಕಲ್ಲ ಎಂದು ಕೂಗುತ್ತ ಜೀಪೇರಲು ಪ್ರಯತ್ನಿಸಿದನು. ಠೊಣ್ಣಿಯ ಜೊತೆಯಲ್ಲಿಯೇ ಅವರ ಕುಟುಂಬದ ಸದಸ್ಯರು ಬೆಂಬಲವಾಗಿ ನಿಂತಿರುವುದನ್ನು ಕಾಣುತ್ತೇವೆ. ಹುಲಿಯು ಸಹ ಬೊವ್ ಬೊವ್ ಅಂತ ಪೊಲೀಸರನ್ನು ಬೆದರಿಸ ತೊಡಗಿತ್ತು.

ಈ ಕತೆಯಲ್ಲಿ ಠೊಣ್ಣಿ ತನ್ನ ಹಸಿವನ್ನು ನಿವಾರಿಸಿಕೊಳ್ಳಲು ಸತ್ತ ಎತ್ತನ್ನು ತಿನ್ನಲು ಬಯಸುತ್ತಾನೆ. ಆದರೂ ಅವನನ್ನು ಪೊಲೀಸರು ಜೇಲಿಗೆ ಸೇರಿಸುವುದಿಲ್ಲ. ಅಲ್ಲಿಯಾದರೂ ಹೊಟ್ಟೆ ತುಂಬಾ ಊಟ ಮಾಡಬಹುದೆಂದು ಊಹಿಸಿದ ಠೊಣ್ಣಿ ಅಲ್ಲಿಯೂ ಸಹ ಅವನನ್ನು ಸೇರಿಸಿಕೊಳ್ಳುವುದಿಲ್ಲ. ಈ ಕತೆಯಲ್ಲಿ ಮೇಲ್‌ವರ್ಗದವರು ಕೆಳವರ್ಗದವರನ್ನು ಶೋಷಣೆಗೆ ಒಳಪಡಿಸುತ್ತಿರುವುದನ್ನು ಕಾಣುತ್ತೇವೆ. ಗೌಡರು, ಪೊಲೀಸ್ ವ್ಯವಸ್ಥೆ ಅಂದರೆ ಸರ್ಕಾರ ಒಂದೆ ಜಾಲ. ಇದೊಂದು ಕೋಟೆಯಿದ್ದಂತೆ ಇಂತಹವರಿಂದ ನ್ಯಾಯ ಯಾರಿಗೆ ಸಿಗಲು ಸಾದ್ಯ? ಇಡೀ ವ್ಯವಸ್ಥೆಯ ವಿರುದ್ದವಾಗಿ ಬಂಡೇಳುವ ದಿಟ್ಟತನ ಈ ಠೊಣ್ಣಿಯಲ್ಲಿದೆ. ಸಂದರ್ಭ ಇವನನ್ನು ಹೀಗೆ ಪ್ರತಿಭಟಿಸುವಂತೆ ಮಾಡುತ್ತದೆ. ತನ್ನ ಹಸಿವಿನ ಸಂಕಟವೆ ಇವನಲ್ಲಿ ಬಂಡಾಯ. ಸಾಂದರ್ಭಿಕ ಒತ್ತಡಗಳು ಹೀಗೆ ವ್ಯಕ್ತಿಯ ನಡವಳಿಕೆಗಳನ್ನು ರೂಪಿಸುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ಈ ಕತೆಯಲ್ಲಿ ಠೊಣ್ಣಿ ಕುಲ್ಡಿ ತಿಮ್ಮಿ ನಾಯಿ ಹಿರೆಮಗ ಇತ್ಯಾದಿ ಅಂದರೆ ಕೆಳವರ್ಗದವರ ಹೆಸರುಗಳನ್ನು ಮೇಲ್ ವರ್ಗದವರು ಬದಲಾಯಿಸುವುದನ್ನು ತಿಳಿಯುತ್ತದೆ ಒಟ್ಟು ನಾನು ಅಧ್ಯಯನಕ್ಕೆ ಆರಿಸಿಕೊಂಡಿರುವ ಕತೆಗಳಲ್ಲಿ ಬರುವ ಹೆಸರುಗಳು ಬಹುಪಾಲು ತಂದೆ ತಾಯಿ ಇಟ್ಟ ಹೆಸರಾಗಿರದೆ ಉಳ್ಳವರು ಇದನ್ನು ಕರೆಯುತ್ತಿದ್ದ ಹೆಸರುಗಳಾಗಿವೆ ಅಥವಾ ಇರುವ ಹೆಸರನ್ನು ವಿರೂಪಗೊಳಿಸಿ ಕರೆಯುವ ಉಳ್ಳವರ ಧಿಮಾಕು ಇಲ್ಲಿದೆ.

ರೋಗದಿಂದಸತ್ತ ದನ ಕರು ಕೋಳಿಗಳ ಮಾಂಸ ಮಾರಾಟ ನಿಷಿದ್ದ. ಅದನ್ನು ಮಾರಾಟ ಮಾಡಬಾರದೆಂಬ ಕಾನೂನನ್ನು ಸರ್ಕಾರ ಈಗ ಜಾರಿಗೊಳಿಸಿದೆ. ವಿಷಾದವೆಂದರೆ ರೋಗಬಂದು ಸತ್ತ ಎತ್ತಿಗಾಗಿ ಕಾದು ಕೂತು ಅದರಿಂದ ತಮ್ಮ ಹಸಿವನ್ನು ನೀಗಿಸಿಕೊಳ್ಳುವ ಅತಂತ್ರ ಸ್ಥಿತಿಯಲ್ಲಿರುವ ಸಮುದಾಯಗಳು ನಮ್ಮ ಭಾರತದಲ್ಲಿವೆ. ಎಂಬುದೇ ನಾಗರೀಕ ಮುಂದುವರಿದ ಭಾರತಕ್ಕೆ

ಅಪಮಾನದ ಸಂಗತಿ. ಕೊಣ್ಣಿ ಇಂತಹ ಅತಂತ್ರ ಸಮುದಾಯದ ಹಸಿದ ಜಗತ್ತಿನ ಪ್ರತಿನಿಧಿಯಾಗುತ್ತಾನೆ. ನಿರಂತರ ಶೋಷಣೆ ನಿರಂತರ ಬಡತನ ಇವುಗಳನ್ನೇ ತಮ್ಮ ಅಸ್ತಿಯಾಗಿಸಿಕೊಂಡವರು ಈ ದಲಿತರು, ಯಾವ ಸಂಘಟನೆಗಳ, ಯಾವ ಶಿಕ್ಷಣದ ಪ್ರಚೋದನೆ ಇಲ್ಲದೆ ತನ್ನ ಸ್ಥಿತಿಯೇ ಇಲ್ಲಿ ಇವನ ಬಂಡಾಯಕ್ಕೆ ಕಾರಣವಾಗುವುದು ಇಲ್ಲಿ ಗಮನಿಸಬೇಕಾದ ಅಂಶ. ಹೊಲಸು ತಿಂಬುವವನೇ ಹೊಲೆಯ ಎಂದು ಬಸವಣ್ಣನವರು ಹೇಳಿದ್ದಾರೆ. ಸಂಸ್ಕಾರವಂತರ ಪಾಲಿಗೆ ಹೊಲಸಾಗಿರುವ ಸತ್ತ ದನದ ಮಾಂಸಕ್ಕೂ ಇಷ್ಟೊಂದು ಕಷ್ಟಪಡುವ ಕೊಣ್ಣಿಯಂಥವರ ಬದುಕಿನ ವಿಷಾದದ ಕತೆ ಇದು. ಸಮಾಧಿ, ಪೂಜೆ, ಸಂಪ್ರದಾಯ, ಸಂಸ್ಕೃತಿ ಇವೆಲ್ಲಾ ಹಸಿವಿನ ಮುಂದೆ ಅರ್ಥಕಳೆದುಕೊಳ್ಳುತ್ತವೆ. ಅದನ್ನು ಮೀರಿ ತನ್ನ ಹಕ್ಕನ್ನು ತಾನು ಸ್ಥಾಪಿಸಿ ಕೊಳ್ಳುವ ಇವನ ಪ್ರಯತ್ನವೇ ಇಲ್ಲಿಯ ಬಂಡಾಯದ ಲಕ್ಷಣವಾಗಿದೆ.

ಹುಗ್ಗಿ

ಬುದ್ಧನ ಸಮಕಾಲೀನನಾದ ಪೂರ್ಣಕಶ್ಯಪ ತನ್ನ ಯಜಮಾನರ ನೂರನೆಯ ಜೀತದಾಳಾಗಿದ್ದನು ಅಂದರೆ ಕ್ರಿಸ್ತ ಪೂರ್ವದಿಂದಲೇ ಇದ್ದ ಆರ್ಯ ಪ್ರಣೀತ ವ್ಯವಸ್ಥೆಯಿದು. ಪೂರ್ಣ ಕಶ್ಯಪ ಈ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದ ಮೊದಲಿಗ. ಆದರೆ ಅವನನ್ನು ಕೊಂದು ಕೆರೆಗೆ ಹಾರಿದ ಮೂಲಭೂತವಾದಿಗಳು ಅವನು ಕೆರೆಗೆ ಬಿದ್ದು ಸತ್ತ ಎಂದು ಕತೆ ಕಟ್ಟುತ್ತಾರೆ. ಹೀಗೆ ಸಾವಿರಾರು ವರ್ಷಗಳಿಂದ ಭಾರತದಲ್ಲಿ ಇರುವ ಅತ್ಯಂತ ಹೇಯ ವ್ಯವಸ್ಥೆಯಿದು. ಇಂತಹ ಕ್ರೌರ್ಯದ ಮುಂದುವರಿದ ಕತೆಯೇ ಹುಗ್ಗಿ. ಈ ಕತೆಯಲ್ಲಿ ಬರುವ ಮುಖ್ಯ ಪಾತ್ರ ಬಸವನದ್ದು ಅಪ್ಪ ಬಂದ ಎಂದು ಕೇಳಿ ಬಸವ ಒಂದೇ ಉಸಿರಿಗೆ ಚಣ ಏರಿಸಿಕೊಂಡು ಹೊಸ್ತಿಲು ದಾಟಿದ್ದ. ನೆನ್ನೆಯಿಂದ ಹೊಟ್ಟೆ ಚುರುಗುಡುತ್ತಿದ್ದುದರಿಂದ ಈ ದಿನ ಅಪ್ಪ ಏನಾದರೂ ತಂದಿರ ಬಹುದೆಂದು ಲೆಕ್ಕ ಹಾಕಿದನು. ಅಪ್ಪ ಕಟ್ಟೆಯ ಒಂದು ಪಕ್ಕ ಕುಕ್ಕುರುಗಾಲಲ್ಲಿ ಕೂತುಕೊಂಡು ಬೆಳಗ್ಗೆ ಅರ್ಧ ಸೇದಿ ಬಿಟ್ಟಿದ್ದ ಬೀಡಿಯನ್ನು ಒಣಗಿರುವ ತುಟಿ ನಡುವೆ ಸಿಕ್ಕಿಸಿಕೊಂಡು ಕಡ್ಡಿಗೀರಿದರೂ ನಾನು ಕಂಡ್ಕೂಡ್ಲೆ ಬೆನ್ನು ಸವ್ರಿ ಐದು ಪೈಸೆ ಹತ್ತು ಪೈಸೆ ಕೊಡ್ತಿದ್ದ ಅಪ್ಪ ಈ ಹೊತ್ತು ಯಾಕೆ ಹಿಂಗಿದ್ದಾನೆ? ಎಂದು ಬಸವನ ಪಾಲಿಗೆ ದೊಡ್ಡ ಸಮಸ್ಯೆಯಾಗಿ ಉಳಿಯಿತು. ಒಂದೊಂದೇ ಹೆಜ್ಜೆ ಇಡುತ್ತಾ ಅಡುಗೆ ಮನೆಯ ಬಾಗಿಲ ಕಡೆ ಹೊರಟನು. ಅಲ್ಲಿ ಅಮ್ಮ ಮೊರಗಳಲ್ಲಿ ಬೆಲ್ಲ ಕಡ್ಲೆಬೇಳೆ ಇಟ್ಟಿದ್ದನ್ನು ಕಂಡು ಒಂದು ಚೂರು ಬೆಲ್ಲವನ್ನು ಎತ್ತಿಕೊಂಡು ಬಾಯಲ್ಲಿ ಹಾಕಿಕೊಂಡು ಬಸವನಿಗೆ ನಿನ್ನೆಯಿಂದ ನೀರು ಕೂಡ ಕಂಡಿರದಿದ್ದ ಹೊಟ್ಟೆ ಆ ಬೆಲ್ಲದ ಚೂರಿನಿಂದ ಹೊಟ್ಟೆ ತುಂಬಿ ಹೋದಂತೆನಿಸಿತು.

ಬಸವನ ತಮ್ಮಂದಿರಾದ ಚಂದ್ರ, ಕೊಟ್ರ, ತಿಮ್ಮಿ ಮೂವರು ಅಮ್ಮನಿಗೆ ಹೆದರಿ ಬರೀ ಜೊಲ್ಲು ಸುರಿಸುತ್ತ ಕುಂತಿದ್ದರೆ ತಿಮ್ಮಿ ಇನ್ನು ಚಿಕ್ಕವಳು. ಮೊಲೆ ಎಂದು ಅತ್ತರೆ ಸಾಕು, ಅಮ್ಮ ಚಟ್ಟಂತ ಕೆನ್ನೆಗೆ ಬಾರಿಸಿ ದೂರಕ್ಕೆ ತಳ್ಳಿದಳು ಇಲ್ಲಿ ಮಗುವಿನ ಹಾಲಿಗೂ ಸಹ ಕಷ್ಟವಾಗಿರುವ ಪರಿಸ್ಥಿತಿಯನ್ನು ಕಾಣುತ್ತೇವೆ. ಕೊನೆಗೆ ಅಮ್ಮ ತಿಮ್ಮಿಯನ್ನು ಎದೆಗವುಚಿಕೊಂಡು ಅಳತೊಡಗಿದ್ದು ಕಂಡು ಬಸವನಿಗೆ ಆಶ್ಚರ್ಯವಾಯಿತು. ತಾಯಿಯ ಅಸಹಾಯಕತೆ, ಇದರ ಪರಿಣಾಮವಾಗಿ ಬಂದ ಅಸಹನೆ, ಪ್ರೀತಿ, ಮಮತೆ, ಸಂಕಟಗಳನ್ನು ಗುರುತಿಸಬೇಕಾಗಿದೆ.

ಗಂಜಿಗೆ ಗತಿಯಿಲ್ಲದೆ ಇರುವಾಗ ಹುಗ್ಗಿ ಸಿಗುತ್ತದೆ ಎಂದರೆ ಯಾರಿಗೆ ತಾನೇ ಸಂತೋಷವಾಗದು ಬಸವನು ಹುಗ್ಗಿ ಎಂದು ಮೂರು ಬಾರಿ ಅಂದುಕೊಂಡು ಖುಷಿಪಟ್ಟು ಭೀಮ, ಸೂಚ್ಚ ಎಲ್ಲರಿಗೂ ಹೇಳಿ ಬರಬೇಕೆಂದುಕೊಂಡನು. ಪಡಸಾಲೆಗೆ ಬಂದಾಗ ಅಪ್ಪ ಕರೆದು ಪಕ್ಕಕ್ಕೆ ಕುಳ್ಳಿರಿಸಿಕೊಂಡು ನಿಟ್ಟುಸಿರು ಬಿಟ್ಟ ನಮಗೆಲ್ಲಾ ಕೂಳು ಜೋಡಿಸಲಾರದೆ ಅಪ್ಪ ಅಳಾಕ ಹತ್ಯಾನ ಎಂದುಕೊಳ್ಳುತ್ತ ಬಸವ ಅಪ್ಪನ ಮುಖವನ್ನು ನೋಡುತ್ತಿದ್ದನು. ಅಪ್ಪನ ಅಳು ಕಂಡು ಮಗ ಅರ್ಥೈಸಿ ಕೊಂಡದ್ದು ಹೀಗೆ. ಆದರೆ ಕಾರಣ ಬೇರೆಯೇ ಆಗಿತ್ತು. ಮಗ ಬಸವನನ್ನು ಒಡೆಯರ ಮನೆಯಲ್ಲಿ ಮಾಡಿದ ಸಾಲ ತೀರಿಸಲಾಗದೆ ಒಡೆಯರ ಅಪ್ಪಣೆಯಂತೆ ಜೀತಕ್ಕಿರಿಸಲು ಒಪ್ಪಿಗೆಕೊಟ್ಟಾಗಿತ್ತು. ಅಂದು ಅವನನ್ನು ಆ

ಮನೆಯಲ್ಲಿ ಬಿಡಬೇಕಾಗಿತ್ತು. ಒಟ್ಟಾರೆ ಸಂಕಟದ ಸನ್ನಿವೇಶ ಮನೆಯಲ್ಲಿ ನಿರ್ಮಾಣವಾಗಿದೆ. ಕಲ್ಲಿ ಜೇಬಿನಲ್ಲಿ ಕೈ ಇಳಸಿ ಹತ್ತು ಪೈಸೆ ತೆಗೆದು ಬಸವನ ಕೈಗಿಟ್ಟ ಅಂಗೈ ತುಂಬಿದ ಬೆಳ್ಳಿಯಂಥ ಹತ್ತು ಪೈಸೆಯನ್ನು ನೋಡಿದ ಬಸವನ ಮುಖ ಹಿಗ್ಗಿತು ಇದೆಲ್ಲಾ ಮಗನನ್ನು ತಮ್ಮ ಕೈಲಾದಷ್ಟು ಖುಷಿಯಲ್ಲಿಡುವ ಪ್ರಯತ್ನ. ಇದ್ಯಾವುದರ ಅರಿವಿಲ್ಲದೆ ಬಸವ ತನ್ನ ಪಾಡಿಗೆ ತಾನು ಸಂತೋಷವಾಗಿದ್ದಾನೆ.

ಬೇವಿನ ಮರದ ಕೆಳಗೆ ಬುಗುರಿಗೆ ಹಗ್ಗ ಸುತ್ತುತ್ತಿದ್ದ ಸೊಚ್ಚನ ಮುಂದೆ ನಿಂತಾಗ ಬಸವನಿಗೆ ಕೂಳಿಗೆ ಗತಿ ಇಲ್ವೇನೊ? ಎಂದು ಹೇಳಿದ ಮಾತುಗಳು ನೆನಪಿಗೆ ಬಂದವ ಸೂಚ್ಚ ಇವತ್ತು ನಮ್ಮ ಮನೆಯಲ್ಲಿ ಹುಗ್ಗಿ ಮಾಡುತ್ತಿದ್ದಾರೆಂದು ಹೇಳಿ ಹತ್ತು ಪೈಸೆ ಅವನಿಗೆ ಕಾಣುವಂತೆ ಹಿಡಿದುಕೊಂಡು ಹೇಳಿದನು ಇಲ್ಲಿ ಬಸವನು ತನ್ನ ಮನೆಯಲ್ಲಿ ಹುಗ್ಗಿ ಮಾಡುವುದನ್ನು ಹೆಮ್ಮೆಯಿಂದ ಎಲ್ಲರಿಗೂ ಹೇಳಿಕೊಂಡು ಬರುತ್ತಾನೆ ಹೀಗೆ ಬಸವ ಮನಸ್ಸಿನಲ್ಲಿಯೆ ಗೊಣಗುತ್ತಾ ಎಂಕಪ್ಪ ಶೆಟ್ಟಿ ಅಂಗಡಿ ಕಡೆ ಓಡಿದ. ಆಗ ಶೆಟ್ಟರು ಹತ್ತು ಪೈಸೆಗೆ ಹುರಿಗಡಲೆಯನ್ನು ಹಾಕಿದರು. ಜೇಬಿನಲ್ಲಿ ಕಡ್ಲೆ ಹಾಕಿಕೊಂಡು ತಿನ್ನುತ್ತ ನಡೆದನು. ಇಷ್ಟು ಕಡ್ಲೆ ತಿಂದರೆ ಹುಗ್ಗಿ ಕಡಿಮೆ ಆಗುತ್ತದೆ ಎಂದು ಕಡ್ಲೆ ತಿನ್ನುವುದನ್ನು ಕಡಿಮೆ ಮಾಡಿದನು. ಕಡ್ಲೆ ಎಗರದಂತೆ ಎಡಗೈಯಿಂದ ಜೇಬಿನ್ನು ಭದ್ರವಾಗಿ ಹಿಡಿದುಕೊಂಡು ಮನೆ ಕಡೆ ಹೊರಟನು. ಇಲ್ಲಿ ಬಸವ ತನ್ನ ಹೊಟ್ಟೆ ಹಸಿವನ್ನು ನಿವಾರಿಸಲು ಕಡ್ಲೆ ಮತ್ತು ಹುಗ್ಗಿಯನ್ನು ತಿನ್ನುವುದನ್ನು ಕಾಣುತ್ತೇವೆ.

ಬಸವ ಬುಸುಗರಿಯುತ್ತ ಹೊಸ್ತಿಲು ದಾಟಿದಾಗ ಅವರಪ್ಪ ಹುಗ್ಗಿ ಮನೆತುಂಬ ಹೊಗೆ ದಟ್ಟವಾಗಿ ಕವಿದಿತ್ತು. ಹೊಗೆಯಿಂದಾಗಿ ಅಪ್ಪನ ಕಣ್ಣುಗಳಲ್ಲಿ ನೀರು ಸುರಿಯುತ್ತಿದೆ ಎಂದುಕೊಂಡ ಚಂದ್ರ, ಕೊಟ್ರ, ತಿಮ್ಮಿ ಮೂವರು ಕಣ್ಣು ಮೂಗುಗಳಿಂದ ಹರಿಯುತ್ತಿದ್ದ ನೀರನ್ನು ಲೆಕ್ಕಿಸದೆ ಬೆಲ್ಲಕ್ಕಾಗಿ ಅಳುತ್ತಿದ್ದರು. ಹೊಗೆ ಕಾರುತ್ತಿದ್ದ ಒಲೆಯಲ್ಲಿ ಮುಖ ತುರುಕಿ ಉಫ್ ಉಫೆಂದುಉ ಊದಿ ಅಮ್ಮ ಕೆಮ್ಮಿದಳು. ಅವಳ ಬೆನ್ನು ಹಿಂದೆ ಅರಿದ ಎಲುಬುಗಳನ್ನು ನೋಡಿ ಮೇಲೆ ಬೀಳಲು ಸಾದ್ಯವಾಗಲಿಲ್ಲ ಅಲ್ಲೇ ನಿಂತು ನೋಡುತ್ತಿದ್ದರು. ಬಸವ ತಂಗಿ, ತಮ್ಮರಿಗೆಲ್ಲ ಕಡ್ಲೆ ಹಂಚಿ ಅಪ್ಪನಿಗಂಟಿ ಕುಳಿತಾಗ ಅವನ ತಲೆಯಲ್ಲಿ ಹುಗ್ಗಿಯ ಚಿಂತೆ ಎದ್ದೆದ್ದು ಕುಣಿಯುತ್ತಿತ್ತು. ಅಪ್ಪ ಅಮ್ಮ ಇಬ್ಬರ ಮುಖವನ್ನು ನೋಡಿದರೆ ಮಾತು ಕಳೆದುಕೊಂಡವರಂತೆ ಕುಳಿತಿದ್ದರು. ಇದರಲ್ಲೆ ಇವರ ಸಂಕಟದ ಆಳ ಅರಿವಾಗುತ್ತದೆ. ತಮ್ಮ ತಂಗಿಯರಿಗೆಷ್ಟು ಒಟ್ಟೆ ಅಸದ್ಯೆತಿ ಎಂದು ಅಳುತ್ತಿರುವುದು ನೋಡಿ ಬಸವ ಅಪ್ಪ ಹುಗ್ಗಿ ಯಾವಾಗ ಆಗೋದು? ಎಂದು ಕೇಳಿದನು.

ಬಸವ ಹುಗ್ಗಿ ತಿನ್ನುತ್ತ ಇರಬೇಕಾದರೆ ಅಪ್ಪ ಬಸವ ಎಂದು ಕರೆದು ಅವನ ಬೆನ್ನು ಸವರುತ್ತ ಈ ಹೊತ್ತು ನಾವೆಲ್ಲ ಊರಿಗ್ಹೊಕ್ತಿವಿ... ನೀನೊಬ್ನೆ ಗೌಡ್ರ ಮನ್ಯಾಗಿರು... ಅವ್ರಿಗೆ ಹೇಳ್ತಿನಿ ಎಂದು ಹೇಳಿದ ಮಾತನ್ನು ಕೇಳಿ ಆಶ್ಚರ್ಯವಾಯಿತು. ನಾನೂ ಗೌಡ್ರ ಮನಿಯಾಗಿರೋದಿಲ್ಲ... ನಾನು ಬರ್ತಿನಿ ಊರ್ಗೆ ಅಂತ ಹೇಳಿ ಅಪ್ಪನ ಭುಜ ಹಿಡಿದು ಅಲ್ಲಾಡಿಸತೊಡಗಿದ. ಮೊನ್ನೆ ನಿಜ್ಜಿಂಗನ ಬಳಿ ಬದುಕುವುದಕ್ಕೆ

ಹೊಸಪೇಟೆ ಕಡೆ ಹೋಗಬೇಕೆಂದು ಅಪ್ಪ ಮಾತನಾಡುತ್ತಿದ್ದುದನ್ನು ಜ್ಞಾಪಿಸಿಕೊಂಡ ಅಮ್ಮ ಮುಂದಿದ್ದ ಕೋಲನ್ನೆತ್ತಿಕೊಂಡು ಬಗ್ಗಿ ಹುಗ್ಗಿ ತಿರುವತೊಡಗಿದಾಗ ಚಂದು ಕೊಟ್ರೆ ತಿಮ್ಮಿಯರೆಲ್ಲ ತಟ್ಟೆಗಳಿಗಾಗಿ ಹೊಡೆದಾಡ ತೊಡಗಿದ್ದರು. ಬಸವ ಒಂದು ಸಿಲವಾರ ತಟ್ಟೆಯನ್ನು ಗಿಟ್ಟಿಸಿಕೊಂಡ ಹೀಗೆ ಎಲ್ಲರೂ ಕಣ್ಣು ಮುಚ್ಚದಂತೆ ಹುಗ್ಗಿಯ ಪಾತ್ರೆಯನ್ನೆ ನೋಡುತ್ತ ಕುಳಿತರು. ಈ ಕತೆಯಲ್ಲಿ ಈ ಮಕ್ಕಳು ಹಸಿವಿನಿಂದ ಬಳಲುತ್ತಿರುವುದನ್ನ ಕಾಣುತ್ತೇವೆ. ಅಪ್ಪ ಮಾಡಿದ ಸಾಲವನ್ನು ತೀರಿಸುವುದಕ್ಕಾಗಿ ಬಸವ ಗೌಡರ ಮನೆಯಲ್ಲಿ ಜೀತಕ್ಕಿರಬೇಕಾದ ವಾಸ್ತವ ಇಲ್ಲಿದೆ. ಹುಗ್ಗಿಯ ವಾಸನೆ ಎಲ್ಲರ ಬಾಯಿಯಿಂದ ಹೊರ ಹೊರಡತೊಡಗಿತ್ತು. ಹುಡುಗರೆಲ್ಲರು ನಂಗೆ ನಂಗೆ ಎಂದು ತಟ್ಟೆಗಳನ್ನು ಚಾಚಿ ಮುಂದೆ ಬಂದಾಗ ಅಮ್ಮ ಅಪ್ಪನ ಮುಖವನ್ನು ನೋಡುತ್ತಿದ್ದಳು. ಅಮ್ಮ ಹುಗ್ಗೀ... ಬಸವ ಮುಗಿ ಬಿದ್ದು ತಟ್ಟೆಯನ್ನು ಅಮ್ಮನ ಮುಖಕ್ಕೆ ಹಿಡಿದ. ಸಣ್ಣ ಹುಡ್ಗ ಮಾಡಿದಂಗೆ ಮಾಡ್ತೀಯಲ್ಲಾ ನೀನು ಆಮ್ಯಾಕ ಉಣ್ಣುವಂತೆ ಮೊದ್ಲು ಈ ಗುಂಡಾಲ ಒಯ್ದು ಗೌಡ್ರೀಗೆ ಕೊಟ್ಟು ಬಾ ಓಗು ಎಂದು ಹೇಳಿದ್ದು ಕೇಳಿ ಬಸವನಿಗೆ ಸಿಟ್ಟು ಬಂದಿತ್ತು. ಜೊತೆಗೆ ಕಣ್ಣೀರು ಬಂದವು ನಂಗೆ ಒಟ್ಟೆ ಅಸ್ತದೆ ಮೊದ್ಲು ಹುಗ್ಗಿ ನೀಡು ಉಂಡ ಮ್ಯಾಲೆ ಕೊಟ್ ಬರ್ತೀನಿ ಎಂದು ಹಟ ಹಿಡಿದ ಮೇಲೆ ಅಪ್ಪ ಓಗ್ಲಿ ಸ್ವಲ್ಪ ಕೊಡು ಎಂದದ್ದು ಕೇಳಿ ಸಂತೋಷಪಟ್ಟನು. ಅಮ್ಮ ಎರಡು ಸೌಟು ಹುಗ್ಗಿ ಹಾಕಿ ಸಾಕ್ಹೋಗು ಎಂದು ಹೇಳಿದಳು ಎರಡು ದಿನ ಉಪವಾಸ ಇದ್ದರೂ ಹುಗ್ಗಿ ಸಿಕ್ತು ಎಂದು ಸಂತೋಷ ಪಡುತ್ತಾನೆ. ಹುಗ್ಗಿಯಿಂದ ತನ್ನ ಹಸಿವನ್ನು ನಿವಾರಿಸಿಕೊಳ್ಳುವುದುನ್ನು ಕಾಣುತ್ತದೆ, ಹುಗ್ಗಿ ಕೊಟ್ಟು ಬಾ ಎಂಬ ನೆಪದಲ್ಲಿ ಬಸವನನ್ನು ಗೌಡರ ಮನೆಗೆ ಕಳುಹಿಸುತ್ತಾರೆ. ಆ ಹುಗ್ಗಿ ಆ ದಿನ ಅವನಿಗೆ ಅಲ್ಲಿ ಆಹಾರ. ಅವನಿಲ್ಲದಾಗ ತಾವು ಮನೆಖಾಲಿ ಮಾಡಿಕೊಂಡು ಹೋಗಬೇಕೆಂಬ ನಿರ್ಧಾರ ಅವರದ್ದು. ಇದು ಮೋಸ ಎಂಬ ಸತ್ಯ ಅವರಿಗೆ ತಿಳಿದಿದೆ. ಅದರೆ ಅವರಿಗೆ ಅದು ಅನಿವಾರ್ಯ. ಹೀಗೆ ಬಸವ ಹುಗ್ಗಿ ತಿನ್ನುತ್ತ ಗೌಡರ ಮನೆಯ ಕಡೆ ಹೊರಟನು. ಬಸವ ಗೌಡರ ಮನೆಗೆ ಹೋಗುವಾಗ ಅಮ್ಮ ಬಸ್ಯ ಎಂದು ಕರೆದದ್ದು ಕೇಳಿಸಿಕೊಂಡು ಸಟ್ಟನೆ ಹಿಂದಿರುಗಿ ನೋಡಿದ. ಇಲ್ಲಿ ತಾಯಿಯು ಮಗನನ್ನು ಜೀತಕ್ಕೆ ಕಳುಹಿಸುವ ಸಂದರ್ಭದಲ್ಲಿ ತಾನು ಅನುಭವಿಸುವ ದುಃಖ ಅಪರಿಮಿತ. ಇಲ್ಲಿ ಇವರು ಅನುಭವಿಸುವ ಸಂಕಟ ಅಗಾಧವಾದದ್ದು. ಅಮ್ಮ ನೀನ್ಯಾಕ ಅಳ್ತಿ ಎಂದು ಕೇಳಿ ಗೌಡರ ಮನೆಗೆ ಗುಂಡಾಲು ಕೊಡಲು ಹೊರಟನು. ಹೀಗೆ ಗುಂಡಾಲು ಹೆಗಲ ಮೇಲಿಟ್ಟುಕೊಂಡು ತಾಯವ್ವನ ಗುಡಿ ಸಂದಿಗೆ ಬಂದಾಗ ಬಸವನ ಕಣ್ಣಿಗೆ ಭೀಮ ಬಿದ್ದ ಭೀಮನ ಜೊತೆ ಮಾತಾಡಬೇಕೆನಿಸಿ ಬಸವ ಏನ್ಲೆ ಭೀಮ್ಯಾ? ಇತ್ಲಾಗೆ ಹೊಂಟೆ ಎಂದು ಕೇಳುತ ಅವನಿಗೆ ಕೇಳಿಸಲೆಂದೆ ಒಂದು ತೇಗನ್ನು ಜೋರಾಗಿ ತೇಗಿದ. ಅವನು ಏನುಂಡಿ ಎಂದು ಕೇಳದಿದ್ದರೂ ಬಸವನೆ ಇವತ್ತು ನಮ್ಮನ್ಯಾಗ ಹುಗ್ಗಿ ಮಾಡೀವಲೆ ಎನ್ನುತ್ತ ಗೌಡರ ಮನೆ ಕಡೆ ನಡೆದನು ಯಾವ ದಾರಿಯಿಂದ ಹೋದರೆ ಗೌಡರ ಮನೆಗೆ ಸಮೀಪವಾಗುತ್ತದೆಂದು ಬಸವನಿಗೆ ಗೊತ್ತಿತ್ತು ಎನ್ನುವಂತಿಲ್ಲ ಪ್ರತಿದಿನ ಅಮ್ಮ ಮುಸುರೆ ಪಾತ್ರೆ ತಿಕ್ಕಲು ಗೌಡರ ಮನೆಗೆ ಹೋದಾಗ ಬಸವ ಹಿತ್ತಲ ಬಾಗಿಲಿನಲ್ಲಿ ನಿಂತು ಅಮ್ಮ ಪಾತ್ರೆಗಳಲ್ಲಿಂದ ಬಳಿದು ಅನ್ನಗಿನ್ನ ಏನಾದರೂ ಕೊಟ್ಟರೆ ನಾಲ್ಕು ಗುಕ್ಕು ನುಂಗಿ ತೇಗುತ್ತ ಬರುತ್ತಿದ್ದ. ಗೌಡರ ಮನೆಯ ಮುಳ್ಳುಗೇಟಿನ ಬಳಿ ಮೈ

ಕೊಡವಿ ಮೇಲೆಳುತ್ತಿದ್ದ ಒಣದ ನಾಯಿಯನ್ನು ನೋಡಿ ಬಸವ ಏದುಸಿರು ಬಿಡುತ್ತಾ ನಿಲ್ಲಬೇಕಾಯಿತು. ಹೀಗೆ ಒಂದೊಂದೆ ಹೆಜ್ಜೆ ಇಡುತ್ತ ಗೇಟುದಾಟಿದ. ಗೇಟು ದಾಟಿ ಮೆಟ್ಟಿಲುಗಳನ್ನು ಏರುವಾಗ ಗುಂಡಾಲು ಕೆಳಗಿಟ್ಟಿದ್ದನ್ನು ನೋಡಿ ಗೌಡರು ಬಾರ್ಲೆ ಬಸ್ಯ, ನಿಮ್ಮಪ್ಪ ಹೇಳ್ದಾಂಗೆ ಬಂದ್ಬಿಡು ಎಂದು ಹೇಳುವಾಗ ನಾಯಿಗಿಂತಲು ಭಯಂಕರವಾಗಿ ಕಂಡರು ಹೆದರಿ ಒಂದೆರಡು ಹೆಜ್ಜೆ ಹಿಂದೆ ಸರಿದು ನಮ್ಮಮ್ಮ ಗುಂಡಾಲು ಕೊಟ್ಟು ಜಲ್ದೀ ಬಾ ಅಂದ್ಲು ಇಲ್ಲಿಟ್ಟೀನಿ ನೋಡ್ರಿ ಎಂದು ಹೊರಡುತ್ತಾನೆ ಅವನು ತಪ್ಪಿಸಿಕೊಳ್ಳುತ್ತಾನೆ ಎಂದು ಭಾವಿಸಿದ ಗೌಡರು ಎದ್ದು ನಿಂತು ಎಲ್ಲಿಗೊಕ್ಕಿ ನಿಮ್ಮಪ್ಪ ಸಾಲಕ್ಕೆ ನಿನ್ ಸಂಬ್ಳ ಇಟ್ಟಾನ ಈಗೆಲ್ಲಿರ್ತಾರೆ ನಿಮ್ಮಪ್ಪ ನಿಮ್ಮವ್ವ? ಎಲ್ರು ಊರ್ಗೆ ಹೊಂಟೊಗಿರ್ತಾರೆ ಎಂದಾಗಂತ್ತು ಬಸವ ನಡುಗಿದ. ಜೋರಾಗಿ ಆಳಬೇಕು ಎನಿಸಿದರು ಗೌಡರ ಮೀಸೆ ನೋಡಿ ಒಳಗಷ್ಟೇ ಅಳತೊಡಗಿದ ಇಲ್ಲಿ ಗೌಡ್ರೆ ನಾನು ನಮ್ಮಪ್ಪನ ಜೊತೆ ಊರಿಗೆ ಹೋಗುತ್ತಿದೇನೆಂದು ಅಂಗಿಯಿಂದ ಕಣ್ಣೋರೆಸಿಕೊಳ್ಳುತ್ತ ಹಿಂದೆ ಸರಿಯತೊಡಗಿದ. ನಿಮ್ಮಪ್ಪನ ಜೊತೆ ನೀನೂ ಊರ್ಗೆ ಹೋದ್ರೆ ಬಾಕಿ ತೀರ್ಸೋರ್ಯಾರ್ಲೆ ಬಸ್ಯ ಇಲ್ಲೇನು ನಿನ್ಗೆ ಭಾಳ ಕೆಲ್ಸ ಐತಿ ಸೆಗಣಿ ಬಳಿಯೋದು, ದನ ಕಾಯೋದು, ಕಮ್ಮಗ ಉಂಡಿರೋದು ಬಿಟ್ಟು ಊರ್ಗೆ ಯಾಕ ಹೋಗ್ತಿ ಎನ್ನುತ್ತ ಮುಂದೆ ಬರತೊಡಗಿದನು. ಗೌಡ ಇನ್ನೇನು ತನ್ನನ್ನ ಹಿಡಿದೇ ಬಿಡುತ್ತಾನೆಂಬ ಭಯದಿಂದ ಇಲ್ಲಾ... ನಿಮ್ಮನಿಯಾಗ ಸಂಬ್ಳಕ್ಕ ಇರಾವಿಲ್ಲ ನಾನೂ ನಮ್ಮಪ್ಪನ್‌ಜೊತೆ ಊರಿಗೋಕ್ಕಿನಿ ಎಂದು ಕೂಗುತ್ತ ಓಡತೊಡಗಿದ ಎಲ್ಲರೂ ಮನೆ ಬಿಟ್ಟು ಹೋಗಿರುತ್ತಾರೆಂದು ಜೋರಾಗಿ ಓಡತೊಡಗಿದನು. ಮನೆ ಅಂಗಳಕ್ಕೆ ಬರುತ್ತಾನೆ ಬಾಗಿಲಿಗೆ ಬೀಗ ಹಾಕಿರಲಿಲ್ಲ ತೆರೆದೆ ಇತ್ತು ಗೌಡರು ಹೇಳಿದ್ದು ಸುಳ್ಳು ಎಂದು ಸಮಾಧಾನದಿಂದ ನಡೆಯತ್ತಿರಲು ಹುಗ್ಗಿ ಉಳಿದಿದೆಯೋ ಇಲ್ಲವೆ ಎಂದು ಯೋಚಿಸಿದ. ಒಳಗಿನಿಂದ ತನ್ನ ಪ್ರೀತಿಯ ನಾಯಿ ತೇಗುತ್ತ ವಾಲಾಡುತ್ತ ಒಂದು ಬಸವನ ಮುಂದೆ ಬಿದ್ದು ಕುಯ್ ಕುಯ್ ಎಂದು ಪ್ರಾಣ ಬಿಟ್ಟಿತ್ತು ಅಪ್ಪ ನಾಯಿ ಸತ್ತೋತು ಎಂದು ಅಳುತ್ತ ಬಸವ ಒಳಗೆ ನಡೆಯತೊಡಗಿದ್ದ. ಈ ಕತೆಯಲ್ಲಿ ಬಸವನನ್ನು ಜೀತಕ್ಕಿಟ್ಟಿರುವುದೇ ಮುಖ್ಯ ಸಂಗತಿ. ಕುಟುಂಬದ ನಿರ್ವಹಣೆಯ ಅಗತ್ಯಕ್ಕಾಗಿ ಮಾಡಿ ಸಾಲ ತೀರಿಸಲಾಗದೆ ಕೊನೆಗೆ ಮಗ ಜೀತಕ್ಕೆ ಹೋಗುವುದನ್ನು ಅನಿವಾರ್ಯವಾಗಿದೆ. ಜೀತಕ್ಕಿಟ್ಟಿರುವ ತಂದೆ ತಾಯಿಗಳಿಗೆ ಆಗುವ ಸಂಕಟದ ಪರಮಾವದಿ ಇಲ್ಲಿದೆ. ಗೌಡರ ಮನೆಯಿಂದ ಮಗ ಓಡಿ ಮರಳಿ ಮನೆಗೆ ಬರುತ್ತಾನೆಂದು ಊರನ್ನು ಬಿಟ್ಟು ಹೋಗುತ್ತಾರೆ. ಹೀಗೆ ನರಳುತ್ತಿರುವ ಸಂತ್ರಸ್ತರೂ ಸಾವಿರಾರು ಮಂದಿ ಇದ್ದಾರೆ. ತನ್ನ ತಂದೆ–ತಾಯಿ ಜೀತಕ್ಕಿಟ್ಟಿದ್ದಾರೆ ಎಂದು ತಿಳಿದಾಗ ಅಲ್ಲಿಂದ ಹೆದರಿ ಓಡಿ ಬರುವ ಬಸವನ ಓಟದಲ್ಲೆ ಜೀತ ಎಷ್ಟು ಭಯಾನಕವಾದದ್ದು ಎಂದು ಸ್ಪಷ್ಟವಾಗುತ್ತದೆ. ಊಳಿಗಮಾನ್ಯ ವ್ಯವಸ್ಥೆಯ ಕರಾಳ ಮುಖವಾದ ಜೀತ ಪದ್ಧತಿಯ ಸ್ವರೂಪವನ್ನು ಕತೆ ಚಿತ್ರಿಸುತ್ತದೆ. ಕುವೆಂಪುರವರ 'ಸಾಲದ ಮನೆ' ದೇವನೂರರ 'ಮೂಡಲ ಸೀಮೇಲಿ ಕೊಲೆ ಗಿಲೆ ಮುಂತಾಗಿ' ಕತೆಗಳು ನಿರ್ದಯವಾದ ಜೀತ ಪದ್ದತಿಯಲ್ಲಿ ದಲಿತರು ನರಳುವುದನ್ನು ಸಹಜವಾಗಿ ಚಿತ್ರಿಸಿದ್ದು ಇಲ್ಲಿ ಅವುಗಳ ನೆನಪಾಗುತ್ತದೆ.

ಸಿದ್ದನು ಗುರಿ ಇಟ್ಟಿದ್ದು

ಈ ಕತೆಯಲ್ಲಿ ಬರುವ ಬಂಡಾಯದ ಸ್ವರೂಪ ಹಿಂದೆ ತಿಳಿಸಿದ ಕತೆಗಳಿಗಿಂತ ಸ್ವಲ್ಪಮಟ್ಟಿಗೆ ಭಿನ್ನವಾಗಿದೆ. ಹಸಿವೆ ಹಾಗೂ ಶಕ್ತಿಯನ್ನು ಮೂಡಿಸಿಕೊಳ್ಳಬೇಕೆಂಬ ಆಸೆ ಮೀನನ್ನು ಹಿಡಿಯಲು ಕಾರಣ ಮತ್ತು ಅದನ್ನು ಕದಿಯುವಿಕೆ ಇಲ್ಲಿನ ಪ್ರತಿಭಟನೆಗೆ ಕಾರಣವಾಗುತ್ತದೆ. ಇಲ್ಲಿ ಜಮಿನ್ದಾರಿಕೆಯ ಕ್ರೌರ್ಯವಿಲ್ಲ. ಬದಲಾಗಿ ಮಠಾಧಿಪತಿಗಳ ವೇಷಾಧಾರಿ ಸ್ವಾಮಿಗಳ ಕ್ರೌರ್ಯವಿದೆ. ಈ ಕತೆಯಲ್ಲಿ ಮುಖ್ಯ ಪಾತ್ರ ಸಿದ್ದನದು. ಕೊಟ್ರಪ್ಪ ಮಾಸ್ತರು ಹಿಂದಿನ ದಿನ ಶಾಲೆಯಲ್ಲಿ ಜೀವಸತ್ವಗಳು ಎಂಬ ಪಾಠಕ್ಕೆ ಸಂಬಂಧಿಸಿದಂತೆ ಮೀನುಗಳ ಬಗ್ಗೆ ವಿವರವಾಗಿ ಹೇಳಿದ್ದು ಕೇಳಿ ದಿವಂಗತ ಬಡಕಲರ ಲಸುಮನ ಐದನೆಯ ಮಗ ಸಿದ್ದ ತುಂಬ ಉಲ್ಲಸಿತನಾಗಿದ್ದನು. ಅವನ ತಲೆಯಲ್ಲಿ ಮಾಸ್ತರರು ಆಡಿದ ಪ್ರತಿ ಮಾತುಗಳು ಮರುಹುಟ್ಟು ಪಡೆಯತೊಡಗಿದ್ದವು. ಸಿದ್ದನು ಕೊಟ್ರಪ್ಪ ಮಾಸ್ತರು ಹೇಳಿದ್ದನ್ನು ಅಂದರೆ ಮೀನನ್ನು ತಿನ್ನಬೇಕೆಂಬ ಆಸೆಯನ್ನು ಹೊಂದಿದ್ದನು. ಮೀನು ತಿಂದರೆ ಶಕ್ತಿ ಬರುತ್ತದೆ ಎಂಬುದು ಕುಂಡಿಯಲ್ಲಿ ಅರೆಪಾವು ಮಾಂಸವಿರದಿದ್ದ ಸಿದ್ದನಿಗೆ ಪದೇ ಪದೇ ನೆನಪಾಗಿ ಮುಖದ ಪೊಟರೆಯಾದ ಬಾಯಿಂದ ಜೊಲ್ಲು ಹನಿ ಹನಿಯಾಗಿ ತೊಟ್ಟಿಕ್ಕತೊಡಗಿತ್ತು. ಸಿದ್ದನ ಆಲೋಚನೆ ಎಷ್ಟರ ಮಟ್ಟಿಗೆ ಇತ್ತೆಂದರೆ ಲೇಖಕರ ಮಾತಿನಲ್ಲೆ ಹೇಳುವುದಾದರೆ "ಚುಬ್ತಗಂಡು ಹೋದದ್ದೆ ಆದರೆ ತಿಂದ ಮೀನೆಲ್ಲ ಗೊಬ್ಬರ ರೂಪದಲ್ಲಿ ಹೊರಗೆ ಹೋಗುವುದಾದ್ದರಿಂದ ತಳದ ಭದ್ರತೆ ಬಗ್ಗೆ ಎಚ್ಚರವಹಿಸಿದನು ಜಾಣ ಹುಡುಗ ಸಿದ್ದ.

ಕೊಟ್ರೇಶನ ಕಾರ್ತಿಕದಂದು ತೊಟ್ಟುಕೊಂಡಿದ್ದ ನಶೆಮಡಿ ಬಣ್ಣದ ಮೊಂಡು ತೋಳಿನ ಅಂಗಿಯ ಮೇಲೆ ಯಾವುದೋ ದೇಶದ ಮ್ಯಾಪೊಂದು ರಚನೆ ಮೂಡಿತ್ತು. ಅದು ಒಮ್ಮೊಮ್ಮೆ ಭಾರತದಂತೆಯೊ ಒಮ್ಮೊಮ್ಮೆ ಅಮೇರಿಕದಂತೆಯೂ ಕಂಡುಬಂದಿತ್ತು ಆ ಮ್ಯಾಪು ಸ್ವಲ್ಪ ಹೊತ್ತು ಅಂಗಿ ಮೇಲೆ ಇದ್ದರು ಹೊಟ್ಟೆ ತುಂಬಿದಂತೆಯೊ ಮೈಯೊಳಗೆ ಶಕ್ತಿ ತುಣುಕಾಡಿದಂತೆಯು ಸಿದ್ದ ಇದನ್ನು ಕಲ್ಪಿಸಿಕೊಂಡಾಗಲೆಲ್ಲ ಅವನಿಗೆ ಗೆಲುವಿನ ಕ್ಷಣಗಳಾಗಿದ್ದವು ಹರಿದ ಬಟ್ಟೆಯ ಸ್ವರೂಪವನ್ನು ಇದು ತಿಳಿಸುತ್ತದೆ. ಕೊಟ್ರಪ್ಪ ಮಾಸ್ತರು ಸಾಲೆಯಲ್ಲಿ ಸಿದ್ದನ ಆಲಚೆಪ್ಪಾಕಾರವ ಮುಖಿ ನಯನಮನೋಹರವಾಗಿ ಕಂಡ ಕೂಡಲೆ ಅಂದು ಬಿಡುವುದು ಮಾಮೂಲು ಸಂಗತಿಯಾಗಿತ್ತು. ಇಲ್ಲಿ ಮಾಸ್ತರು ಸಿದ್ದನನ್ನು ಕೆಳವರ್ಗದವನು ಎಂದು ದೂರ ಇಡುತ್ತಿರುವುದನ್ನು ಕಾಣುತ್ತೇವೆ.

ಒಂದನೆಯ ತರಗತಿಯ ಮೊಲೆ ಚೀಪುವ ಹುಡುಗರು ತಮ್ಮ ತಮ್ಮ ಸೀಟುಗಳಲ್ಲಿ ಕಲಿತು ಗೀಚಿದ ಅಕ್ಷರಗಳ ನೆರೆಗಳಲ್ಲಿ ಸಿದ್ದನ ಮುಖದಲ್ಲಿ ಮಡುಗಟ್ಟಿತು. ಅವನ ಬೆವರಿನ ಗೆರೆಗಳು ಸಿಂಬಳ ಹರಿದಾಡಿದ ಅಂಕುಡೊಂಕು ರಸ್ತೆಗಳು ಬೆಳಗಿನ ಎಳೆ ಬಿಸಿಲಿಗೆ ಪಳ ಪಳ ಹೊಳೆದು ಬಿಡುತ್ತಿತ್ತು. ಇಂತಹ ಅನೇಕ ಕಾರಣಗಳಿಂದ ಸಿದ್ದನನ್ನು 5ನೇ ತರಗತಿ ಓದುತ್ತಿದ್ದಾಗ ಶಾಲಾ ಸಾಮಗ್ರಿಗಳೊಂದಿಗೆ ಬಂದು ಮೂಲೆಯಲ್ಲಿ ಕೂರಿಸಿದ್ದರು. ಅವನ ಈ ಸ್ವರೂಪವೇ ಅವನ ತಳ ಸಮುದಾಯದ ಅತಂತ್ರ ಸ್ಥಿತಿಯನ್ನು ಸ್ಪಷ್ಟ ಪಡಿಸುತ್ತದೆ. ದಲಿತರ ವಿದ್ಯಾಭ್ಯಾಸ ಎಷ್ಟು ಕಷ್ಟ ಎಂಬ ಸಂಗತಿಯನ್ನು ಲೇಖಕರು

ತಿಳಿಸುತ್ತಾರೆ. ಗೋವಿಂದಯ್ಯನವರ ಅ ಆ ಅಕ್ಷರಗಳ ನಡುವೆ ಎಂಬ ಕವಿತೆ ಇಲ್ಲಿ ನೆನಪಾಗುತ್ತದೆ ಇಂದು ಸರ್ಕಾರ ಜಾರಿಗೆ ತಂದ ಆರ್.ಟಿ..ಇ ಕಾಯಿದೆ ಮೂಲಕ ಪ್ರವೇಶ ಪಡೆದ ಕೊಳಗೇರಿಯ ಮಕ್ಕಳನ್ನು ಪ್ರತಿಷ್ಠಿತ ಶಾಲೆಗಳು ನಡೆಸಿಕೊಳ್ಳುವ ಚಿತ್ರಣ ನೆನಪಾಗುತ್ತದೆ. ಸೇರಿಸಿ ಕೊಳ್ಳದಿರಲು ಅವರು ಕೊಡುವ ಕಾರಣಗಳ ನೆನಪಾಗುತ್ತದೆ.

ಸೈನ್ಸ್ ಪಾಠ ಮಾಡುವಾಗ ಕೊಟ್ರಪ್ಪ ಮಾಸ್ತರು ಮೀನುಗಳೆಂಬ ಶಬ್ದ ಎಚ್ಚರಿಸಿದ್ದೆ ಮುಂದಿನ ಸಾಲಿಗೆ ಓಡಿ ಬರುತ್ತಿದ್ದನು. ತನ್ಮಯನಾಗಿ ಪಾಠ ಕೇಳುತ್ತಿದ್ದನು. ಮೀನುಗಳು ಕಿವಿಯಿಂದ ಉಸುರಾಡುತ್ತವೆ ಎಂಬ ಸಂಟೆನ್ಸನ್ನು ಒಂದೇ ಏಟಿಗೆ ನೆನಪಿನಲ್ಲಿಟ್ಟುಕೊಂಡಿದ್ದನು. ಮೂಗು ಬಾಯಿಂದ ಉಸಿರಾಡುವ ಪ್ರಾಣಿಗಳು ಕಿವಿಯಿಂದ ಉಸಿರಾಡುವ ಮೀನುಗಳಂಥ ಜಲಚರಗಳನ್ನು ತಿಂದರೆ ಶಕ್ತಿ ಹೆಚ್ಚುತ್ತವೆ ಎಂದು ಯೋಚಿಸತೊಡಗಿದನು. ಕಿವಿ ಸಂದಿಯಲ್ಲಿ ಬೀಡಿ ಇಟ್ಟುಕೊಂಡು ಅಡ್ಡಾಡುವ ಹಮಾಲಿ ಅಮಡ್ಡೊ ಕಿವಿ ಸಂದಿಯಲ್ಲಿ ಪೆನ್‌ಸಿಲ್ಲನ್ನು ಇಟ್ಟಕೊಂಡು ತಿರುಗಾಡುವ ಅಂಗಡಿರುದ್ರಜ್ಜಿನೂ ವಿನಾಕಾರಣ ನೆನಪಾಗುತ್ತಿತ್ತು.

ಮೀನು ತಿಂದರೆ ಶಕ್ತಿ ಬರುತ್ತದೆ ಶಕ್ತಿ ಬಂದ ಕೂಡಲೆ ಕಬ್ಬಡಿ ಆಟ ಆಡಿ ಎದುರು ಪಾರ್ಟಿಯ ಗುರುವನ್ನು ಸೋಲಿಸಬೇಕೆಂದು ಕೊಂಡನು. ಹುಟ್ಟಿದ ಮೂರು ತಿಂಗಳಲ್ಲೆ ತನ್ನ ತಂದೆಯನ್ನು ಕಳೆದುಕೊಂಡಿದ್ದ ಸಿದ್ದನಈ ತಾಯಿ ಮಗ ಸರ್ಕಾರಿ ಸಂಬಳ ತಗೊಳ್ಳುವಷ್ಟು ಓದಿದ್ದರೆ ಸಾಕು ಎಂಬ ತಾಯಿಯ ಈ ಆಸೆ ಇಲ್ಲಿ ವಿಶೇಷ. ಇಂಥ ಕನಸುಗಳು ಆ ಸಮುದಾಯದಲ್ಲಿ ಸ್ಥಿತ್ಯಂತರದ ಬಯಕೆ ಉಂಟಾಗುತ್ತಿರುವುದನ್ನು ತಿಳಿಸುತ್ತದೆ. ಆಸೆ ಹೊಂದಿದ್ದಳು ಆದರೆ ಸಿದ್ದನು ಸಾದರ ಶಿವಣ್ಣನ ಜೊತೆ ಪಾಠದ ಚೀಲವನ್ನು ತೆಗೆದುಕೊಂಡು ಇಡೀ ರಾತ್ರಿ ಅಡ್ಡಾಡಿ ತನ್ನಣ್ಣಂದಿರಿಗೆ ಮೀನಿನ ವರ್ಣನೆಯನ್ನು ಹೇಳುತ್ತಿದ್ದನು ಇಡೀ ರಾತ್ರಿ ಸಿದ್ದನಿಗೆ ನಿದ್ದೆ ಬರಲಿಲ್ಲ.

ಒಣಗಿರುವ ಕೆರೆ, ಹಳ್ಳದಂಗಳಗಳು ಎಲ್ಲವೂ ಬಿರುಕುಗಳಿಂದಲೇ ತುಂಬಿರುವುದರಿಂದ ತಾನು ಮೊದಲಾಗಿ ಮನೆಯ ಮಂದಿಯ ಕಣ್ಣುಗಳ ಗುಡ್ಡೆಗಳಲ್ಲಿ ತಳ ಕಂಡು ಪಿಳುಕು ಪಿಳುಕು ಬಿಡುತ್ತಿದ್ದವು ಅರ್ಥಾತ್ ಊರು ಬರಗಾಲಕ್ಕೆ ತುತ್ತಾಗಿತ್ತು. ಮಳೆ ಇಲ್ಲದೆ ಹೊಲಗದ್ದೆಗಳಲ್ಲಿ ಕೆಲಸವಿಲ್ಲದೆ ಕೂಲಿ ಸಿಗದೆ ಅನ್ನಕ್ಕೆ ದಾರಿ ಇಲ್ಲವಾಗಿತ್ತು. ಶಾಲೆಗೆ ಮತ್ತೆ ಚಕ್ಕರ್ ಕೊಟ್ಟಿದ್ದ ಸಿದ್ದ ಬಸವನ ಬಾವಿ ದಿನ್ನಿಯ ಮೇಲೆ ನಿಂತು ಮಠದ ಕಡೆಗೆ ಹೋಗುವುದನ್ನು ನಿರ್ಧರಿಸಿದನು ಎರಡು ಬೆಟ್ಟಗಳ ನಡುವೆ ಹಸಿರುಮುರಿದು ನಡೆಯುವುದೆಂದರೆ ಅವನಿಗೆ ಎಲ್ಲಿಲ್ಲದ ಸಂತೋಷ. ಕಳೆದ ವರ್ಷ ಜಾತ್ರೆಯಲ್ಲಿ ತಪ್ಪಿಸಿಕೊಂಡದ್ದು ಬತ್ತಾಸು ತಿಂದದ್ದು ಮುಖದ ತುಂಬ ಇರುವೆ ಮಕ್ಕರಿಸಿಕೊಂಡದ್ದು ಎಲ್ಲಾವನ್ನು ನೆನಪು ಮಾಡಿಕೊಳ್ಳುತ್ತಿದ್ದನು.

ಸಿದ್ದನೂ ಲಿಂಗಾಯತರ ಹುಡುಗನಾಗಿದ್ದಲ್ಲಿ ಮಠದ ಸಾವಿರಾರು ಹುಡುಗರ ಜೊತೆ ಹಾಲಿನೊಳಗೆ ಸಕ್ಕರೆ ಕರಗುವ ರೀತಿಯಲ್ಲಿ ಬೆರೆತು ಪಾಠ ಕಲಿತು ಬುದ್ದಿವಂತನಾಗಬಹುದಿತ್ತು ಎಂದು

ಯೋಚಿಸತೊಡಗಿದ್ದನು ಲಿಂಗಾಯತ ಮಕ್ಕಳಿಗೆ ಇರುವ ಸೌಲಭ್ಯದ ಚಿತ್ರಣ ಇಲ್ಲಿದೆ. ರಾಶಿ ರಾಶಿ ಹುಡುಗರು ವಿಭೂತಿ ಬಳಿದು ಕೊಂಡು ಅವರು ಪ್ರಾರ್ಥನೆಗೆ ಹೋಗುವುದನ್ನು ಕಣ್ತುಂಬ ನೋಡಬೇಕೆಂಬ ವಿಚಾರ ಹೊಳೆದು ಜೊತೆಗೆ ವಕ್ರಣಿ ತುಂಬ ಎಗರಾಡುವ ಮೀನುಗಳನ್ನು ನೋಡಬೇಕೆಂಬ ಆಸೆಯನ್ನು ಹೊಂದಿ ಮಠದ ಕಡೆ ಹೆಜ್ಜೆ ಹಾಕತೊಡಗಿದನು.

ಶಿಸ್ತಿನ ಸಿಪಾಯಿಗಳಂತೆ ಕೂತು ಮಂತ್ರ ಹೇಳುತ್ತಿರುವ ಹುಡುಗರನ್ನು ಎತ್ತರವಾದ ವೇದಿಕೆಯ ಮೇಲೆ ಕೂತಿದ್ದ ದೊಡ್ಡ ಸ್ವಾಮಿಗಳ ಭವ್ಯ ವ್ಯಕ್ತಿತ್ವವನ್ನು ದೂರದಿಂದಲೇ ನೋಡಿ ಸಿದ್ದನು ಮಠಕ್ಕೆ ತನ್ನ ಹೆಸರು ಇಟ್ಟಿದ್ದರೂ ಮಠದ ಹೆಸರು ತನಗೆ ಇಟ್ಟಿದ್ದಾರೊ ಎಂದು ಗೊಂದಲಕ್ಕೀಡಾದನು ಹೀಗೆ ಯೋಚಿಸುತ್ತಾ ಸಿದ್ದನು ವಕ್ರಾಣಿ ಕಡೆಗೆ ಸುಯ್ ಅಂತ ಓಡಿದನು. ಚೌಕಾಕಾರದ ವಕ್ರಾಣಿಗೆ ಪರಮೇಶ್ವರನ ತಲೆಯಿಂದ ನೀರು ಬರುತ್ತದೆ ಎಂದು ಹೇಳಿದ್ದು ನೆನಪಾಗಿ ಪರಮೇಶ್ವರ ತನ್ನ ತಲೆಯ ನೀರನ್ನು ಊರ ಕಡೆಗೆ ಬಿಡದೆ ಕೇವಲ ಮಠದ ವಕ್ರಾಣಗೆ ಬಿಡುತ್ತಿರುವುದು ಕಂಡು ದೇವರ ಮೇಲೆ ಕೋಪಗೊಂಡನು. ಇಲ್ಲಿ ಸಿದ್ದನು ಮೇಲ್‌ವರ್ಗದವರಿಗೆ ಮಾತ್ರ ಪರಮೇಶ್ವರನು ನೀರು ಬಿಟ್ಟಿರುವುದನ್ನು ಕಂಡು ದೇವರು ಸಹ ಮೇಲ್‌ವರ್ಗ ಕೆಳವರ್ಗದವರು ಎಂದು ತಿಳಿದಿದ್ದರೆ ಎಂದು ನಂಬುತ್ತಾನೆ. ವಕ್ರಾಣಿಯೊಳಗೆ ಇಳಿದು ನೋಡುತ್ತಾನೆ ನೂರಾರು ಮೀನುಗಳಿಗೆ ಮೀಸೆ ಇರುವುದನ್ನು ಗಮನಿಸುತ್ತಾನೆ ನೀರಿಗೆ ಕ್ಯಾಕರಿಸಿ ಉಗಿದು ಸಿದ್ದನು ಕಮ್ಮನೆಯ ಕಫಕ್ಕೆ ದೇವರ ವಕ್ರಾಣಿಯ ಮೀನುಗಳು ಸಿಕ್ಕವರಿಗೆ ಸಿವ್ಲಿಂಗ ಅಂತ ಮುಕ್ಕರಿ ತಿಂದವು ಎಲಾ ಇವನ ಮಠದ ಮೀನುಗಳು ನನ್ನಂಥ ಕಪ್ಪು ಮಂದಿ ಹುಡುಗನ ಉಗುಳನ್ನು ತಿಂದವಲ್ಲಾ ಅಂದು ಕೊಂಡ ಸಿದ್ದನಂತವನೂ ಊರ ಬೀದಿಯಲ್ಲಿ ಉಗುಳುವುದೆ ಅಸಾಧ್ಯ ಹಾಗೆ ಉಗುಳುವುದು ಮಹಾ ಅಪರಾಧ. ಪರಿಸ್ಥಿತಿ ಹೀಗಿರುವಾಗ ಸಿದ್ದನ ಉಗುಳನ್ನು ಮೀನುಗಳು ತಿನ್ನುತ್ತವೆ ಎಂದರೆ ಸಿದ್ದನಿಗೆ ಪರಮಾಶ್ಚರ್ಯದ ಸಂಗತಿ ಇದು ಮಠದ ಮರಿಸ್ವಾಮಿಗಳಂತೆ ದುಂಡ ದುಂಡಗೆ ಬೆಳೆದಿರುವ ಮೀನುಗಳನ್ನು ಕಂಡು ಮುಗ್ಧ ಬಾಲಕನಾದ ಅವನ ಬಾಯಿದಲ್ಲಿ ನೀರು ತುಳುಕಿಸುತ್ತಲೆ ಇದ್ದವು. ಮಠದ ಮೀನುಗಳನ್ನು ತಿಂದರೆ ರಕ್ತಕಾರಿ ಸತ್ತುಬಿಡುತ್ತಾರೆ ಎಂದು ಒಂದು ಕ್ಷಣ ಹೆದರಿದನು. ಹೊಟ್ಟೆಗೆ ತುರುಕುವಲ್ಲಿ ತುತ್ತುಗಳನ್ನು ಎಣಿಸುವ ಕರ್ಮ ಸಾವಿಗಿಂತಲೂ ಕ್ರೂರ ಎಂದು ನಿರ್ಧರಿಸಿದ್ದನು. ನಂತರ ಶಾಲೆಗೆ ಹೋದವನಂತೆ ನಟಿಸಿ ಅಟ್ಟದ ಮೇಲೆ ಇದ್ದ ಗಾಳವನ್ನು ಹೊರತೆಗೆದನು. ನಮ್ಮಪ್ಪ ಈ ಗಾಳದಿಂದಲೆ ಸತ್ತಿದ್ದು ಎಂದು ಮನಸಿಗೆ ಬಂದಿತು. ಆದರೂ ಆ ಗಾಳ ಮಾಡಿಕೊಟ್ಟ ಧೈರ್ಯ ಮಾಡಿ ಕೊಟ್ಟಂಥ ಶಿರಿಬಿ ಮೂಗಣಗೆ ನಮೋ ನಮಃ ಅನ್ನತ ಗಾಳವನ್ನು ಚಕ ಚಕನೆ ರಿಪೇರಿ ಮಾಡಿದನು. ಈ ಕತೆಯಲ್ಲಿ ಸಿದ್ದನ ತಂದೆ ಮೀನುಗಳನ್ನು ಹಿಡಿಯಲೂ ಹೋಗಿ ಸತ್ತಿರುತ್ತಾನೆ. ಆದ್ದರಿಂದ ಆ ಗಳವನ್ನು ಅಟ್ಟದ ಮೇಲೆ ಎಸೆದಿರುತ್ತಾರೆ. ಆದರೆ ಸಿದ್ದನು ಯಾವುದಕ್ಕೂ ಹೆದರದೆ ಆ ಗಾಳವನ್ನು ರಿಪೇರಿ ಮಾಡುತ್ತಾನೆ. ಸಿದ್ದನು ಮಠದ ಕಡೆ ಬಂದಾಗ ಸೂರ್ಯ ಪರಮಾತನ ಕಿರಣಗಳು ಚೆಲ್ಲಿದ್ದವು. ಆ ದಾರುಣ ಬೆಳಕಿನಲ್ಲಿ ವಿಧ್ಯಾರ್ಥಿಗಳು ಮರಿಸ್ವಾಮಿಗಳು ಬೆಳ್ಳಕ್ಕಿಗಳಂತೆಯೂ ಕೆಂಬೂತಗಳಂತೆಯೂ ಕಂಗೊಳಿಸುತ್ತಿದ್ದರು. ಸಿದ್ದನು ಸರಸರ ನೀರಿಗಿಳಿದವನೆ ಗಾಳದ ಕೊಕ್ಕೊಗೆ ಲಿಬಿಲಿಬಿ ಒದ್ದಾಡುತ್ತಿದ್ದ. ಮಳೆ ಹುಳಗಳನ್ನು

ಸಿಕ್ಕಿಸಿ ನೀರೊಳಗೆ ಎಸೆದನು ಇಡೀ ದೇಹದ ಶಕ್ತಿಯನ್ನು ತನ್ನೇರಡು ರಟ್ಟೆಗಳಿಗೆ ತಂದುಕೊಂಡು ಎತ್ತಿದ ಕೂಡಲೆ ಗಾಳಕ್ಕೆ ಸಿಕ್ಕೊಂಡಿದ್ದ ಮೀನು ಒಂದೆಡೆ ರಪ್ಪನೆ ಬಡಿದು ವಿಲವಿಲನೆ ಒದ್ದಾಡತೊಡಗಿತು. ಹೀಗೆ ಮೀನುಹಿಡಿಯುವ ಪ್ರಯತ್ನದಲ್ಲಿ ಸಿದ್ದ ತನ್ನ ಹಿಂದೆ ಕಾಷಾಯೊಂಬರಧಾರಿಯೊಬ್ಬ ಬರುವುದನ್ನು ಗಮನಿಸಲೆ ಇಲ್ಲ. ದೇವರ ವಕ್ರಾಣಿಯಲ್ಲಿ ಮೀನನ್ನು ಹಿಡಿಯುತ್ತಿರುವಿಯಾ ಶೂದ್ರ ಮಂಡೆ ಮಗನೆ ಅಂದವನೆ ಗಬಕ್ಕನೆ ಸಿದ್ದನನ್ನು ಹಿಡಿದುಬಿಟ್ಟನು. ಆ ಮಠಿಸ್ವಾಮಿಯೇ ಮೀನು ಹಿಡಿಯುವಂತ ಶೂದ್ರನಾಗಿ ಬಿಟ್ಟಿದ್ದನು. ಹೀಗೆ ಸಿದ್ದನು ಮೀನು ಹಿಡಿಯುವ ಪ್ರಯತ್ನದಲ್ಲಿ ಕಾಷಾಯಧಾರಿಯ ಗಾಳಕ್ಕೆ ಸಿಲುಕಿದನು.

ಹೀಗೆ ಬಂಧಿತನಾಗಿ ಸಿದ್ದನನ್ನು ಮಠದ ಅಂಗಳದಲ್ಲಿದ್ದ ಕಂಬಕ್ಕೆ ಬಿಗಿದು ಹೊಡೆದರು. ಇದರಿಂದ ಸಿದ್ದನು ಸ್ವಾಮಿಗಳು ತನ್ನನ್ನು ಕ್ಷಮಿಸುವುದಿಲ್ಲವೆಂದು ತಿಳಿದು ದುಃಖದ ಸಮಯದಲ್ಲಿ ಗೆಲುವಿನಿಂದ ಇದ್ದನು. ಅವನ ಕಣ್ಣುಗಳಲ್ಲಿ ಆಶಾ ಜ್ಯೋತಿ ಮಿನುಗುತ್ತಲೆ ಇತ್ತು ಹಸಿವಿನಿಂದ ಒದೆಸಿಕೊಂಡನು. ಇಲ್ಲಿ ನೋವಿಗಿಂತಲು, ಏನು ಸಿಗಲಿಲ್ಲ, ಹಸಿವನ್ನು ನೀಗಿಸಲು ಸಾಧ್ಯವಿಲ್ಲವೆಂದು ತಿಳಿಯುತ್ತಾನೆ. ತಾನು ಇಲ್ಲಿಗೆ ಬಂದಿರುವುದು ಪುಣ್ಯವೆಂದು ಹೇಳುತ್ತಿದ್ದಂಗೆ ಹತ್ತಾರು ಪೊರಕೆಯ ಏಟುಗಳು ತಲೆಗೆ ಬಿದ್ದವು. ಮೀನಿನಂಥ ಅಮಾಯಕ ಪ್ರಾಣಿಗಳನ್ನು ಹಿಂಸಿಸುತ್ತೀಯಾ. ಮಠವನ್ನು ಅಪವಿತ್ರಗೊಳಿಸಿದ್ದೀಯಾ ಎನ್ನುತ್ತಾ ಮತ್ತೊಂದು ಒದೆ ಕೊಟ್ಟರು. ಹೀಗೆ ಒದೆ ತಿನ್ನುತ್ತಿರುವಾಗ ಶ್ರೀ ಶೈಲ ಮೊದಲಾದ ಪಂಚ ಪೀಠಗಳು ಕಾಣಿಸಿಕೊಂಡವು ಮಾನವೀಯತೆಯು ಸತ್ತು ಹೋಗಿರುವ ಮಾನವ ರೂಪಿ ಮೃಗಗಳ ಬೇಟೆಗೆ ಸಿದ್ದು ಸಿಕ್ಕಿ ಹಾಕಿಕೊಂಡಿದ್ದನು. ಹೀಗೆ ಸಿದ್ದನು ಮಠದ ಅಡ್ಡಪಲ್ಲಕ್ಕಿ ಉತ್ಸವದ ಅದೆ ಊರಲ್ಲಿ ನಡೆಯಲಿರುವುದು ತಿಳಿದು ಸಿದ್ದನಿಗೆ ಆನಂದವಾಯಿತು. ಊರ ತುಂಬ ಭಕ್ತಿ ಎಂಬುದು ಹಾಲಿನ ಹೊಳೆಯಂತೆ ಕಂಡಿತ್ತು. ಜಿಯಾ ನವು ಪಾರೂತಿ ಪತಿ ಹರ ಹರ ಮಾದೇವ ಎಂದು ಘೋಷಣೆ ಮಾಡಿ ಮುಗಿಲಿಗೆ ಮುಟ್ಟಿದ್ದರು. ಇನ್ನೇನು ಮೆರವಣಿಗೆ ಮುಗಿಯುತ್ತಿದ್ದಂತೆ ಸಿದ್ದನು ತೂರಿದ ಹಿಡಿ ಗಾತ್ರದ ಕಲ್ಲೊಂದು ರಾಮ ಬಿಟ್ಟ ಬಾಣದಂತೆ ಅಡ್ಡಪಲ್ಲಕ್ಕಿಯ ಮೇಲಿದ್ದ ಸ್ವಾಮಿಗಳ ಹಣೆಗೆ ಬಡಿಯಿತು ಹೀಗೆ ಸಿದ್ದನು ಸ್ವಾಮಿಗಳಿಂದ ಒದೆತಿಂದದಕ್ಕೆ ಪ್ರತೀಕಾರ ತೀರಿಸಿಕೊಳ್ಳುತ್ತಾನೆ. ಮಾನವೀಯತೆಯ ಮೌಲ್ಯವನ್ನು ಪ್ರತಿಪಾದಿಸಿದ ಲಿಂಗಾಯತ ಧರ್ಮಕ್ಕೆ ಕೆಲವರೇ ವಾರಾಸುದಾರರಾಗಿ ಆ ಸ್ವಾಮಿಗಳು ಹೇಗೆ ಮತ್ತೆ ಆ ಧರ್ಮವನ್ನು ಮೌಢ್ಯದ ಮತ್ತು ಅಮಾನವೀಯತೆಯ ಕೂಪವನ್ನಾಗಿಸಿದ್ದಾರೆ ಎಂಬುದು ಈ ಕತೆಯ ತಿರುಳು.

ಹಾಗೆ ವಚನ ಕಾರರ ಕಾಲ ಘಟ್ಟದಲ್ಲಿ ನೋಡುವುದಾದರೆ ಆ ಶರಣರ ಬದುಕಿನ ಆದರ್ಶಗಳು ಅವನ ತತ್ವಗಳು ಎಲ್ಲವೂ ಇಂದು ಎಂಥ ಅವನತಿಯ ಹಾದಿ ಹಿಡಿದಿದೆ ಅಥವಾ ಅತ್ಯಂತ ಅಪಹಾಸ್ಯಕ್ಕೀಡಾಗಿವೆ ಎಂಬುದನ್ನು ಹೇಳುವುದರ ಮೂಲಕ ಆ ಧರ್ಮದ ಅವನತಿಯನ್ನು ಲೇಖಕರು ಅನಾವರಣಗೊಳಿಸುತ್ತಾರೆ. ಮತ್ತೆ ಇಂದಿನ ಈ ವ್ಯವಸ್ಥೆಯ ಬಗೆಗಿನ ವಿಡಂಬನಾತ್ಮಕ ಪ್ರತಿಭಟನೆಯನ್ನು ಇಲ್ಲಿ ನೋಡಬಹುದು.

"ತಲತಲಾಂತರದಿಂದ ತಲೆ ಬಗ್ಗಿಸಿದವನ

ತಲೆಗೆ ಹೊನ್ನಿನ ಕಳಸವೆಂದ ಬಸವಾ"

ಎಂದು ವಚನಕಾರರು ದಲಿತೋದ್ಧಾರವನ್ನು ಹೇಳುತ್ತಾರೆ ಹೀಗೆ ನುಡಿದ ಬಸವನ ಮಾತು ಹೇಗೆ ತದ ನಂತರದಲ್ಲಿ ಅರ್ಥ ಕಳೆದುಕೊಂಡಿತ್ತೆಂಬುದಕ್ಕೆ ಈ ಕಥೆ ಉದಾಹರಣೆ ಯಾಗುತ್ತದೆ ಹಾಗೆಯೇ ಮುಂದುವರೆದು.

"ನಿನ್ನ ಗುರು ಜಗದ್ಗುರುವಾಗಿ ಅಡ್ಡಡ್ಡ

ಅಡ್ಡ ಪಲ್ಲಕ್ಕಿಯಲ್ಲಿ ಮೆರೆದನೋ ಬಸವಾ

ಹಗಲೆಲ್ಲ ಹಡಬಿಟ್ಟಿ ತಂದ ಜಂಗಮ ಕುಂತ ಕುಂತಲ್ಲೆ ಸ್ಥಿರವಾದನಲ್ಲೊ ಬಸವ"

ಇಲ್ಲಿ ಇಂದು ಜಗದ್ಗುರುಗಳನ್ನ ಕುರಿತು ಹೀಗೆ ಹೇಳುವಲ್ಲಿ ಮುಂದೆ ಈ ಧರ್ಮ ಯಾವ ತಿರುವು ಪಡೆಯ ಬಹುದೆಂಬ ಭೀತಿಯಿದೆ. ಇಂದು ಇದು ನಿಜವಾಗಿದೆ. ಬಿರುದನ್ನು ಹೊಂದಿ ಮಠಾಧೀಶರಾಗಿ ಮೆರೆಯುತ್ತಿರುವ ಮಠಾಧಿಪತಿಗಳನ್ನು ಮೊದಲೇ ಲೇವಡಿ ಮಾಡಿದ್ದಾರೆ. ಬಸವಣ್ಣ ಇವರ ಕೂಸಾದ ಸೃಷ್ಠಿಯ ಜಂಗಮ ಇಂದು ಕೂತು ಬಿಟ್ಟಿ ಕೂಳು ಕತ್ತರಿಸುವ ಮಠದ ಮುಖ್ಯಸ್ಥನಾಗಿರುವುದು ವಿಪರ್ಯಾಸಾದ ಸಂಗತಿಯಾಗಿದೆ.

ಹರಿದ ನೀರಿನ ಗುಂಟೆ ಹರಿದ ಜಂಗಮ ನೀನು

ಲಿಂಗದಲಿ ಒಂದಾದ ಅಂಗ ಬಸವಾ

ಕಪ್ಪು ಹೆಬ್ಬಂಡೆಗಳ ದಂಡೆ ಹಾಗೆ ಉಂಟು

ಸ್ಥಾವರಕ್ಕಳಿವುಂಟೆ ಹೇಳು ಬಸವಾ

ಬಸವಣ್ಣನೇನೋ ನಿಜವಾದ ಅರ್ಥದಲ್ಲಿ ಜಂಗಮನಾಗಿದ್ದ. ಆದರೆ ಕಪ್ಪು ಹೆಬ್ಬಂಡೆಗಳ ಹಾಗೆ ಇಂದಿನ ಶಿವಭಕ್ತರು ಮಾತ್ರ ಯಾವುದೆ ರೀತಿಯಲ್ಲೂ ಬಸವನ ಆದರ್ಶಗಳನ್ನು ತತ್ವಗಳನ್ನು ಅನುಷ್ಠಾನಕ್ಕೆ ತರದೆ ನಿಜವಾದ ಬಂಡೆಗಳ ಹಾಗೆ ಜಡವಾಗಿ ಹೋಗಿದ್ದಾರೆ ಎಂಬಲ್ಲಿನ ಕವಿಯ ವಿಡಂಬನಾತ್ಮಕ ವಿಷಾದ ಗಮನಾರ್ಹವಾಗಿದೆ. ಬಂಡೆಗಳ ಹಾಗೆ ಹಳೆಯ ಕಂದಾಚಾರದ ಪ್ರತೀಕಗಳಾಗಿ ಉಳಿದಿದ್ದಾರೆಯೇ ಹೊರತು ಬಸವ ಆಧುನಿಕ ವಿಚಾರಧಾರೆ ಅವರನ್ನು ಸ್ವಲ್ಪವೂ ಕಲಕಿಲ್ಲವೆಂದು ಕವಿಯ ಕಳಕಳಿಯಾಗಿದೆ. ಇಂಥ ಎಷ್ಟು ಜನ ಬಸವರು ಬಂದರೂ ಬದಲಾಗುವುದರ ಹಾಗೆ ಇರುವವರು ಬಸವನ ಆಗಮನದ ಮೊದಲು ಇಲ್ಲಿಯ ಜನರ ಆಚಾರ ವಿಚಾರಗಳು ಹೇಗೆ ಸಂಕುಚಿತವಾಗಿದ್ದುವೋ ಹಾಗೆ ತಲೆಯೆತ್ತಿ ರಾಕ್ಕಸ ನಡಿಗೆ ನಡೆಯುವವರೆ ಹೊರತು ಬಸವಣ್ಣ ಆದರ್ಶಗಳನ್ನು ಉಳಿಸಿ

ಪಾಲಿಸಿದವರಲ್ಲ. ಅವನ್ನು ಗಾಳಿಗೆ ತೂರಿದ ಇಂದಿನ ಸಮಾಜವನ್ನು ಟೀಕಿಸುವ ಮೂಲಕ ಕವಿ ಈ ಸಮಾಜದ ಆತ್ಮ ಘಾತುಕ ಸ್ಥಿತಿಗೆ ತಮ್ಮ ವಿಡಂಬನಾತ್ಮಕ ಧಿಕ್ಕಾರವನ್ನು ಹೇಳುತ್ತಾರೆ ಡಾ॥ ಸಿದ್ಧಲಿಂಗಯ್ಯನವರ ಕೆಂಪು ಸೂರ್ಯ ಕವನಗಳಲ್ಲಿ,

"ಸಾಹುಕಾರರ ಬಲೆಗೆ ಪಾರಿವಾಳಗಳಂತೆ

ಸಿಕ್ಕಿ ಸುಸ್ತಾದಂಥ ನನ್ನ ಜನರು"

ಸಿದ್ದ ಭಯಗ್ರಸ್ಥನಾಗಿದ್ದರು ಒಬ್ಬನೇ ತನ್ನ ಸಿಟ್ಟನ್ನು ಅಕ್ರೋಶವನ್ನೂ ಹೀಗೆ ಕಲ್ಲು ಎಸೆಯುವುದರ ಮೂಲಕ ವ್ಯಕ್ತ ಪಡಿಸುತ್ತಾನೆ. ಇದಕ್ಕೆ ಪೂರಕವಾಗಿ ಅವನಿಗೆ ಕೆಲವರಾದರೂ ಜೊತೆಯಾಗಿದ್ದಾರೆ ಇನ್ನಷ್ಟು ಈ ಬಂಡಾಯಕ್ಕೆ ಬಲ ಬರುತ್ತಿತ್ತು.

"ಎಲ್ಲರೂ ತಲೆಯೆತ್ತಿ ಬಲೆಯೊಡನೆ ಹಾರಿದರು

ಎದುರಾದ ಮೋಡಗಳ ಸೀಳಿಕೊಂಡು"

ದಲಿತರ ಸಂಘಟನೆಯ ಚಿತ್ರಣವನ್ನು ಒಂದು ದೃಶ್ಯದಂತೆ ಕಟ್ಟಿಕೊಡುವ ಈ ಪದ್ಯದ ಸಾಲುಗಳು ಕಲಾತ್ಮಕ ಪ್ರತಿಭಟನೆಯ ಒಂದು ಸ್ವರೂಪವಾಗಿದೆ.

ದಲಿತರು ಬರುವರು ಪದ್ಯದಲ್ಲಿ ಮತ್ತೆ ಪ್ರತಿಭಟನೆಯ ಮತ್ತೊಂದು ಪದ್ಯವನ್ನು ಕಾಣಬಹುದು

ದಲಿತರು ಬಂದರು ದಾರಿ ಬಿಡಿ

ದಲಿತರ ಕೈಗೆ ರಾಜ್ಯ ಕೊಡಿ

ಎಂಬ ಕಾವ್ಯಾತ್ಮಕವಾದ ಘೋಷಣೆಯೊಡನೆ ಆರಂಭವಾಗುವ ಈ ಕವನ

ಕೋಟಿ ಕೋಟಿ ಕನಸುಗಳೊಂದಿಗೆ

ಹತ್ತಿ ಉರಿಯುವ ಮನಸುಗಳೊಂದಿಗೆ

ಗುಡುಗು ಮಿಂಚಿನ ಘೋಷಣೆಯಲ್ಲಿ

ಭೂ ಕಂಪನ ಭಾಷೆಗಳಲ್ಲಿ

ಬಂತೋ ದಲಿತರ ಮೆರವಣಿಗೆ

ನೆಲಕೆ ಕಾಲುಗಳ ಬರವಣಿಗೆ

ಎನ್ನುತ್ತಾ ಒಟ್ಟಾಗಿ ಬರುವ ದಲಿತರು ಹೇಗೆ ಸಾಹಸಿಗಳಾಗ ಬಹುದು ಅಥವಾ ಆಗುತ್ತಾರೆ ಎಂಬ ಆಶಯವನ್ನು ವ್ಯಕ್ತ ಪಡಿಸುತ್ತಾರೆ. ಅಂದರೆ ಪ್ರತಿಭಟನೆಗಾಗಿ ಹೀಗೆ ಕಾವ್ಯದಂಥ ಕಲೆಯನ್ನು ತುಂಬಾ ಕಲಾತ್ಮಕವಾಗಿಯೇ ದುಡಿಸಿಕೊಂಡ ದಲಿತ ಬಂಡಾಯದ ಪ್ರಮುಖ ಕವಿಗಳಲ್ಲಿ ಒಬ್ಬರು ಡಾ॥ ಸಿದ್ಧಲಿಂಗಯ್ಯ.

ಚಂದ್ರಶೇಖರ ನಂಗಲಿ ಗುರುತಿಸುವಂತೆ "ಇದು ಬರಿ ಕಥೆಯಲ್ಲೋ ಅಣ್ಣ" ಕುಂ.ವೀ ಸಮಗ್ರ ಕತೆಗಳಿಗೆ ಬರೆದ ಮುನ್ನುಡಿಯಲ್ಲಿ ಸಿದ್ದರ ಮಠದ ವಕ್ರಾಣಿಯ ಮೀನುಗಳನ್ನು ಹಿಡಿದಿದ್ದಕ್ಕೆ ಏಟು ತಿನ್ನುವ ಬಾಲಕ ಸಿದ್ದನ ವರ್ಣನೆಯಲ್ಲಿ ಇಂಥ ಏಟುಗಳಿಂದಾಗಿ ಸಿದ್ದನ ತಲೆ ತುಂಬ ಕೆದರಿ ಶ್ರೀ ಶೈಲ ಮೊದಲಾದ ಪಂಚ ಪೀಠಗಳು ಕಾಣಿಸಿಕೊಂಡವು. ಪಂಚಪೀಠದ ಬುಗಟೆಗಳಿಗೆ ಅವನವ್ವ ತಾನು ಕೊಟ್ಟ ಶೈತ್ಯೋಪಚಾರ ನಡೆಸಿದಳು. ಒಟ್ಟು ಲಿಂಗಾಯುತ ಧರ್ಮ ತಲುಪಿರುವ ಗತಿಗೆ ಇದು ಉದಾಹರಣೆಯಂತಿದೆ. ಮಾನವೀಯತೆಯ ನೆಲೆಗಟ್ಟಿನ ಮೇಲೆ ಸಮಾನತೆಯ ಭೂಮಿಕೆಯ ಮೇಲೆ ವರ್ಗರಹಿತ ಜಾತಿರಹಿತ ಸಮಾಜ ನಿರ್ಮಿಸಲು ನಡೆಸಿದ ಹೋರಾಟವೆ ಶರಣರ ಚಳವಳಿ ಆದರೆ ಆ ಮೌಲ್ಯಗಳನ್ನು ಮರೆತು ತಾನೂ ಒಂದು ಮತಧರ್ಮವಾಗಿ ಮೌಢ್ಯದ ಪ್ರತಿ ರೂಪವಾಗಿ ರೂಪುಗೊಂಡ ವೀರಶೈವ ಧರ್ಮ ಇದರ ಕೇಂದ್ರಗಳಾದ ಮಠಗಳ ದೌರ್ಜನ್ಯವನ್ನು ಲೇಖಕರು ಈ ಮೂಲಕ ಅನಾವರಣಗೊಳಿಸುವ ಪ್ರಯತ್ನ ಮಾಡಿದ್ದಾರೆ.

ಕ್ರಾಂತಿ

ಕತೆಯ ಹೆಸರೇ 'ಕ್ರಾಂತಿ' ಎನ್ನುವುದೇ ಇಲ್ಲಿನ ವಿಶೇಷ. ಶಿಕ್ಷಣ ದಲಿತ ಸಮುದಾಯದಲ್ಲಿ ಉಂಟು ಮಾಡಬಹುದಾದ ಸಾಧ್ಯತೆಯನ್ನು ಈ ಕತೆ ಅನಾವರಣಗೊಳಿಸುತ್ತದೆ. ಹಾಗೆಯೇ ಸಾಮಾಜಿಕ ಅಪಮಾನಗಳು ವ್ಯಕ್ತಿಯನ್ನು ಹೇಗೆ ಕಾಡುತ್ತವೆ ಎಂಬುದರ ಮೇಲೆ ಬೆಳಕು ಚೆಲ್ಲುವ ಇಲ್ಲಿಯ ಘಟನೆಗಳು ಉಳಿದ ಕತೆಗಳಿಗಿಂತ ಭಿನ್ನ ಬಂಡಾಯದ ಸ್ವರೂಪವನ್ನು ಹೊಂದಿದ್ದು ಹಾಗೂ ಅದರ ಹಿನ್ನೆಲೆಯೂ ಇಲ್ಲಿ ಬೇರೆಯದೆ ಆಗಿದೆ. ಈ ಕತೆಯಲ್ಲಿ ಮಂಜನೇ ಮುಖ್ಯ ಪಾತ್ರ. ಗದ್ದಿ ಕಲ್ಲೇಶ್ವರನ ಗುಡಿಯ ಒಳಹೊಕ್ಕು ಗಂಟೆ ಬಡಿದು ಬರುತ್ತೇನೆಂದು ಕೆಳಗೇರಿಯ ಸಮಸ್ತರೆದುರು ಡಣಾಡಂಗುರವಾಗಿ ಹೇಳಿದ ಮಂಜ, ಕೋತಿ ಬಸವ್ವಗೆ ಮೊಮ್ಮಗನು ಹೌದು. ಕಂಟ್ಲೆದೇವೀರವ್ವಗೆ ಖಾಸಾ ಪುತ್ರನೂ ಹೌದು. ಅಲ್ಲೇ ಕುಂತಿದ್ದ ಈರಜ್ಜಿ ಅದಕ್ಕೆ ಉತ್ತರವಾಗಿ ನಮಗ್ಯಾಕ ಬೇಕಲೆ ತಮ್ಮ ನಾವು ಪತ್ರೋಣ ಇದ್ದಂಗೆ ದೇವ್ರು ಗುಡ್ಯಾಕ ಕಾಲಿಡೋದು ಅಂದ್ರೆ ಒಡಲಾಗೆ ಬೆಂಕಿ ಕಟ್ಕಂಡಗೆ ಸರಿ ಅಂತ ಪರಿಪರಿಯಾಗಿ ಹೇಳಿದರು. ಮಂಜ ಸಿನಿಮಾದ ನಾಯಕ ನಟನಂತೆ ಗಹಿಗಹಿಸಿ ನಕ್ಕ ಬಿಟ್ಟಿದ್ದನು. ಈ ಕತೆಯಲ್ಲಿ ಮಂಜ ಕೆಳವರ್ಗದವನಾದರಿಂದ ಅವನನ್ನು ದೇವಸ್ಥಾನಕ್ಕೆ ಸೇರಿಸುವುದಿಲ್ಲ. ಆ ಕಾರಣಕ್ಕಾಗಿ ಮಂಜ ಒಳಗಡೆ ಹೋಗಬೇಕೆಂದು ಕೇಳುತ್ತಾನೆ.

ದಲಿತರ ದೇವಾಲಯ ಪ್ರವೇಶ ಈ ಕತೆಯ ಮುಖ್ಯ ಉದ್ದೇಶ ಶೂದ್ರಾತಿಶೂದ್ರರೂ ದೇವಸ್ಥಾನ ಪ್ರವೇಶಿಸುವುದು ನಿಷಿದ್ಧ ಎಂಬನಿಯಮ ಪಾಲನೆ ಮಾಡಿದ ಸಾಮಾಜಿಕ ವ್ಯವಸ್ಥೆ ನಮ್ಮದು. ಬಯಲು ಆಲಯದೊಳಗೋ ಆಲಯ ಬಯಲಿನ ಕಡೆಗೋ ಎಂಬ ಕನಕದಾಸರ ಕೀರ್ತನೆ ಇಲ್ಲಿ ನೆನಪಾಗುತ್ತದೆ. ಇದನ್ನು ಅರಿಯದ ಮೂರ್ಖರು ನಿರ್ಮಿಸಿದ ವ್ಯವಸ್ಥೆಯಲ್ಲಿ ಎಲ್ಲರೂ ನೊಂದು ಬೆಂದು ಹೋಗಬೇಕಾದ ವ್ಯವಸ್ಥೆ ನಮ್ಮದು.

ಆ ಗುಡ್ಯಾಗ ಕಾಲಿಟ್ಟೆ ಅಂದ್ರೆ ಕಣ್ಣಳಕಂತಿ ಅಂತ ದೊಡ್ಮನೆ ದುರ್ಗಜ್ಜಿ ಹೇಳಿದಳು. ದನ ಕಾಯೊ ಲಸುಮ ಆ ಗುಡಿ ಪವುಳ್ಯಗ ಹೋಗಿ ಬರೋದ್ರೊಳಗಾಗಿ ನೀನು ರಕ್ತ ಕಾರಿ ಸತ್ತೋಕ್ತಿ ಎಂದು ಹೇಳುತ್ತಾನೆ. ಭೀಮನು ಸಹ ಕಳೆದ ವರ್ಷ ಮಾನವಮಿ ಅಮಾವಾಸ್ಯೆ ಎಡಬಲಕೆ ಗುಡ್ಯಾಗ ಹೋಗಿ ಪರಸಾದ ತಿಂದ ಮರುಕ್ಷಣ ತಲಾರಿ ಭೀಮಾನೂ ಕಾಣಲಿಲ್ಲ. ಹೀಗೆ ಹಳ್ಳಿಯ ಹಿರಿಯರು ಆ ಗುಡ್ಯಾಗ ಕಾಲಿಟ್ಟಿರುವ ಸಾಯುವರೆಂದು ಸೂಚನೆಯನ್ನು ಕೊಡುತ್ತಾರೆ. ಆದರೆ ಮಂಜ ಕೇಳಲಿಲ್ಲ ಅಲ್ಲಿಗೆ ಹೋಗಿ ಗಂಟೆ ಬಾರಿಸಬೇಕೆಂದು ಕೊಳ್ಳುತ್ತಾನೆ. ಮಂಜ ಒಂದು ಭಾಷಣವನ್ನು ಮಾಡುತ್ತಾನೆ. ಭಾಷಣ ಆಲಿಸಿದ ಅಪಾಪೋಲಿ ಸಿದ್ರಾಮ ನೀನು ಗಂಡಸಾಗಿದ್ರೆ ಗಂಟೆ ಬಾರಿಸಿ ಬರ್ತಿ ಎಂದು ಕ್ರಾಂತಿಕಾರಿ ಮಂಜನ ಗಂಡಸುತನವನ್ನು ಪ್ರಶ್ನಿಸುತ್ತಾನೆ.

ಸಾಮಾಜಿಕ ಅಸಮಾನತೆ ಎಂದು ಪದೆ ಪದೆ ಮಾತಾಡುವ ಮಂಜ ಮೆಟ್ರಿಕ್ ಓದುತ್ತಿದ್ದಾಗ ತನ್ನ ತಂದೆ ಯಾರು? ಎಂದು ಹೆತ್ತಾಕೆಯನ್ನು ಕೇಳಿದ್ದು ದೇವಿರವ್ವಗೆ ಅರ್ಧ ತಲೆ ನೋವನ್ನುಂಟು ಮಾಡಿ

ಬಿಟ್ಟಿತ್ತು. ಅಂಬುರುತಾಂಜನ ಡಬ್ಬಿಯನ್ನು ಆಕೆಯ ಎಲೆಅಡಿಕೆ ಚೀಲದಲ್ಲಿ ಪರಮನಂಟಾಗಿ ಇಟ್ಟುಕೊಳ್ಳುವಂತೆ ಮಾಡಿದ್ದನು. ಕಂಟ್ಲೆ ಕರಿ ಲಿಂಗಪ್ಪ ಆಕೆಯನ್ನು ವರ್ಷ ಗಟ್ಟಲೆ ಇಟ್ಟುಕೊಂಡಿದ್ದನಾದರು ಆಕೆಯ ಹತ್ತು ಕಂಬದ ಮನೆಯಲ್ಲಿ ತೊಟ್ಟಲು ಕಟ್ಟಿಸುವ ಬದಲು ತನ್ನ ಹೆಸರಿನ ಉತ್ತರಾರ್ಧವಾದ ಕಂಟ್ಲೆ ಎಂಬ ಶಬ್ದವನ್ನು ದೇವಿರವ್ವನ ಮಗ್ಗಲು ಇಟ್ಟು ತನ್ನೆರಡು ಕೈಗಳನ್ನು ಸ್ಯಾಣಡಲ್ ಸಬ್ಲು ಹಚ್ಚಿ ತೊಳೆದುಕೊಂಡು ಬಂದಿದ್ದನು. ಈ ಕತೆಯಲ್ಲಿ ಮೇಲುವರ್ಗದವರು ಕೆಳವರ್ಗದ ಹೆಣ್ಣನ್ನು ಹೇಗೆ ಶೋಷಣೆಗೆ ಒಳಪಡಿಸುತ್ತಾರೆ ಎಂಬುದನ್ನು ಕರಿಲಿಂಗಪ್ಪ ಮಾಡುವ ಕೆಲಸದಿಂದ ತಿಳಿಯಬಹುದು.

ಮಂಜನಿಗೆ ತನ್ನ ತಂದೆ ಯಾರೆಂಬುದು ತಿಳಿದಿರಲಿಲ್ಲ. ಅಂತಹ ಪರಿಸ್ಥಿತಿ ಅವನದು ಓರಗೆಯವರು ಅಣಕಿಸಿದಾಗ ತಾಯಿಯನ್ನು ಈ ಕುರಿತು ಪ್ರಶ್ನಿಸುತ್ತಾನೆ. ಜನರೇ ನಿನ್ನ ತಂದೆ ಅವನಾ, ಇವನಾ ಎಂದು ನೂರಾ ಒಂದು ಮಂದಿ ಹೆಸರು ಹೇಳಿದಾಗ ಅವನ ಪರಿಸ್ಥಿತಿ ಏನಾಗಿರಬಹುದು? ಕತೆಗಾರರೇ ಹೇಳುವಂತೆ ಅವನ ತಲೆ ಮಾರ್ಕೆಟ್ ಆಗಿತ್ತು. ಇವನಿಗಾಗುವ ಅಪಮಾನ ತಾಯಿಗಾಗುವ ಅಪಮಾನ ತಾಯಿಯನ್ನ ಬಳಸಿಕೊಂಡ ಸಮಾಜ, ಈ ಕುರಿತ ಆಲೋಚನೆಗಳ ಸರಮಾಲೆ ಇಲ್ಲಿ ಕಾಣಿಸಿಕೊಳ್ಳುತ್ತದೆ.

ದೇವಿರವ್ವಗೆ ಮಕ್ಕಳಾಗುವುದು ಎಲ್ಲಿಂದಬಂತೂ ತನ್ನ ಮುವ್ವತ್ತೆಂಟರ ಆಯಾಮದಲ್ಲಿ ಮನಿರಾಬಾದಿನ ಉಲಿಗರವ್ವಗೆ ಬನದ ಹುಣ್ಣಿಮೆಯೆಂದು ನಡೆದುಕೊಂಡು ಹೋಗಿ ಎವ್ವಾ ಎಂಗಾರ ಮಾಡಿ ನನ್ನ ಹೊಟ್ಟೆಗೊಂದು ಕೂಸ ಹಾಕಿ ಬಂಜೆ ಎಂಬ ಅಪವಾದದಿಂದ ಮುಕ್ತಳನ್ನಾಗಿ ಮಾಡವ್ವ ಎಂದು ಬೇಡಿಕೊಳ್ಳುತ್ತಾಳೆ ಹೆಣ್ಣಾದ್ರು ನಿಂಗೆ ಬುಡ್ತಿನೀ ಗಂಡುಟ್ಟಿದ್ರು ನಿಂಗೆ ಬುಡ್ತೀನಿ ಎಂದು ಬೇಡಿಕೊಳ್ಳುತ್ತಾಳೆ. ಹೀಗೆ ಹುಟ್ಟಿದ ಮಗನೆ ಮಂಜ. ಅವನು ಹುಟ್ಟಿ ಆರು ತಿಂಗಳಿಗೆ ಬಸವ್ವ ತೀರಿಕೊಂಡಳು. ಉಲಿಗೆವ್ವನ ಕೃಪೆಯಿಂದ ಹುಟ್ಟಿದ ಮಗುವೆಂದು ಅವನನ್ನು ಉಲಿಗೆಪ್ಪ ಎಂದು ಹೆಸರಿಟ್ಟರು ಆರನೇ ವರ್ಷದ ವೇಳೆಗೆ ಸಾಲೆ ಮಾಸ್ತರ ಕುಂಟೆ ಪರಮೇಶ್ವರಯ್ಯನ ಕೃಪಾಶೀರ್ವಾದದಿಂದ ಮಂಜ ಎಂದು ಬದಲಾಯಿತು ಅಯ್ನೋರೆ ಕೂಸನ್ನು ನಿಮ್ಮಡ್ಲೀಗೆ ಆಕೆನಿ. ನೀವು ಆಲಲ್ಲಾದ್ರು ಆಕಿ ನೀರಲ್ಲಾದ್ರೂ ಆಕ್ರಿ ಎಂದು ತೆಪ್ಪಗಿದ್ದು ಬಿಟ್ಟಳು. ಮಂಜ ತೊಟ್ಟಿಲು ಮರದ ಸಾಲೆಯಲ್ಲಿ ಅ ಆ... ಕಲಿತು ಗಬ್ಬೆ ಮಠದ ಸಾಲೆಯಲ್ಲಿ ಎ ಬಿ ಸಿ ಡಿ...ಕಲಿತು ಹಾಯಸ್ಕೂಲಿನಲ್ಲಿ ಜಿಕ್ಕೋತ ಜಿಕ್ಕೋತ ಪಾಸಾಗುತ್ತಿದ್ದ. ಟೈಮಿನಲ್ಲಿ ಬಾಲಗ್ರಹದ ಕಾಟಸುರುವಾಯಿತು. ಬಡ್ಯೆಗಣ್ಣು ಜಯಪ್ಪನಿಂದ ಹಿಡಿದು ಓಸಿ ಗುರುವಯ್ಯನವರೆಗೆ ಎಲ್ರು ಏನ್ಲೇ ಮಂಜು. ನಿಮ್ಮಪ್ಪ ಯಾರ್ಲೆ ಎಂದು ನಗೆಯಾಡುವವರೆ ಹೆಚ್ಚಾಗಿದ್ದರು. ಹೀಗೆ ಮಂಜ ತನ್ನ ತಾಯಿಯ ಹತ್ತಿರ ಹೋಗಿ ನಮ್ಮಪ್ಪ ಯಾರಬೆ? ಎಂದು ಕೇಳತೊಡಗಿದನು. ಆಗ ದೇವಿರವ್ವ ಯಾರೆಸ್ರು ಹೇಳೋದಪ್ಪ ಸಿವ್ನ ಎಂದು ತಲೆಗೆ ಕೈ ಹೊತ್ತು ದೇವಿರವ್ವ ನಿಟ್ಟುಸಿರು ಬಿಟ್ಟಳು. ಹೀಗೆ ಮಂಜ ತನ್ನ ತಾಯಿಯನ್ನು ಪ್ರಶ್ನೆ ಕೇಳಿದಾಗಲೆ ದೇವಿರವ್ವನಿಗೆ ತಲೆನೋವು ಬಂದಾತ್ತಾಯಿತ್ತು. ಮಗ ಮಂಜ ಈ ಅವಮಾನ ತಾಳಲಾರದೆ ಊರನ್ನೇ ಬಿಟ್ಟು ಹೋಗುತ್ತಾನೆ. ದೇವದಾಸಿ ಪದ್ದತಿ ಬಳ್ಳಾರಿ

ಕೊಟೂಟರು ಪ್ರಾಂತ್ಯದಲ್ಲಿ ಸಾಮಾನ್ಯವಾಗಿರುವ ಪದ್ಧತಿ. ಇದರ ಕ್ರೌರ್ಯಕ್ಕೆ ಬಲಿಯಾದವರು ಸಾವಿರಾರು ಮಂದಿ ಇದರಿಂದ ಅವರು ಅವರ ಸಂತತಿ ಅನುಭವಿಸುವ ಅಪಮಾನ ಅಗಾಧವಾದದ್ದು ಈ ಸ್ಥಿತಿಗೆ ಇವರನ್ನು ನೂಕಿದ ಸಮಾಜ ಮೇಲ್ವರ್ಗದ/ಜಾತಿಯ ಮರ್ಯಾದಸ್ಥ ಸಮಾಜ ಈ ಎಲ್ಲಾ ಸಂಗತಿಗಳ ಮೇಲೆ ಈ ಕತೆ ಬೆಳಕು ಚೆಲ್ಲುವಂತೆ ಲೇಖಕರು ಮಾಡುತ್ತಾರೆ.

ಮಗನ ಅಗಲಿಕೆ ತಾಯಿಗೆ ಎಂತಹ ದುಃಖ ಉಂಟುಮಾಡಿರಬಹುದು? ಈ ಚಿಂತೆಯಲ್ಲೇ ಇವಳು ಕಾಲ ಕಳೆಯುತ್ತಿರಲು ಮಗ ಹೊಸಪೇಟೆಯ ಹೋಟೆಲ್‌ನಲ್ಲಿ ಕೆಲಸ ಮಾಡುವ ಸುದ್ದಿ ತಿಳಿಯಿತು. ಆಗ ದೇವಿರವ್ವನಿಗೆ ಬೊಗಸೆಗಣ್ಣುಗಳಿಂದ ನೀರು ಹರಿಯಿತು. ಹೊಸಪೇಟೆ ಎಂಬೊಂದು ದೇಶದಲ್ಲಿರುವ ಉಡುಪಿ ಊಟ್ಲಲ್ಲಿ ಮಂಜ ಸಪ್ಲೈ ಮಾಡುತ್ತಿರುವುದನ್ನು ತಾನು ಕಂಡಿದ್ದಾಗಿ ಒಬ್ಬ ಹೇಳಿದರೆ ಇನ್ನೊಬ್ಬ ಮಂಜ ದಾವಣಗೆರೆಯ ದರ್ಜಿ ಅಂಗಡಿಯಲ್ಲಿರುವುದಾಗಿ ಹೇಳಿದ. ಹೀಗೆ ಹಲವಾರು ಮಂದಿ ತಮ್ಮ ಕಣ್ಣುಗಳಿಂದ ದೇವಿರವ್ವನ ಮೈಯ್ಯ ರಕ್ತವನ್ನು ಕುಡಿದರು. ಹೀಗೆ ಎಲ್ಲರು ಒಂದೊಂದು ರೀತಿಯಲ್ಲಿ ದೇವಿರವ್ವನಿಗೆ ಹೇಳಿದಾಗಲ್ಲೆಲ್ಲ ದುಃಖ ಉಕ್ಕಿ ಹರಿಯುತ್ತಿತ್ತು. ಒಂದು ದಿನ ಕುರುಚಲು ಗಡ್ಡ ಮಿಸೆ ಬಿಟ್ಟಿದ್ದ ದೊಗಳೆ ಪಾಯಿಜಾಮ ಜುಬ್ಬಾ ತೊಟ್ಟಿದ್ದ ಫಳ ಫಳ ಹೊಳೆಯುವ ಕಣ್ಣುಗಳಿಗೆ ಅಡ್ಡವಾಗಿ ಚಾಳೀಸು ಇಟ್ಟುಕೊಂಡಿದ್ದ ಒಬ್ಬ ವ್ಯಕ್ತಿ ಬಂದವನೆ ಅವ್ವಾ ಅಂದ. ದೇವಿರವ್ವ ಅನುಮಾನದಿಂದ ಬಾಯಿ ತೆರೆದಾಗ ನಾನು ನಿನ್ಮಗ ಮಂಜ ಅಂದು ಬಿಟ್ಟ. ಮಗನ ಕೈಯಿಂದ ಒಂಚೂರು ಬ್ರೆಡ್ ತಿಂದದ್ದೆ ಮುದುಕಿ ಕೆಳಗಣ ಮೇಲ್ಗಣ್ಣು ಮೂಡಿತು. ಮಗನ ಕೈಯಿಂದ ಎರಡು ಚಮಚ ಗಂಗಾಜಲ ಕುಡಿದು ಕೊನೆಯುಸಿರೆಳೆಯಿತು. ಇಂಥ ಹಿನ್ನೆಲೆ ಇರುವ ಮಂಜ ಅಮವಾಸೆಯಂದು ಗದ್ದಿ ಕಲ್ಲೇಶ್ವರನ ಗುಡಿಯ ಒಳಕ್ಕೆ ಹೋಗಿ ಗಂಟೆಯನ್ನು ಹೊಡೆದು ಬರುವನೆಂದು ಕೇಳಿ ಕೆಳಗೇರಿಯ ಬಹಳಷ್ಟು ಮಂದಿ ಗಾಬರಿಗೊಂಡರು.

ಗದ್ದಿ ಕಲ್ಲೇಶ್ವರನೆಂದರೆ ಬೆಂಕಿಯಂಥ ದೇವರು ಮೈ ತೊಳೆಯದೆ ಅಂಗಳ ತುಳಿಯದ ಲಿಂಗಾಯ್ತರು ಭಂಗ ಪಡುವರು ಎಂದ ಮೇಲೆ ತಿಲತೂಕದ ಹೊಲೆಯನೊಬ್ಬ ಗುಡಿ ಒಳಕ್ಕೆ ಹೋಗುವುದೆಂದರೇನು? ಗಂಟೆ ಬಡಿಯುವುದೆಂದರೇನು? ಇಡೀ ಕೇರಿಜನ ತಮ್ಮ ಕೇರಿಗೆಂಥದೋ ಗತಿ ಕಾದ್ತದೆ ಅಂತ ಅಂಗೈಯಲ್ಲಿ ಜೀವ ಹಿಡಿದುಕೊಂಡಿದ್ದರು ಮಂಜ ಬುದ್ಧಿವಂತಿಕೆಯಿಂದ ಅವ್ವನನ್ನು ತನ್ನ ಅಜ್ಜಿಯನ್ನೂ ತನ್ನ ಮುತ್ತಜ್ಜಿಯನ್ನು ತನ್ನ ಗಿರಿಮುತ್ತಜ್ಜಿಯನ್ನು ಸೂಳೆಯನ್ನಾಗಿಸಿದ ಊರ ಜನರಿಗೆಲ್ಲಾ ಧಿಕ್ಕಾರವನ್ನು ಹಾಕಿದನು. ಇವನಿಗೆ ಯಾರ ಭಯವೂ ಇರಲಿಲ್ಲ. ಶೂದ್ರತಿಶೂದ್ರನಾದ ಅವನು ಮಟ ಮಟ ಮಧ್ಯಾಹ್ನ ಚಾವಡಿ ಕಟ್ಟೆಯ ಮೇಲೆ ಕೂತು ಎಲ್ಲಾ ಮನುಷ್ಯರಿಗೂ ಪ್ರೀತಿಯ ನೈವೇದ್ಯವನ್ನು ಸಮಾನವಾಗಿ ಹಂಚಿದ ದೇವರಿಗೆ ನನ್ನ ಧಿಕ್ಕಾರ ಎಂದು ಕೂಗಿಕೊಂಡನು.

ಕ್ರಾಂತಿಕಾರಿ ಮಂಜ ಇಷ್ಟಕ್ಕೆಲ್ಲ ಅಂಜುವವನಾಗಿರಲಿಲ್ಲ. ದೇವರು ದಿಂಡಿರುಗಳನ್ನು ಮುಂದಿಟ್ಟು ಭಯ ಸೃಷ್ಟಿಸುವಂಥ ಅಸಮಾನತೆಯನ್ನು ಸೃಷ್ಟಿಸುವಂತ ವ್ಯವಸ್ಥೆಯ ವಿರುದ್ಧ ಯಾವ ರೀತಿ ಹೋರಾಡಬೇಕೆಂಬುದನ್ನು ಆರು ಪುಟದ ಒಂದು ಲೇಖನದಲ್ಲಿ ವಿವರವಾಗಿ ಬರೆದು "ಕ್ರಾಂತಿ

ಜ್ಯೋತಿ" ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದನು. ಆ ಲೇಖನವನ್ನು ಓದಿದ ಸಮಸ್ತ ಬುದ್ಧಿ ಜೀವಿಗಳು ಭಲಾಭಲಾ ಎಂದು ಪ್ರಶಂಸಿದರು. ತನ್ನ ಲೇಖನವಿದ್ದ ಸಂಚಿಕೆ ಹಿಡಿದುಕೊಂಡು ತಾಲ್ಲೂಕು ಮಟ್ಟದ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳನ್ನು ಕಂಡು ಅಸ್ಪೃಶ್ಯತೆಯ ವಿರುದ್ದ ಹೋರಾಡುತ್ತಿರುವ ನೀವೆಲ್ಲ ಬೆಂಬಲ ಕೊಡಬೇಕೆಂದು ಕೇಳಿಕೊಂಡನು. ಜಿಲ್ಲಾಧಿಕಾರಿಗಳು ಮಂಜ ನುಡಿದ ಮಾತುಗಳನ್ನು ಆಲಿಸಿ ತಲೆದೂಗುತ್ತ ನಿನ್ನಂಥ ಯುವಕರು ಜಿಲ್ಲೆಗೊಬ್ಬರಿದ್ದರೆ ಸಾಕು ಇಡೀ ದೇಶವನ್ನೆ ರಾಮರಾಜ್ಯವನ್ನಾಗಿ ಮಾಡಬಹುದೆಂದು ನುಡಿದರು. ಈ ಕತೆಯಲ್ಲಿ ಮಂಜ ತನ್ನ ಹೋರಾಟದಿಂದ ಕೆಳವರ್ಗದವರನ್ನು ಶೋಷಣೆಯಿಂದ ಮೇಲೆತ್ತುವ ಪ್ರಯತ್ನ ಮಾಡುತ್ತಾನೆ. ಮಂಜ ಎಸ್ಪೀ ಸಾಹೇಬರ ಬಳಿಗೆ ಹೋಗಿ ಮೇಲ್ಜಾತಿಯವರ ಸ್ವತ್ತಾಗಿರುವ ಗುಡಿ ಪ್ರವೇಶಿಸಲಿರುವ ತನ್ನಂಥ ಅಸ್ಪೃಶ್ಯರ ಮೇಲೆ ಹಲ್ಲೆ ನಡೆಸಬಹುದೆಂದು ತನಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಂಡನು. ಸಲ್ಲದ ಭಯ ಹುಟ್ಟಿಸಿದ ಮೇಲ್ಜಾತಿಯವರಿಗೆ ಭಯ ಹುಟ್ಟಿಸುತ್ತಾನೆ. ಮೌಢ್ಯದ ಕೂಪದಿಂದ ತನ್ನವರನ್ನು ಮೇಲೆತ್ತುವ ಪ್ರಯತ್ನ ಮಾಡುತ್ತಾನೆ. ದೇವಸ್ಥಾನ ಪ್ರವೇಶಿಸಿದರೆ ದಲಿತರಿಗೆ ಕಣ್ಣು ಹೋಗುತ್ತದೆ ಪ್ರಾಣ ಹೋಗುತ್ತದೆ ಎಂಬ ಭಯವನ್ನು ಕೆಳಜಾತಿಯವರಲ್ಲಿ ತುಂಬಿ ದೂರವಿರಿಸಿ ಅವರನ್ನು ಕೇವಲ ತಮ್ಮ ಸೇವೆಗೆ ಬಳಸಿಕೊಂಡ ವ್ಯವಸ್ಥೆಯನ್ನು ಇಲ್ಲಿ ಶಿಕ್ಷಣ ಪಡೆದ ಮಂಜ ಪ್ರಶ್ನಿಸುತ್ತಾನೆ. ಕುವೆಂಪುರವರ ವಿಚಾರಕ್ರಾಂತಿಕೆ ಅಹ್ವಾನ ಲೇಖನದಲ್ಲಿ ಬರುವ ದಲಿತರ ದೇವಾಲಯ ಪ್ರವೇಶ ಕುರಿತ ವಿಚಾರ ಇಲ್ಲಿ ನೆನಪಾಗುತ್ತದೆ.

ಏಳು ತಿಂಗಳಲ್ಲಿಯೇ ಗರ್ಭಪಾತಕ್ಕೆ ಒಳಗಾಗಿದ್ದ ಹನುಮವ್ವಗೆ ಬಲಗೈಯ್ಯಾಗಿ ನಿಂತು ಗೌಡ್ರು ಶಿವ ಬಸಪ್ಪನ ವಿರುದ್ದ ಖಟ್ಲೆ ಹಾಕಿಸಿ ಬರುವಾಗ ಬಸ್ಸಿನಲ್ಲಿ ಕೆಲವರು ಹಲ್ಲೆ ನಡೆಸಲಿದ್ದರು. ನೀವು ಹಲ್ಲೆ ನಡೆಸಿದ್ದೆ ಆದರೆ ಭೂಮಿಗೆ ತನ್ನ ದೇಹದಿಂದ ಉದುರುವ ರಕ್ತದಿಂದ ಸಾವಿರ ಸಾವಿರ ಮಂದಿ ತನ್ನಂಥ ಕ್ರಾಂತಿಕಾರಿ ಯುವಕರು ಉದಯಿಸಿ ಬರುತ್ತಾರೆಂಬುದನ್ನು ಹೇಳುತ್ತಿದ್ದನು. ಇಂಥ ಎಷ್ಟೇ ಅಪಮಾನಗಳನ್ನು ಅಪಾಯಗಳನ್ನು ಸೈದ್ಧಾಂತಿಕವಾಗಿ ಸಹಿಸಿಕೊಳ್ಳಲು ನಿಶ್ಚಯ ಮಾಡಿದ ಮಂಜು ಅವತ್ತು ರಾತ್ರಿ ಬಿದ್ದ ಕನಸಿನಲ್ಲಿ ತಾನು ರಷ್ಯಾಕ್ಕೆ ಹೋಗಿ ಕಾರ್ಲ್ ಮಾರ್ಕ್ಸ್ ಸಮಾಧಿಯ ಮೇಲೆ ಪುಷ್ಪಗುಚ್ಛವಿರಿಸಿದನು. ಆಗ ರಷ್ಯಾದ ನಾಯಕರು "ಕಾಮ್ರೇಡ್ ಮಂಜು" ಎಂದು ಕೂಗಿಕೊಂಡರು. ಮಾರ್ಕ್ಸ್‌ವಾದ ವಿದ್ಯಾವಂತ ದಲಿತ ಸಮುದಾಯದಲ್ಲಿ ತರುವ ಮಾರ್ಪಾಡುಗಳನ್ನು, ಅಗತ್ಯಗಳನ್ನು ಲೇಖಕರು ಇಲ್ಲಿ ಬಳಸಿಕೊಂಡಿದ್ದಾರೆ.

ಕೆಳಗೇರಿಯ ಬಹುಪಾಲು ಮಂದಿ ಮಂಜ ಗುಡಿಯೊಳಗೆ ಹೋಗುವುದನ್ನು ಆತ ಬಡಿಯುವ ಗಂಟೆನಾದವನ್ನು ಕೇಳುವುದಕ್ಕೆ ಉತ್ಸುಕರಾಗಿದ್ದರು. ಅಂದು ಅಮವಾಸ್ಯೆಯಾದ್ದರಿಂದ ಸುತ್ತ ಮುತ್ತಲ ಹಳ್ಳಿಗಳಿಂದ ಭಕ್ತಾದಿಗಳು ಸಾವಿರ ಸಂಖ್ಯೆಯಲ್ಲಿ ಆಗಮಿಸಿದ್ದರು. ಎಲ್ಲರ ನಾಲಗೆ ಮೇಲೆ ದೇವರ ನಾಮಸ್ಮರಣೆ ನಲಿಯುವ ಬದಲು ಮಂಜುವಿನ ಹೆಸರು ತಾಂಡವ ನೃತ್ಯ ಮಾಡತೊಡಗಿತ್ತು. ಮಂಜು ಗುಡಿಯ ಕಡೆ ಬರುತ್ತಿದ್ದಂತೆ ಎಲ್ಲರೂ ಅವನನ್ನು ತಡೆದರು. ಆದರೂ ಕೇರೆ ಮಾಡದೆ ಗುಡಿಯ ಮುಂದೆ ನಿಂತು ಎಲ್ಲರ ಕಡೆಗೊಮ್ಮೆ ಸಿಂಹಾವಲೋಕ ಮಾಡಿದನು. ಜನರ ನಡುವಿನಿಂದ ತೂರಿಬಂದ

ಕೆಲವು ಕಲ್ಲುಗಳು ಹಣೆಗೆ ತಾಗಿ ರಕ್ತ ಹನಿಸಿದವು. ಯಾವುದನ್ನು ಕೇರೆ ಮಾಡದೆ ಜನರ ಕಡೆ ಬೆನ್ನು ಮಾಡಿದನು. ಒಂದೊಂದೆ ಹೆಜ್ಜೆ ಇಡುತ್ತ ಗುಡಿಯೊಳಕ್ಕೆ ನಡೆದ ತುಪ್ಪದ ನೀಲಾಂಜನಗಳು ಬೆಳಕಿನಲ್ಲಿ ಕಾಣಿಸಿದ. ಇಲ್ಲಿ ಭಕ್ತಿಗೆ ಬದಲಾಗಿ ಮಂಜನಲ್ಲಿ ವೈಚಾರಿಕ ಆಲೋಚನೆಗಳು ಮೂಡಿದವು. ದೇವರ ಮುಖ ತನ್ನ ತಾಯಿಯ ಯಾವುದೋ ಒಬ್ಬ ಮಿಂಡನದಾಗಿರ ಬೇಕೆಂದು ಊಹಿಸಿದ. ತಾನು ನೋಡಿರದಿದ್ದ ಗುಡಿಯ ಒಳಭಾಗ ಪ್ರತಿಕಂಭದ ಕುಸುರಿಗೆಲಸದಲ್ಲಿ ತನ್ನ ಶೂದ್ರರ ಬೆವರು ರಕ್ತ ಇದೆ ಅಂತ ಅನ್ನಿಸಿತು. ಗುಡಿಯ ತುಂಬ ಭೀಕರವಾಗಿ ನೆಲಸಿದ್ದ ಮೌನದ ಬುಡಕ್ಕೆ ಕೊಡಲಿ ಏಟು ಹಾಕಲೆಂದು ಗಂಟೆ ಬಾರಿಸತೊಡಗಿದನು. ರಕ್ತ ಕಾರಲಿಲ್ಲ. ಮಂಜನ ದೇಹ ನೂರು ಚೂರಾಗಿ ಸಿಡಿಯಲೂ ಇಲ್ಲ ಕುರುಡಾಗಲೂ ಇಲ್ಲ. ಈ ಕತೆಯಲ್ಲಿ ಅಸ್ಪೃಶ್ಯರು ಗುಡಿಯೊಳಗೆ ಪ್ರವೇಶಿಸಿದರೆ ಮೈಲಿಗೆ ಆಗುತ್ತದೆಂದು ರಕ್ತ ಕಾರಿ ಸಾಯುತ್ತಾರೆಂದು ಎದುರಿಸಿದ್ದರೂ ಆದರೆ ಕ್ರಾಂತಿ ಕಾರಿ ಮಂಜ ಗುಡಿಯೊಳಗೆ ಪ್ರವೇಶಿಸಿ ಗಂಟೆ ಬಾರಿಸಿದರೂ ಯಾವುದೇ ತೊಂದರೆ ಕಂಡು ಬಂದಿಲ್ಲ ಎಂದು ತಿಳಿಯುತ್ತಾನೆ. ಇಲ್ಲಿ ಕೆಳವರ್ಗದವರನ್ನು ಅತ್ಯಂತ ಹೀನಾಯವಾಗಿ ಭಯಪಡಿಸಿ ನಡೆಸಿಕೊಂಡಿದ್ದನು ಕಾಣುತ್ತೇವೆ. ತನ್ನ ತಾಯಿಯನ್ನು ಶೋಷಿಸಿದ ವ್ಯವಸ್ಥೆ ಪೂಜಿಸಿದ ದೇವರು ಆ ವಂಚಕರಂತೆಯೇ ಕಾಣುತ್ತಾನೆ. ದೇವಾಲಯದ ಪ್ರತಿಭಾಗವೂ ತಮ್ಮಂತಹವರ ಶ್ರಮದ ಪ್ರತೀಕ ಎಂದು ಭಾವಿಸುತ್ತಾನೆ. ಈ ಹಿನ್ನೆಲೆಯಿಂದ ನಾವು ಭಾರತದ ದೇವರು ದೇವಾಲಯಗಳನ್ನು ಗಮನಿಸಬೇಕಾದ ಸೂಕ್ಷ್ಮವನ್ನೂ ಕುಂ.ವೀ ತಿಳಿಸುತ್ತಾರೆ. ಅವರ ಜನಪರ ದಲಿತಪರ ವೈಚಾರಿಕತೆ ಇಲ್ಲಿ ಸ್ಪಷ್ಟವಾಗುತ್ತದೆ.

ಜನರ ಮೂಢ ನಂಬಿಕೆಯ ಬೇರಿಗೆ ಬಿಸಿನೀರು ಕಾಯಿಸಿದೆನಲ್ಲ ಎಂಬ ಅಪರಿಮಿತ ಸಂತೋಷದ ಭಾರದಿಂದಾಗಿ ಮಂಜನ ಕಣ್ಣಲ್ಲಿ ಆನಂದ ಭಾಷ್ಪ ಸುರಿಯ ತೊಡಗಿತ್ತು. ನಾಲ್ಕು ಜನ ಮಂಜನ ಮನೆಗೆ ನುಗ್ಗಿ ಅವನ ಕಣ್ಣಗಳಿಗೆ ಆ್ಯಸಿಡ್ ಸುರಿದರು. ಇದರಿಂದ ಮಂಜನ ಕಣ್ಣುಗಳನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದನು. ಇದರಿಂದ ಎಲ್ಲರೂ ಮಂಜನು ದೇವರ ಗಂಟೆ ಬಾರಿಸಿದ್ದರಿಂದ ಕಣ್ಣುಗಳನ್ನು ಕಳೆದುಕೊಂಡನು ಎಂದು ಊರು ತುಂಬ ಮಾತುಗಳು ಸುಂಟರಗಾಳಿಯಂತೆ ಎದ್ದು ಬಿಟ್ಟಿತು. ಹಗಲಿನ ಅಂಧಕಾರದ ನಡುವೆ ಕೋಲಿನ ಸಹಾಯದಿಂದ ಅಡ್ಡಾಡಿ ಇದು ದೇವರು ಮಾಡಿದ ಕೆಲಸವಲ್ಲ ಯಾರೋ ಕ್ರೂರಿಗಳು ರಾತ್ರಿ ನನ್ನ ಕಣ್ಣುಲ್ಲಿ ಆ್ಯಸಿಡ್ ಸುರಿದರು ಎಂದು ಎಷ್ಟು ಹೇಳಿದರು ಜನರು ನಂಬುವುದಿಲ್ಲ. ಜನರು ಹ್ಹ ಹ್ಹ ಅಂತ ನಕ್ಕು ಬಿಟ್ಟರು. ಇಷ್ಟು ಆದರೂ ದೇವಿರವ್ವ ಮಗನ ಸೊಕ್ಕು ಇನ್ನೂ ಅಡಗಲಿಲ್ಲ ಎಂದು ನುಡಿದರು. ಇಲ್ಲಿ ಕಣ್ಣು ಕಳೆದದ್ದು ದೇವರಲ್ಲ, ಜನ. ಆದರೆ ಹೇಳುತ್ತಿರುವುದು ದೇವರ ಹೆಸರಿನಲ್ಲಿ ಸಾಮಾಜಿಕ ಕ್ರೌರ್ಯದ ಪರಮಾವಧಿಯನ್ನು ಇಲ್ಲಿ ಕಾಣುತ್ತೇವೆ. ಮುಗ್ಧ ಜನತೆಯನ್ನು ದಾರಿ ತಪ್ಪಿಸುವ ವ್ಯವಸ್ಥಿತ ಪ್ರಯತ್ನವಿದು.

ಕಣ್ಣು ಕಳೆದವರ ಬಗ್ಗೆ ದೂರು ಕೊಡಲೆಂದು ಹೋದ ಕ್ರಾಂತಿ ಕಾರಿಗೆ ಜಿಲ್ಲಾಧಿಕಾರಿಗಳು ಎಸ್ಪಿ ಸಾಹೇಬರು ಜಂಟಿಯಾಗಿ ಇಷ್ಟು ಹೇಳಿದ್ದರು. ನೋಡಪ್ಪ ನೀನಿನ್ನು ತರುಣ ತಲೆ ಗಟ್ಟಿಯಿದೆ ಅಂತ ಗೋಡೆಗೆ ಹಾಯಬಾರದು. ದೇವರ ಮಹಿಮೆ ಅಪಾರವಾದದ್ದು ಎಂಬುದಕ್ಕೆ ಕಣ್ಣು ಕಳೆದು

ಕೊಂಡಿರೋ ನೀನೆ ಪ್ರತ್ಯಕ್ಷ ಪ್ರಮಾಣ ನಾಳೆ ದಿನ ನಾವಿಬ್ಬರು ಕೊಟ್ಟೂರಿಗೆ ಹೋಗಿ ದೇವರ ದರ್ಶನ ಪಡೆದು ಜನ್ಮ ಸಾರ್ಥಕ ಮಾಡಿಕೊಳ್ಳುವೆವು ಎಂದು ನುಡಿದರು. ಕ್ರಾಂತಿಯ ಆವೇಶವನ್ನು ತಣ್ಣಗಾಗಿಸುವ ಅಧಿಕಾರಿ ವರ್ಗಕ್ಕೆ ಇವರು ಸಾಕ್ಷಿಯಾಗುತ್ತಾರೆ. ಈ ಕತೆಯಲ್ಲಿ ಮನುಷ್ಯರು ಮೂಢನಂಬಿಕೆಗೆ ಹೆಚ್ಚು ಒತ್ತುಕೊಡುವುದನ್ನು ಕಾಣುತ್ತೇವೆ. ಜೊತೆಗೆ ಮೇಲ್ ವರ್ಗದ ಕೆಳವರ್ಗದ ಜನರನ್ನು ಅದರಲ್ಲೂ ಮಹಿಳೆಯರನ್ನು ಯಾವರೀತಿ ಶೋಷಣೆಗೆ ಒಳಪಡಿಸಿದ್ದರು ಎಂಬುದನ್ನು ಈ ಕತೆಯಲ್ಲಿ ದೇವಿರವ್ವನ ಪಾತ್ರದಲ್ಲಿ ಕಾಣಬಹುದಾಗಿದೆ. ಇದರಿಂದ ಮಂಜು ಕ್ರಾಂತಿಕಾರಿ ಯಾಗುವುದನ್ನು ನೋಡಬಹುದು. ದೇವರ ದರ್ಶನ ಪಡೆಯಲು ಮೇಲ್‌ವರ್ಗದವರಿಂದ ಮಾತ್ರ ಅಂದುಕೊಂಡಿದ್ದರು. ಆದರೆ ಕ್ರಾಂತಿಕಾರಿ ಮಂಜು ಅಸ್ಪೃಶ್ಯರು ಸಹ ದೇವರ ದರ್ಶನ ಮಾಡಬಹುದೆಂದು ಹೇಳುತ್ತಾನೆ. ದೇವರ ಗರ್ಭಗುಡಿಯಲ್ಲಿ ಅಸ್ಪೃಶ್ಯರ ಒಬ್ಬೊಬ್ಬರ ರಕ್ತದ ಹನಿಯು ಇರುವುದನ್ನು ಕಾಣುತ್ತೇವೆ. ಆದರೂ ಹೆಚ್ಚು ಮೂಢನಂಬಿಕೆಗೆ ಬಲಿಯಾಗಿರುವುದನ್ನು ಕಾಣುತ್ತೇವೆ. ಶಿಕ್ಷಣ ಅರಿವಿಗೆ ಕಾರಣವಾಗುತ್ತದೆ. ಸುತ್ತಣ ಜಾಗದಲ್ಲಿನ ಆಗು ಹೋಗುಗಳನ್ನು ಹಾಗೆಯೇ ತನ್ನ ವೈಯಕ್ತಿಕ ಬದುಕಿನ ವಿಶ್ಲೇಷಣೆಯನ್ನೂ ಮಾಡಿಕೊಳ್ಳುವಂತೆ ನೊಡುತ್ತದೆ. ಯಾವುದನ್ನು ಇದುವರೆಗೂ ದೈವ ಪ್ರೇರಿತ ಎಂದು ನಂಬಿದ್ದಾರೋ ಅದನ್ನು ಪ್ರಶ್ನಿಸುವ ಮನೋಭಾವನೆಯನ್ನು ಹುಟ್ಟುಹಾಕುತ್ತದೆ. ಇಲ್ಲಿ ಒಂದಿಷ್ಟು ಶಿಕ್ಷಣ ಪಡೆದ ಮಂಜ ಈ ಕಾರಣದಿಂದಾಗಿಯೇ ಆಸ್ಫೋಟಿಸುವುದಲ್ಲದೆ ಸಂಪ್ರದಾಯದ ವಿರುದ್ಧ ಸಿಡಿದು ನಿಲ್ಲುತ್ತಾನೆ. ಉಳಿದ ಕತೆಗಳಲ್ಲಿನ ಪ್ರತಿಭಟನೆಗೆ ಹೋಲಿಸಿದರೆ ಇಲ್ಲಿಯ ಈ ಪ್ರತಿಭಟನೆಯ ಸ್ವರೂಪ ಬೇರೆಯದೇ ಅಗಿದೆ. "ಒಕ್ಕಲಿಗರು, ಲಿಂಗಾಯತರು ದಲಿತರನ್ನು ಶೋಷಣೆ ಮಾಡುತ್ತಾ ಇರುವಾಗ ಇದರೊಟ್ಟಿಗೆ ಸಾಮರಸ್ಯ ಹೇಗೆ ಸಾದ್ಯ? ಇಲ್ಲಿ ಮೇಲ್ ವರ್ಗದವರು ದಲಿತರನ್ನು ಬೇರೆ ಬೇರೆ ಸ್ತರದಲ್ಲಿ ಶೋಷಿಸುವುದನ್ನು ಕಾಣುತ್ತೇವೆ. ಇಲ್ಲಿ ಶೋಷಣೆಯನ್ನು ಎರಡು ರೀತಿಯಲ್ಲಿ ಕಾಣುತ್ತೇವೆ. ಒಂದು ಪ್ರತ್ಯಕ್ಷ ತೆರಿಗೆ. ಎರಡನೆಯದು ಪರೋಕ್ಷ ತೆರಿಗೆ ಎಂದು ಹೇಳಬಹುದು. ಇಲ್ಲಿ ಬ್ರಾಹ್ಮಣರು ಶೂದ್ರರು ದಲಿತರು ಎಂದು ವಿಂಗಡಿಸಿ ಬರೆದರೆ ಬುದ್ದಿ ಹೃದಯ ಹೊಟ್ಟೆಯಂತೆ ಒರಟಾಗಿರುವ ಸಂಬಂಧವನ್ನು ಕಾಣುತ್ತೇವೆ. ಇದರೊಂದಿಗೆ ದಲಿತರಿಗೆ ಶಿಕ್ಷಣದ ಅಗತ್ಯವೂ ಇದೆ. ಈ ಕತೆಯಲ್ಲಿ ಮಂಜ ಹತ್ತನೆ ತರಗತಿ ಓದಿದ್ದರಿಂದ ಮೇಲ್ಜಾತಿಯವರ ವಿರುದ್ಧ ಹೋರಾಟ ಮಾಡಲು ಮುಂದಾಗುತ್ತಾನೆ. ಅಂದರೆ ದೇವದಾಸಿ ಪದ್ಧತಿಯಿಂದ ಹೆಣ್ಣು ಮಕ್ಕಳು ಮುಕ್ತಿ ಪಡೆಯಬೇಕೆಂದು ಜೊತೆಗೆ ದೇವಸ್ಥಾನದಲ್ಲಿ ದಲಿತರಿಗೆ ಪ್ರವೇಶ ಸಿಗಬೇಕೆಂದು ಹೋರಾಟ ಮಾಡುತ್ತಾನೆ. ಆದರೆ ಅಲ್ಲಿ ಮೇಲ್‌ವರ್ಗದ ಜನ ಮತ್ತು ಪೊಲೀಸ್ ವ್ಯವಸ್ಥೆ ಇವರು ಸಹ ಒಂದಾಗಿ ದೌರ್ಜನ್ಯದ ಶೋಷಣೆಯ ಪರವಾಗಿ ನಿಂತಿರುವುದನ್ನು ಕಾಣುತ್ತೇವೆ. ಆದರೆ ಮಂಜ ಮೂಢ ನಂಬಿಕೆಯನ್ನು ವಿರೋಧಿಸಿದನು ತನ್ನ ಕಣ್ಣು ಹೋದರು ನನ್ನ ಹೃದಯದಲ್ಲಿ ಕಣ್ಣುಗಳಿವೆ ಎಂದು ಹೋರಾಟ ಮಾಡುವುದನ್ನು ಕ್ರಾಂತಿ ಕತೆಯಲ್ಲಿ ಕಾಣುತ್ತೇವೆ.

ಅಂಬೇಡ್ಕರ್ ಹೇಳುವ ಶಿಕ್ಷಣ ಸಂಘಟನೆ ಹೋರಾಟದಿಂದ ಮಾತ್ರ ದಲಿತರ ಉದ್ಧಾರ ಸಾಧ್ಯ ಎಂಬ ಮಾತು ಇಲ್ಲಿ ನಿಜವಾಗುತ್ತದೆ. ಶಿಕ್ಷಣ ಒಂದು ಪ್ರಬಲ ಅಸ್ತ್ರ ಕೇವಲ 10 ನೇಯ ತರಗತಿಯವರೆಗೆ

ಪಡೆದ ಶಿಕ್ಷಣ ಅವನಿಗೊಂದು ಬೆಳಕಿನ ಕಿಂಡಿಯಾಗುತ್ತದೆ ಅವನಲ್ಲಿ ಬಲ ತುಂಬುತ್ತದೆ ದಲಿತರ ವಿಮೋಚನೆಗೆ ಇಂತಹ ಅಸ್ತ್ರದ ಅಗತ್ಯವಿರುವುದನ್ನು ಕುಂ.ವೀ ಇಲ್ಲಿ ಹೇಳುತ್ತಾರೆ. ರೊಣ್ಣಿ, ಕಿವುಡ ಕತ್ತಲನ ಅನ್ನದ ಸಮಸ್ಯೆಯೇ ಕಾರಣವಾಗಿ ಬಂಡಾಯ ರೂಪುಗೊಳ್ಳುತ್ತದೆ. ಸಂಪ್ರದಾಯದ ವ್ಯವಸ್ಥೆಯ ವಿರುದ್ಧದ ಬಂಡಾಯವಿದು. ಆದರೆ ಮಂಜನದು ದೇವದಾಸಿ ಪದ್ಧತಿಗೆ ತನ್ನ ಸಮುದಾಯವನ್ನು ತಳ್ಳಿದ ವ್ಯವಸ್ಥೆ ಮತ್ತು ಸಾರ್ವಜನಿಕ ವಲಯಗಳಲ್ಲಿ ಒಂದಾದ ದೇವಾಲಯಕ್ಕೆ ಪ್ರವೇಶಕೊಡದ ಸಾಂಪ್ರದಾಯಿಕ ಮತ್ತು ದುಷ್ಟ ಜನರ ವಿರುದ್ಧದ ಬಂಡಾಯವಾಗಿದೆ.

ಕೊನೆ ಟಿಪ್ಪಣಿ

1.	ಡಾ|| ಸಿ.ಬಿ.ಹೊನ್ನಯ್ಯ	ದಲಿತ ಬಂಡಾಯ ಸಣ್ಣಕಥೆಗಳು	ಪುಟ–193–263
2.	ಡಾ|| ಎಂ. ಲೀಲಾವತಿ	ದಲಿತ ಬಂಡಾಯ ಕಥಾ ಸಾಹಿತ್ಯ	ಪುಟ– 1–8
3.	ಕೆ. ಮರಳಸಿದ್ದಪ್ಪ	ವಚನಕಮ್ಮಟ	ಪುಟ–79
4.	ಡಾ|| ಎಂ. ಲೀಲಾವತಿ	ದಲಿತ ಬಂಡಾಯ ಕಥಾ ಸಾಹಿತ್ಯ	ಪುಟ–73
5.	ಕು.ವೀ.	ಇದು ಬರಿ ಕಥೆಯಲ್ಲೊ ಅಣ್ಣ ಕತ್ತಲ ತ್ರಿಶೂಲ ಹಿಡಿದ ಕಥೆ	ಪುಟ–1–8
6.	ಕು.ವೀ.	ಇದು ಬರಿ ಕಥೆಯಲ್ಲೊ ಅಣ್ಣ ಕಿವುಡ ನಾಯಿ ಆದ ಪ್ರಸಂಗ	ಪುಟ–9–17
7.	ಕು.ವೀ.	ಡೋಮ ಮತ್ತು ಇತರ ಕಥೆಗಳು ಡೋಮ	ಪುಟ–1–5
8.	ಕು.ವೀ.	ಡೋಮ ಮತ್ತು ಇತರ ಕಥೆಗಳು ದೇವರ ಹೆಣ	ಪುಟ–142–154
9.	ಕು.ವೀ.	ಇದು ಬರಿ ಕಥೆಯಲ್ಲೊ ಅಣ್ಣ ಹುಗ್ಗಿ	ಪುಟ–386–392
10.	ಕು.ವೀ.	ಡೋಮ ಮತ್ತು ಇತರ ಕಥೆಗಳು ಸಿದ್ದನು ಗುರಿ ಇಟ್ಟಿದ್ದು	ಪುಟ–29–34
11.	ಕು.ವೀ.	ಡೋಮ ಮತ್ತು ಇತರ ಕಥೆಗಳು ಕ್ರಾಂತಿ	ಪುಟ–134–141

ಅಧ್ಯಾಯ– 4

ಕುಂ. ವೀ. ಕಥೆಗಳಲ್ಲಿ ಪ್ರಾದೇಶಿಕತೆ

ಭಾಷೆ:

ಸಾಮಾನ್ಯವಾಗಿ ಯಾವುದೇ ಬರಹಗಾರ ಕೃತಿಗಳಲ್ಲಿ ಅವರ ಪ್ರಾದೇಶಿಕತೆಯೂ ಬಳಕೆಯಾಗುತ್ತದೆ. ಲೇಖಕರಿಗೆ ತಾನು ಬದುಕಿರುವ ಪರಿಸರವೇ ಮೂಲತಃ ತನ್ನ ಬರಹಕ್ಕೆ ಮೂಲ ಆಕರವಾಗುತ್ತದೆ. ಆದ್ದರಿಂದ ಸಹಜವಾಗಿಯೇ ಅಲ್ಲಿನ ಸಂಸ್ಕೃತಿ ಮತ್ತು ಇದಕ್ಕೆ ಸಂಬಂಧಿಸಿದ ಬಹುತೇಕ ವಿವರಗಳು ಬರಹಗಳಲ್ಲಿ ಪ್ರವೇಶ ಪಡೆಯುತ್ತವೆ. ತೇಜಸ್ವಿಯವರ ಕುವೆಂಪು ಬರಹಗಳಲ್ಲಿ ಮಲೆನಾಡಿನ ವಿವರಗಳು, ಕಾರಂತರಲ್ಲಿ ಕರಾವಳಿಯ ಹಾಗೂ ಘಟ್ಟದ ಬದುಕಿನ ವಿವರಗಳು, ದೇವನೂರರ ಬರಹಗಳಲ್ಲಿ ಚಾಮರಾಜನಗರ, ಕೊಳ್ಳೆಗಾಲದ ಬದುಕಿನ ವಿವರಗಳು ಬಳಕೆಗೊಂಡಿರುವುದನ್ನು ಇಲ್ಲಿ ಹೆಸರಿಸಬಹುದು. ಭೌಗೋಳಿಕ ಲಕ್ಷಣಗಳು ಭಾಷೆ, ಸಂಸ್ಕೃತಿ, ಬದುಕಿನ ವಿಧಾನ ಇತ್ಯಾದಿಗಳೇ ಪ್ರಾದೇಶಿಕ ಅಂಶಗಳು. ಕುಂ. ವೀರಭದ್ರಪ್ಪನವರ ಬಹಳಷ್ಟು ಕಥೆಗಳಲ್ಲಿ ಕೊಟ್ಟೂರು ಪ್ರಮುಖ ಕೇಂದ್ರ ಸ್ಥಾನವಾಗಿ ಚಿತ್ರಣಗೊಂಡಿದೆ. ಇದಕ್ಕೆ ಮುಖ್ಯವಾದ ಕಾರಣಗಳು ಎರಡು ಒಂದು ಕಥೆಗಾರರು ಮೂಲತಃ ಇದೇ ಊರಿನವರಾದ್ದರಿಂದ ಸಹಜವಾಗಿ ಕೊಟ್ಟೂರು ಮೇಲಿಂದ ಮೇಲೆ ಪ್ರಸ್ತಾಪವಾಗುತ್ತದೆ. ಇನ್ನೊಂದು ಸುತ್ತಮುತ್ತಲ ಹಳ್ಳಿಗಳ ಜನರಿಗೆ ಇದೊಂದು ಪ್ರಮುಖ ಪಟ್ಟಣವಾಗಿದೆ. ಇವರು ಸಮಾಜದ ಜನರ ಜೀವನವನ್ನು ಆದಷ್ಟು ಸಮೀಪದಿಂದ ಹಾಗೂ ಆಳವಾಗಿ ನೋಡಿದವರು ಸೂಕ್ಷ್ಮ ವಿವರಗಳಿಂದ ಕೂಡಿದ ಅವರ ನಿರೂಪಣೆ ಹಾಗೂ ಅಲ್ಲಿನ ಭಾಷೆಯ ಮೂಲಕವಾಗಿಯೇ ಪಾತ್ರಗಳನ್ನು ಜೀವಂತಗೊಳಿಸುವ ಕಲೆ ಇವುಗಳಿಂದಾಗಿ ಕುಂ. ವೀ ನಮ್ಮ ಮಹತ್ವದ ಕತೆಗಾರರಲೊಬ್ಬರಾಗಿದ್ದಾರೆ.

ಇವರ ಕಥೆಗಳಲ್ಲಿ ಬರುವ ಹಾರಕನಾಳು, ಚಪ್ಪರದಳ್ಳಿ, ಉತ್ತಂಗಿ, ಲಿಂಬಳಿ, ಕೂಡ್ಲಿಗಿ, ಬಿ.ಬಿ.ಹಳ್ಳಿ, ಸೋಲದರಹಳ್ಳಿ ಬತ್ನಳ್ಳಿ, ಬಡೆಲಡಕು, ರಾಮಾಪುರ, ಉಜ್ಜೇನಿ, ಕಾಳಾಪುರ, ಸೊನ್ನೆ, ಮೇರಗೇರಿ, ನಡುಬನಹಳ್ಳಿ ಮೊದಲಾದ ಹತ್ತು ಹಲವು ಹಳ್ಳಿಗಳ ಭೌಗೋಳಿಕ ಪರಿಸರ ಗ್ರಾಮದ ವಿಶೇಷತೆ, ಜನರ ನಡೆ–ನುಡಿ, ಭಾಷೆ, ಗಂಡಸರು– ಹೆಂಗಸರ ಗುಣಸ್ವಭಾವಗಳ ಚಿತ್ರಣ ಯಥಾವತ್ತಾಗಿದೆ. ಹಾಗೆಯೇ ನೆರೆಯ ಆಂಧ್ರದ ಹಳ್ಳಿಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಕಾರಣದಿಂದಾಗಿ ಅಲ್ಲಿನ ಭೌಗೋಳಿಕತೆ ಮತ್ತು ಸಾಮಾಜಿಕ ಪರಿಸ್ಥಿತಿಯ ವಿವರಗಳೂ ಕತೆಯಲ್ಲಿ ಬಳಕೆಯಾಗುತ್ತದೆ. ಕುಂ. ವೀ. ಅವರ ಭಾಷೆಗೆ ಜೀವಂತಿಕೆ ಬರುವುದೇ ಈ ಪ್ರದೇಶದ ಸಹಜವಾದ ಭಾಷೆಯನ್ನು ಬಳಸಿಕೊಳ್ಳುವುದರ ಮೂಲಕ ಈ ಬಗೆಯ ನಿರೂಪಣೆಗೆ ಓದುಗರನ್ನು ಆಕರ್ಷಿಸುವ ಸಾಮರ್ಥ್ಯವಿದೆ. ಒಂದು ಸಮುದಾಯದಲ್ಲಾಗುವ ಚಲನಶೀಲತೆಯಂತಹ ಗಂಭೀರ ವಸ್ತುವನ್ನು ಅದರ ಗಾಂಭೀರ್ಯದ ಆಯಾಮಕ್ಕೆ ಊನ ಭಾರದಂತೆ ಕಥೆಗಳಲ್ಲಿ ಅನುಲೇಪನ ನೀಡಿದ್ದಾರೆ. ವೈವಿಧ್ಯ, ಪ್ರತ್ಯಕ್ಷ ವ್ಯಕ್ತಿತ್ವಗಳನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ.
[ಪ್ರೊ.ಎಲ್.ಎಸ್.ಶೇಷಗಿರಿರಾವ್] 1984 ಬರಿ ಕಥೆಯಲ್ಲಿ ಅಣ್ಣ]

ಈ ಪ್ರದೇಶದಲ್ಲಿನ ಮಣ್ಣಿನ ರಸ್ತೆ, ಹಾದಿಗುಂಟ ಸಾಗುವ ಎತ್ತಿನ ಬಂಡಿ, ಕುರಿಕಾಯುವವನು, ಜಂಗುಳಿದನ, ಇತ್ಯಾದಿಗಳಿರುವ ಸಂಗತಿಗಳನ್ನು ಕುಂ.ವೀ. ಹೇಳುತ್ತಾ ಹೋಗುತ್ತಾರೆ. ಇಲ್ಲಿಂದ ಅಲಕ್ಷಿತ ಪ್ರದೇಶವಾಗಿದ್ದು ಅಲ್ಲಿಯ ಮಣ್ಣಿನ ಲಕ್ಷಣ, ಬೆಳೆ ತೆಗೆಯುವ ಶ್ರದ್ಧೆ, ರಸ್ತೆಗಳ ಪರಿಸ್ಥಿತಿ ಹೆಚ್ಚು ನಾಗರೀಕತೆಗೊಳ್ಳದ ಅಲ್ಲಿನ ಬದುಕಿನ ಚಿತ್ರಣವಿದೆ. ರಾಜಧಾನಿ ಬೆಂಗಳೂರಿಗೆ ದೂರವಿರುವ ಹೈದರಬಾದ್ ಕರ್ನಾಟಕದ ಕಡೆಯ ಹಳ್ಳಿಗಾಡಿನಲ್ಲಿ ಇಂತಹ ಇಕ್ಕಟ್ಟುಗಳಿದೆ.

ಕೊಟ್ಟೂರಿನ ಬಸ್ಟ್ಯಾಂಡು, ಸಂತೆ, ಮಾರ್ಕೆಟು, ಕೊಟ್ಟೂರೇಶ್ವರ ಜಾತ್ರೆಗೆ ಸುತ್ತಮುತ್ತಲಿನ ನೂರಾರು ಹಳ್ಳಿಗಳಿಂದ ಬರುವ ಜನರ ಆನಂದ ಅಬ್ಬರಗಳನ್ನು ಕಲಾತ್ಮಕವಾಗಿ ಕುಂ. ವೀ. ಅವರ ಕಥೆಗಳಲ್ಲಿ ಕಾಣಬಹುದು. ಕೊಟ್ಟೂರಿನ ಸಂತೆ ನಡೆಯುವ ದಿನ ಬೇಸ್ತುವಾರ ಅಂದರೆ ಗುರುವಾರ ಕೊನಳ್ಳಿಯ ಸಣ್ಣ ರೈತಾಪಿ ಜನ ಕೆಳಗೇರಿಯ ಜನರು ಸಂತೆಗೆ ಬಂಡಿ ಜಾಡು ಹಿಡಿದು ಕೊಟ್ಟೂರಿಗೆ ನಡೆದುಕೊಂಡು ಹೋಗುವುದೇ ಹೆಚ್ಚು ಗೌಡ್ರು, ಕ್ವಾಂಟ್ರು, ಬ್ರಾಂಬು, ತಮ್ಮ ದಿವ್ಯ ಪಾದಗಳನ್ನು ಅಪ್ಪಿ ತಪ್ಪಿ ಈ ಜಾಡಿನ ಮೇಲೆ ಇಡುವುದಿರಲಿ ಅಂಥವರು ಮೂರು ಮೈಲಿ ದೂರ ಇರುವ ಡಾಂಬರು ರಸ್ತೆ ಸೇರಿ ಸರಕಾರಿ ಬಸ್ಸಿಗೆ ಹತ್ತಿಕೊಂಡು ಕೊಟ್ಟೂರು ತಲುಪುವರು. ಅಂದರೆ ಮೇಲ್ವರ್ಗದವರು ಬಸ್ಸುಗಳಲ್ಲಿ ಪ್ರಯಾಣಿಸಿದರೆ ಕೆಳ ಜಾತಿಯವರು ಬಸ್ ಚಾರ್ಜ್‌ಗೆ ಹಣವಿಲ್ಲದೆ ನಡೆದೇ ಹೋಗಬೇಕಾದ ಅನಿವಾರ್ಯವನ್ನು ಇಲ್ಲಿ ತಿಳಿಸುತ್ತಾರೆ.

ಕುಂ.ವೀ. ಅವರು ಆಂಧ್ರದ ಗಡಿ ಭಾಗದಲ್ಲಿ ಶಿಕ್ಷಣ ವೃತ್ತಿಯನ್ನು ಕೈಗೊಂಡವರು, ಹೀಗಾಗಿ ಅಲ್ಲಿನ ಹಲವಾರು ಹಳ್ಳಿಗಳನ್ನು ನೋಡಿದವರು. ಈಡಾ ಪಿಂಗಳ ಸುಷಮ್ನನಾಳ ಮಧ್ಯದ ಕೂಗು ಕಥೆಯಲ್ಲಿ ಪೆದ್ದ ಕಡಬೂರು ಗ್ರಾಮದ ಆದಿವಾಸಿ ಮತ್ತು ಪತ್ತಿಕೊಂಡವ ನಡುವೆ ಒಂಭತ್ತನೇಯ ಮೈಲಿಗಲ್ಲಿಗೆ ದಕ್ಷಿಣ ದಿಕ್ಕಿನಲ್ಲಿ ಮೂರುವರೆ ಮೈಲಿ ದೂರದಲ್ಲಿರುವ ಪುಟ್ಟ ಗ್ರಾಮ ಯಾವುದೇ ಊರಿನ ಪ್ರಸ್ತಾಪ ಮಾಡುವಾಗ ಕುಂ. ವೀ. ಆಯಾ ಗ್ರಾಮದ ಭೌಗೋಳಿಕ ಪರಿಸರವನ್ನು ಗುರುತಿಸಿಯೇ ಮುಂದೆ ಹೋಗುತ್ತಾರೆ. ಇದರಿಂದ ಓದುಗರಿಗೆ ಆಯಾ ಗ್ರಾಮದ ಪ್ರಾದೇಶಿಕ ಹಿನ್ನೆಲೆ ಸ್ಪಷ್ಟವಾಗಿ ತಿಳಿಯುತ್ತೇವೆ. ಹುಲುಲಿಹಳ್ಳ ಉರುಕುಂದಿ ಈರಣ್ಣ ಈ ಉರುಕುಂದಿ ಎಂಬ ಊರಿನಲ್ಲಿ ಇರುವ ದೇವರ ಈ ಬಗ್ಗೆ ಕತೆಗಳಲ್ಲಿ ಮತ್ತೆ ಮತ್ತೆ ಪ್ರಸ್ತಾಪಿತವಾಗುತ್ತದೆ. ಆ ಭಾಗದ ವಿಶೇಷ ಕಲಾ ಪ್ರಕಾರವೆಂದರೆ ಬಯಲು ನಾಟಕ ಇಲ್ಲಿಯ ಸಂಭಾಷಣೆಯ ತುಣುಕುಗಳನ್ನು ಕತೆಗಳಲ್ಲಿ ಅಲ್ಲಲ್ಲಿ ಬಳಸಿಕೊಂಡಿದ್ದಾರೆ ಉದಾಹರಣೆ: **"ದೇವರಹೆಣ ಕತೆಯಲ್ಲಿನ"** ಅಲಲಲೈಸಾರಥಿ ನಾನುದಾರೆಂದರೆ..........!

ತಳಸಮುದಾಯದ ಬದುಕಿನ ವಿವಿಧ ಮುಖಗಳು

ಬಡತನ – ಹಸಿವು

ಒಂದು ಪ್ರದೇಶದಲ್ಲಿರುವಂಥ ಶೂದ್ರರು ಮತ್ತಿತರ ಕೆಳವರ್ಗದವರ ವಿವಿಧ ಮುಖಗಳನ್ನು ಕುಂ. ವೀರಭದ್ರಪ್ಪನವರು ನಮಗೆ ಕಟ್ಟಿಕೊಡುತ್ತಾರೆ. **'ಕತ್ತಲನ್ನು ತ್ರಿಶೂಲ ಹಿಡಿದ ಕಥೆ'** ಇದಕ್ಕೊಂದು ಉತ್ತಮ ಉದಾಹರಣೆ, ಕೆಳವರ್ಗದ ಕತ್ತಲನು ಹಸಿವಿನಿಂದಾಗಿ ತನ್ನ ಸುತ್ತಮುತ್ತಲಿನ ಬಂಧನಗಳನ್ನೆಲ್ಲ ಕಿತ್ತೊಗೆದು ಗರ್ಭಗುಡಿಗೆ ನುಗ್ಗಿ ಹಸಿವನ್ನು ಹಿಂಗಿಸಿಕೊಳ್ಳುತ್ತಾನೆ.

ಹಸಿವು ಎನ್ನುವುದು ಆತನಿಗೆ ಪರಿಚಿತವಾದದ್ದು ತಾನು ಒಂದು ಕಾಗೆಯಾಗಿದ್ದರೆ ಅಥವಾ ನಾಯಿಯಾಗಿದ್ದಾರೆ ನನಗೂ ಅನ್ನ ಸಿಗುತ್ತಿತ್ತು ಎನ್ನುತ್ತಾನೆ. ಅಲ್ಲದೆ ಮನುಷ್ಯರಿಗಾಗಿ ಬದುಕುವ ಮನುಷ್ಯನಾಗಿ ಹುಟ್ಟಬಾರದಿತ್ತು ಅನ್ನಿಸಿತು. ಹುಟ್ಟಿದ ತಪ್ಪಿಗೆ ಬಿಟ್ಟೆನಂದರು ಬಿಡದೆ ಅಂಟಿಕೊಂಡಿರುವ ಹೊಟ್ಟೆ ಆ ಹೊಟ್ಟೆ ಇಲ್ಲದಿದ್ದರೆ ಗೌಡರ ಜಾಲಿ ಮರದ ನೆರಳಲ್ಲಿ ಚೌಕರಿ ಮಾಡುತ್ತಿರಲಿಲ್ಲ ಎಂದು ಕೊಳ್ಳುತ್ತಾನೆ. ಕಿವುಡ, ಕೊಣ್ಣಿ, ಬಸವ, ಡೋಮ ಈ ಕತೆಯಲೆಲ್ಲಾ ಹಸಿವಿನ ಚಿತ್ರಣ ಆ ಪ್ರದೇಶದಲ್ಲಿರುವ ಜಮೀನ್ದಾರಿ ಪದ್ಧತಿಯ ಹಿಡಿತ, ಜಾತಿ ವ್ಯವಸ್ಥೆ ಅಲ್ಲಿರುವ ತಳಸಮುದಾಯದ ಜನರ ವೃತ್ತಿಯಾದ ಕೃಷಿ ಕಾರ್ಮಿಕತನ ಪದೇ ಪದೇ ಎದುರಾಗುವ ಬರಗಾಲ, ಪರಿಣಾಮದಿಂದಾಗುವ ಬಡತನ ಹಸಿವು ಇವುಗಳ ಚಿತ್ರಣ ಇಲ್ಲಿದೆ. ಕತ್ತಲ, ಮೃಗಗಳು ಕಥೆಯ ಶಂಕ್ರಪ್ಪ ಸಮನ್ವಯ ಕಥೆಯ ಬ್ಯಾಡ್ರು ಎಂಕ ತಿರಸ್ಕರುತರು ಕಥೆಯನ್ನು ಮುಂತಾದವರು ಶೂದ್ರ, ಬದುಕಿನ ವಿವಿಧ ಮುಖಗಳನ್ನು ಕಾಣಬಹುದು. ಕುಂ. ವೀರಭದ್ರಪ್ಪನವರ ಕತೆಯ ಬೇರು **'ಬಡತನ'** ಎಂದು ಹೇಳಬಹುದು. ಬಹುತೇಕ ಎಲ್ಲಾ ಕಥೆಗಳಲ್ಲಿ ಕಾಣುವುದು ಶೋಷಣೆ, ಮೇಲ್ವರ್ಗ ದಲಿತರ ಮೇಲೆ ತೋರುವ ದರ್ಪ, ದೌರ್ಜನ್ಯಗಳು ದಲಿತರು ಎಂದರೆ ಸಮಾಜದ ವ್ಯವಸ್ಥೆಯಲ್ಲಿ ಕೆಳವರ್ಗದ ಜಾತಿಯೆಂದು ಕರೆಯಲ್ಪಟ್ಟು ಈ ಕಾರಣದಿಂದಲೇ ಬಡತನ ಶೋಷಣೆಗೆ ಒಳಪಟ್ಟಿರುವವರು. **'ದೇವರಹೆಣ ಕಥೆ'**ಯ ಕೊಣ್ಣೆಯ ಬಡತನದ ಹಸಿವು, ಕತ್ತಲನ ಹಸಿವು, ಕಿವುಡನ ಹಸಿವು, ಹುಗ್ಗಿಯ ಕತೆಯ ಹಸಿವು, ಬಸವನ ಹಸಿವು, ಸಿದ್ದ ಗುರಿ ಇಟ್ಟಿದ್ದು, ಆ ಪ್ರದೇಶದಲ್ಲಿ ಈ ಸಮುದಾಯದ ಸಾಮಾನ್ಯವಾಗಿರುವ ಬಡತನ ಹಸಿವು, ಈ ಕತೆಗಳಲ್ಲಿ ಬಳಕೆಯಾಗಿದೆ.

ಲಿಂಗಾಯುತ ಧರ್ಮದ ವಾರಸುದಾರರಂತಿರುವ ಪ್ರತಿಷ್ಠಾಪಿತ ಮೂರ್ತಿಗಳಾಗಿರುವ ಸ್ವಾಮೀಜಿಗಳ ಕ್ರೌರ್ಯ ಮತ್ತು ಅದನ್ನು ತಮ್ಮದೇ ನೆಲೆಯಲ್ಲಿ ಪ್ರತಿಭಟಿಸುವ ವಿನ್ಯಾಸಗಳು ಈ ಕತೆಗಳಲ್ಲಿ ಪ್ರವೇಶ ಪಡೆದಿವೆ. ನೇರವಾದ ಪ್ರತಿಭಟನೆ ಸಿದ್ದನದ್ದಾದರೆ ರತ್ನಳ ಪ್ರತಿಭಟನೆ ಆಟದ ಮೂಲಕ ಅನಾವರಣಗೊಳ್ಳುತ್ತದೆ. ರತ್ನ ಎಂಬ ಹುಡಿಗೆಯೂ ಉಗಾದಿ ಎಂಬ ಆಟವು ಕಥೆಯ ಬಡತನದ ಸ್ವರೂಪವನ್ನು ತಿಳಿಸುವಂಥದ್ದು ತಪ್ಪವ್ವನೆಂಬ ಮಹಿಳೆ ತನ್ನ ಗಂಡನ ದುಶ್ಚಟಗಳಿಂದ ಆಸ್ತಿ ಕಳೆದುಕೊಂಡು ನಿರ್ಗತಿಕಳಾದರೂ ತನ್ನ ಅತ್ತೆಯನ್ನು ಮಕ್ಕಳನ್ನು ಸಾಕಲು ತುಂಬಾ ಕಷ್ಟಪಡುತ್ತಾಳೆ. ಏನಾದರೂ ಮಾಡಿ ಹಬ್ಬದ ಶಾಸ್ತ್ರ ಮುಗಿಸಬೇಕೆಂಬ ಪ್ರಯತ್ನವೆಲ್ಲವೂ ಹೊಳೆಯಲ್ಲಿ ತೆಗೆದ ಹುಣಸೆ ಹಣ್ಣಿನಂತಾಗಿತ್ತು. ಹಬ್ಬದಲ್ಲಿ ಸ್ವಾಮಿಗಳನ್ನು ಅಂದರೆ ಅಯ್ಯೋರನ್ನೂ ಮನೆಗೆ ಕರೆಸಿ ಅವರಿಗೆ ಮೊದಲು ಊಟ (ಬಿನ್ನ) ಮಾಡಿಸುವುದು. ಈ ಭಾಗದ ಒಂದು ಸಂಪ್ರದಾಯ ಆ ಸಂಪ್ರದಾಯವನ್ನು ತಿಪ್ಪವ್ವ ನೆರವೇರಿಸಿ ಸ್ವಾಮಿ ಶಂಕರಯ್ಯನಿಗೆ ಹೋಳಿಗೆ ಊಟವನ್ನು ಬಡಿಸುತ್ತಾಳೆ. ಊಟ ಮಾಡಿದ ಮೇಲೆ ಚರ್ಮದ ಖರ್ಚಿಗೆ ಮೂರು ಪಟ್ಟಿ ಕೊಡಬೇಕಪ್ಪ ಇಲ್ಲಾಂದ್ರೆ ಬಿನ್ನ ತೀರ್ಸಿ ಏನು ಸಾರ್ಥಕ ಎಂದು ಹಟ ಹಿಡಿದಾಗ ಎಲೆ ಅಡಿಕೆಯಲ್ಲಿ ಪೂರ್ತಿ ಹಣವನ್ನು ಇದ್ದು ನಮಸ್ಕಾರ ಮಾಡಿದಳು ತಿಪ್ಪವ್ವ.

ದುಡಿದು ತಿನ್ನುವ ಜನ ತಮ್ಮ ಸಂಪ್ರದಾಯಗಳ ಸಂಕೋಲೆಗಳಿಂದ ಹಾಳಾಗುವ ಬಗೆಯನ್ನು ಈ ಕಥೆ ಹೇಳುತ್ತದೆ. ಹಾಗೆಯೇ ಪುರೋಹಿತ ವರ್ಗ ಶ್ರಮವಿಲ್ಲದೆ ಬದುಕುವ ಹಾದಿಯನ್ನು ತಲೆ ತಲಾಂತರದಿಂದ ನಡೆಸಿಕೊಂಡು ಬಂದಿರುವ ಸತ್ಯವನ್ನು ಹೇಳುತ್ತಾ ಹೋಗುತ್ತೇವೆ. ಕೊನೆಗೆ ಉಗಾದಿ ಆಟದ ಮೂಲಕ ಇಂಥ ಸಂಪ್ರದಾಯಗಳನ್ನು ವಿಡಂಬನೆಮಾಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

ಜಮಿನ್ದಾರಿ ಪದ್ಧತಿ:

ಕುಂ. ವೀ. ಅವರು ಮೇಲ್ಜಾತಿಯವರ ದರ್ಪ ದೌರ್ಜನ್ಯವನ್ನು ತಮ್ಮ ಕಥೆಗಳಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಅವರ ದೃಷ್ಟಿಯಲ್ಲಿ ಮೇಲ್ವರ್ಗದವರೆಂದರೆ ಕರ್ನಾಟಕದ ಗೌಡರು, ಆಂಧ್ರದ ರೆಡ್ಡಿಯವರು, ಇವರೆಲ್ಲರ ಜಾತಿ ಬಹುಮಟ್ಟಿಗೆ ಲಿಂಗಾಯಿತದ್ದು. ಅಧ್ಯಯನಕ್ಕೆ ನಾನು ಆರಿಸಿಕೊಂಡಿರುವ ಕತೆಗಳಲ್ಲಿ ಬರುವ ಪಟ್ಟಭದ್ರ ಹಿತಾಶಕ್ತಿಗಳೆಂದರೆ ನೂರಾರು ಎಕರೆಗಳಿಗೆ ಆಂಧ್ರದಲ್ಲಿ ಮಾಲೀಕರಾಗಿರುವ ಜಮೀನ್ದಾರರು ಊಳಿಗಮಾನ್ಯ ಪದ್ಧತಿಗೆ ಹೆಸರುವಾಸಿ ಅದೇ ವ್ಯವಸ್ಥೆ ಇದಕ್ಕೆ ಹೊಂದಿಕೊಂಡಿರುವ ಬಳ್ಳಾರಿ, ಕೊಟ್ಟೂರು ಭಾಗದಲ್ಲೂ ಇದೆ. ಸಾಮಾನ್ಯವಾಗಿ ಲಿಂಗಾಯುತ ಧರ್ಮಕ್ಕೆ ಸೇರಿರುವ ಇವರೆಲ್ಲರಲ್ಲೂ ಮನೆ ಮಾಡಿರುವುದು ಅಮಾನುಷ್ಯ ಕ್ರೌರ್ಯ. ಈ ಚಿತ್ರಣಗಳೇ ಈ ಕತೆಗಳ ಕೇಂದ್ರ ವಸ್ತುವಾಗಿದೆ.

ಜಾತಿ ಪದ್ಧತಿ – ವರ್ಗಸಂಘರ್ಷ

ಬ್ರಾಹ್ಮಣರು ಅಥವಾ ಪುರೋಹಿತ ವರ್ಗ ಕ್ಷತ್ರಿಯರು ಅಥವಾ ಸೈನಿಕ ವರ್ಗ, ವೈಶ್ಯರು ಅಥವಾ ವ್ಯಾಪಾರಿಗಳು ಶೂದ್ರ ಅಥವಾ ಶ್ರಮ ಜೀವಿಗಳು ಮತ್ತು ಅಸ್ಪೃಶ್ಯರು ಎಂಬ ನಾಲ್ಕು ವರ್ಣಗಳಿಂದ ಹಿಂದೂ ಸಮಾಜವು ರೂಪಿತವಾಗಿದೆ ಎಂದು ಅಧ್ಯಯನಗಳಿಂದ ಇರುವ ವ್ಯವಸ್ಥೆಯನ್ನು ಗಮನಿಸಿದ್ದಾಗ ಸ್ಪಷ್ಟವಾಗುತ್ತದೆ. ವರ್ಣ ಪದ್ದತಿಯಲ್ಲಿ ಯಾವುದೇ ವ್ಯಕ್ತಿ ಸೂಕ್ತ ತರಬೇತಿಯನ್ನು ಪಡೆದು ತನ್ನ ವರ್ಣವನ್ನು ಬದಲಾಯಿಸಬಹುದಾಗಿತ್ತು. ಆದರೆ ಒಂದು ಕಾಲ ಘಟ್ಟದಲ್ಲಿ ಸಮಾಜದ ಉಳಿದ ಜನರಿಗಿಂತ ದೂರ ಇದ್ದ ಪುರೋಹಿತವರ್ಗ ತಾನೆ ಒಂದು ಜಾತಿಯಾಯಿತು ಶೂದ್ರ ಮತ್ತು ಅತೀ ಶೂದ್ರರು ಸೌಲಭ್ಯಗಳ ರಹಿತ ಬಡತನವನ್ನು ತನ್ನದಾಗಿಸಿಕೊಳ್ಳಬೇಕಾಯಿತು.

ಇದು ಬ್ರಾಹ್ಮಣರಿಂದ ಮೊದಲಗೊಂಡ ಬ್ರಾಹ್ಮಣೇತರ ವರ್ಗಗಳಿಂದ ಹೃದಯಪೂರ್ವಕವಾಗಿ ಸ್ವೀಕರಿಸಲ್ಪಟ್ಟಿತ್ತು. ಇದು ಅನುಕರಣೆಯ ಅಂಟುರೋಗ ಎಲ್ಲಾ ಉಪಗುಂಪುಗಳು ತಾರತಮ್ಯದ ಕಡೆಗೆ ನಡೆದು ಜಾತಿಗಳಾಗಿ ಮಾರ್ಪಟ್ಟಿವು. ಭಾರತದಲ್ಲಿನ ಜಾತಿಗಳಲ್ಲಿ ಬ್ರಾಹ್ಮಣರನ್ನು ದೇವರುಗಳೆಂದು ಪರಿಗಣಿಸಲಾಗಿದೆ. ಇತರರ ಜೀವನ ವಿಧಾನ ಮತ್ತು ಇತ್ಯಾದಿಗಳನ್ನು ನಿರ್ಧರಿಸುವವನು ಆತನೆ ಆಗಿರುತ್ತಾನೆ. ಕುಂ.ವೀ. ಕತೆಗಳಲ್ಲಿ ಈ ಜಾತಿ ವ್ಯವಸ್ಥೆಯ ಪರಿಣಾಮಗಳ ಚಿತ್ರಣವಿದೆ.

ಈ ಎಲ್ಲಾ ಕತೆಗಳಲ್ಲಿ ಜಾತಿ ಮತ್ತು ಪದ್ದತಿ ಮತ್ತು ವರ್ಗ ಸಂಘರ್ಷವನ್ನು ಕಾಣಬಹುದಾಗಿದೆ. ಮೇಲುವರ್ಗದವರು ಕೆಳವರ್ಗದವರನ್ನು ಶೋಷಣೆಗೆ ಒಳಪಡಿಸುವುದನ್ನು ಕಾಣಬಹುದು. ಉದಾ:– ಡೋಮನ ಕತೆಯಲ್ಲಿನ "ಡೋಮ" ಗೌಡರ ಮನೆಯಲ್ಲಿನ ಗಿಡಗಳನ್ನು ಕತ್ತರಿಸುತ್ತಾನೆ. ಆದರೆ ಡೋಮನ ಗಿಡಗಳನ್ನು ಗೌಡ ಕತ್ತರಿಸಿದಾಗ ಅಲ್ಲಿಯ ಜನರು ಪಂಚಾಯಿತಿ ಕಟ್ಟೆಯಲ್ಲಿ ಡೋಮನನ್ನು ಮಾತ್ರ ಕೇಳಿ, ಗೌಡರನ್ನು ಪ್ರಶ್ನಿಸುವುದಿಲ್ಲ ಇಲ್ಲಿ ತಿಳಿಯುವುದೇನೆಂದರೆ ಡೋಮನು ಕೆಳವರ್ಗದವನಾದ್ದರಿಂದ ಅವನನ್ನು ಪ್ರಶ್ನಿಸಬಹುದು, ತಲೆದಂಡ ಹಾಕಬಹುದು, ಆದರೆ 'ಗೌಡ' ಪ್ರಶ್ನಾತಿತ. ಇನ್ನೂ "ದೇವರಹೆಣ" ಕತೆಯಲ್ಲಿ ರೊಣ್ಣಿ ಸತ್ತ ಎತ್ತನ್ನು ಸಮಾದಿ ಮಾಡಿದ್ದನ್ನು ಕದಿಯುತ್ತಾನೆ ಆದರೆ ಸತ್ತದ್ದನ್ನು ಕೊಡಲೊಪ್ಪದ ಗೌಡ ಆ ಎತ್ತನ್ನು ತಿನ್ನುವುದಕ್ಕೂ ಸ್ವಾತಂತ್ರ್ಯ ಕೊಡದ ಸ್ಥಿತಿಯನ್ನು ಈ ಕತೆಯಲ್ಲಿ ತಿಳಿಯಬಹುದು. "ಕತ್ತಲ ತ್ರಿಶೂಲ ಹಿಡಿದ" ಕತೆಯಲ್ಲಿ ಕತ್ತಲನು ತನ್ನ ಹಸಿವನ್ನು ನಿವಾರಿಸಿಕೊಳ್ಳಲು ದೇವರ ಪ್ರಸಾದವನ್ನು ತಿನ್ನುತ್ತಾನೆ. ಆದರೆ ಅಲ್ಲಿಯೂ ಸಹ ಜಾತಿ ಪದ್ಧತಿ ಮತ್ತು ವರ್ಗ ಸಂಘರ್ಷ ಬರುವುದನ್ನು ಕಾಣುತ್ತೇವೆ.

ಭಾರತೀಯ ಸಂದರ್ಭದಲ್ಲಿ ವರ್ಗ ಸಂಘರ್ಷ ಜಾತಿ ಸಂಘರ್ಷದ ಒಂದು ಭಾಗವಾಗಿಯೇ ನಡೆದಿದೆ. ಇತಿಹಾಸವನ್ನು ಗಮನಿಸಿದಾಗ ವರ್ಗ ಸಮಾನತೆಗಾಗಿ ಅನೇಕ ದಶಕಗಳಲ್ಲಿ ಹೋರಾಟಗಳು ನಡೆದಿರುವುದು ಕಂಡು ಬರುತ್ತದೆ. ಭಾರತದಲ್ಲಿ ಮೇಲ್ಜಾತಿಯರೆಂದರೆ ಉತ್ತಮ ವರ್ಗದವರು ಶ್ರೀಮಂತರು ದಲಿತರೆಂದರೆ ಕೆಳವರ್ಗದವರು ಬಡವರು, ಅಂಬೇಡ್ಕರ್ ಬುದ್ದನ ಬಗ್ಗೆ ಹೇಳುತ್ತಾ ಅವನು ತನ್ನ ತತ್ವಜ್ಞಾನದ ಮೂಲಕ ವಿಶ್ವಪರಿವರ್ತನೆಗೆ ಪ್ರಯತ್ನಿಸಿದ್ದನ್ನು ವಿವರಿಸುತ್ತಾರೆ. ಹಾಗೆಯೇ ಕಾಲ್‌ಮಾರ್ಕ್ಸ್ ವರ್ಗ ವ್ಯವಸ್ಥೆಯ ಬಗೆಗೆ ಹೇಳುವ ಮೊದಲೇ ಬುದ್ದ ಹೇಳಿದ್ದ ಎನ್ನುತ್ತಾರೆ. ಅಂಬೇಡ್ಕರ್‌ರವರು ತಮ್ಮ ಬರಹದಲ್ಲಿ ಬುದ್ದನನ್ನು ಗುರುತಿಸುತ್ತಾ ವರ್ಗಾ ಸಂಘರ್ಷದ ಬಗ್ಗೆ ಬುದ್ದನ ವೈಯಕ್ತಿಕ ಧೋರಣೆ ಏನೆಂದರೆ ಅವನ ಅಷ್ಟಾಂಗ ಮಾರ್ಗ ತತ್ವವು ವರ್ಗ ಸಂಘರ್ಷ ಇದೆ ಎಂದು ಆ ವರ್ಗ ಸಂಘರ್ಷವೇ ದುಃಖದ ಮೂಲ ಎಂದು ಗುರುತಿಸುತ್ತೇವೆ.
ಬಸವಣ್ಣ, ಕಾಲ್‌ಮಾರ್ಕ್ಸ್, ಅಂಬೇಡ್ಕರ್ ಇನ್ನೂ ಮುಂತಾದವರು ವರ್ಗ ಸಂಘರ್ಷದ ಕುರಿತು ಚಿಂತಿಸಿ ಹೋರಾಟ ನಡೆಸಿದ್ದರು. ಶ್ರೀಮಂತ ಮತ್ತು ಸಾಮಾನ್ಯನ ಮಧ್ಯೆ ಅಂತರ ಹೆಚ್ಚುತ್ತಲೇ ಇದೆ ಜಾತಿಯಲ್ಲದೆ ಸೋದರ ಸಂಬಂಧದಲ್ಲೂ ಸಂಘರ್ಷಗಳು ಇನ್ನೂ ನಡೆಯುತ್ತಲೇ ಇದೆ. ವರ್ಗ, ಸಂಘರ್ಷದ ಅಂಶಗಳನ್ನು ಕಾಣಬಹುದು. ಇಂತಹ ವೈರುದ್ಯಗಳನ್ನು ಕತೆಗಳಲ್ಲಿ ಕುಂ.ವೀ.ವಿವರಿಸಿದ್ದಾರೆ.

ಡಾ. ಸಿದ್ದಲಿಂಗಯ್ಯ: ಜಾತಿಗಳ ಹುಟ್ಟು ಮತ್ತು ಬೆಳವಣಿಗೆ ಲೇಖನ (ಪುಟ್ಟ 107 ವಿಚಾರ ಸಾಹಿತ್ಯ 2).

ಸ್ತ್ರೀಯರ ಪಾತ್ರ ಚಿತ್ರಣಗಳು:

ಕುಂ.ವೀರಭದ್ರಪ್ಪರವರು ಸ್ತ್ರೀ ಸಮುದಾಯದ ಸಂಸ್ಕೃತಿಯನ್ನು ತಮ್ಮ ಕತೆಗಳಲ್ಲಿ ಹಲವಾರು ಪಾತ್ರಗಳ ಮುಖಾಂತರ ಪ್ರತಿಬಿಂಬಿಸಿದ್ದಾರೆ. ಇವರ ಸ್ತ್ರೀ ಪಾತ್ರಗಳು ಬಹುತೇಕ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಇವೆ. ಉದಾ: ದೇವಿರವ್ವ, ತಿಮ್ಮಿ, ಕುಲ್ಡಿ, ಗುಡ್ಡವ್ವ, ಕುಂಟಿ ಇತ್ಯಾದಿಗಳು "ಕ್ರಾಂತಿ" ಕತೆಗಳಲ್ಲಿ ಕ್ರಾಂತಿಕಾರಿ ಮಂಜು ತನ್ನ ತಾಯಿ ದೇವದಾಸಿ ಎಂದು ತಿಳಿದಿದ್ದು ತಂದೆಯಾರೆಂದು ಗೊತ್ತಿಲ್ಲದೆ ಅನುಭವಿಸುವ ಅಪಮಾನದ ಚಿತ್ರವಿದೆ. ಅಂದರೆ ಮಂಜುವಿನ ವಂಶದಲ್ಲಿನ ಎಲ್ಲಾ ಸ್ತ್ರೀಯರು ಅಂದರೆ ಅಜ್ಜಿ, ತಾಯಿ ದೇವದಾಸಿ ಪದ್ಧತಿಯಲ್ಲಿ ಇರುವುದನ್ನು ಕಾಣುತ್ತೇವೆ. ಗೌಡರೂ ದೇವಿರವ್ವನನ್ನು ದೇವದಾಸಿ ಎಂದು ಉಪಯೋಗಿಸುವುದನ್ನು ಕಾಣುತ್ತೇವೆ. ಅಂದರೆ ಮೇಲ್ವರ್ಗದವರು ಹೆಣ್ಣನ್ನು ಅತ್ಯಂತ ಕೆಳಸ್ತರದಲ್ಲಿ ತಮ್ಮ ಉಪಭೋಗಕ್ಕಾಗಿ ಬಳಸಿಕೊಂಡಿರುವುದನ್ನು ಇಲ್ಲಿ ಈ ಮೂಲಕ ಕಥೆಗಾರರು ತಿಳಿಸಿದ್ದಾರೆ. ವಿಜಯನಗರದ ಅರಸರ ಅಧಿಕಾರ ಪತನಗೊಂಡ ನಂತರ ಸುತ್ತಮುತ್ತಲ ಪ್ರದೇಶದಲ್ಲಿ ದೇವದಾಸಿ ಪದ್ಧತಿಗೆ ಅಲ್ಲಿನ ಅತಂತ್ರ ಮಹಿಳೆಯರು ಒಳಗಾದರು. ಇಂದಿಗೂ ಈ ಪಾಪಕೂಪದಿಂದ ಅಲ್ಲಿನ ಅನೇಕ ಮಹಿಳೆಯರನ್ನು ಮೇಲೆತ್ತಲು ಸಾಧ್ಯವಾಗುತ್ತಿಲ್ಲ. ಹೀಗೆ ಆ ಪ್ರದೇಶದಲ್ಲಿ ಸಾಮಾನ್ಯವಾಗಿರುವ ಈ ಸ್ಥಿತಿಯನ್ನು ಕಥೆಗಾರರು ಬಳಸಿಕೊಂಡಿದ್ದಾರೆ. ಪ್ರಬಲ ಕೋಮಿನವರು ತಳಸಮುದಾಯದ ಕತ್ತಲನಂತಹವರ ಹೆಂಡತಿಯನ್ನು ತಮ್ಮ ಹಕ್ಕು ಎಂಬಂತೆ ಬಳಸಿಕೊಳ್ಳುವ ಕೆಟ್ಟತನದ ಚಿತ್ರಣ ಕೊಡುವಲ್ಲಿ ಆ ಭಾಗದಲ್ಲಿ ಇರುವ ಈ ಶೋಷಣೆಯ ಮುಖಗಳೆ ಇದಕ್ಕೆ ಕಾರಣಗಳಾಗಿವೆ. ಇನ್ನೂ "ಸಿದ್ದನು ಗುರಿ ಇಟ್ಟಿದ್ದು" ಉಳಿಗುಪ್ಪೆಜುಳ್ಳಿ ತನ್ನ ಮಗುವನ್ನು ತನ್ನ ಮಠದ ಸ್ವಾಮಿಗಳು ಹೊಡೆಯುತ್ತಿರುವಾಗ ಆ ಸ್ವಾಮಿಗಳ ದರ್ಶನವಾಯಿತೆಂದು ಹೇಳುವ ಪ್ರಸಂಗವನ್ನು ಕಾಣುತ್ತೇವೆ. ಅವಳ ಮುಗ್ಧತೆ, ಕೃತಾರ್ಥಭಾವ ಕಂಡು ಮರುಕವಾಗುತ್ತದೆ. ಆ ಪ್ರದೇಶದ ಅಮಾಯಕ ಜೀವಿಗಳ ನಡೆ ನುಡಿಗೆ ಇದೊಂದು ಉದಾಹರಣೆ. ಇನ್ನೂ "ದೇವರಹೆಣ" ಕತೆಯಲ್ಲಿ

ಕೊಣ್ಣಿಯ ಮಕ್ಕಳಾದ ತಿಮ್ಮಿ, ಕುಲ್ಡಿ ಇವರಿಬ್ಬರು ಹಸಿವನ್ನು ನೀಗಿಸಲು ಅಡುಗೆ ಆಟ ಆಡುವ ಪ್ರಸಂಗವನ್ನು ಕಾಣುತ್ತೇವೆ. "ಡೋಮ" ಡೋಮನ ಮಗಳು ಕುಂಟಿ ಅವಳನ್ನು ಭುಜದ ಮೇಲೆ ಎತ್ತಿಕೊಂಡು ಹೋಗುವ ಕುಂಟಿಯ ಪಾತ್ರ ಬರುವುದನ್ನು ಕಾಣುತ್ತೇವೆ. ಈ ಕತೆಯಲ್ಲೆಲ್ಲಾ ಕೆಳಜಾತಿ ಸ್ತ್ರೀಯರು ಶೋಷಣೆಗೆ ಒಳಗಾಗುವುದನ್ನು ಕಾಣುತ್ತೇವೆ.

ವ್ಯಕ್ತಿನಾಮಗಳು:

ವ್ಯಕ್ತಿನಾಮಗಳು ಗ್ರಾಮನಾಮಗಳು ಒಂದು ಪ್ರದೇಶದ ಅನನ್ಯತೆಯನ್ನು ಹೇಳುತ್ತವೆ. ಕುಂ.ವೀ. ಅವರ ಕಥೆಗಳಲ್ಲಿ ಬರುವ ಕತ್ತಲ, ಕಿವುಡ, ಡೋಮ, ಕೊಣ್ಣಿ, ಬಸವ, ಸಿದ್ದ, ದ್ಯಾಮಗ, ಸಂಕಲಿ, ಮಂಜ ಮುಂತಾದ ಹೆಸರುಗಳು ಕೆಳವರ್ಗದ ಜನರುಗಳ ಹೆಸರುಗಳಾಗಿವೆ. ಕುಂ. ವೀರಭದ್ರಪ್ಪನವರ ಕತೆಗಳಲ್ಲಿ ಪ್ರಾದೇಶಿಕ ಶಬ್ದಗಳು ಬಹಳವಾಗಿ ಬಳಕೆಯಾಗಿವೆ. ಬಳ್ಳಾರಿ, ಕೊಟ್ಟೂರು ಪ್ರದೇಶದ ಜನರು ನಿತ್ಯಮಾತನಾಡುವ ಪದಗಳನ್ನು ಕಾಣಬಹುದು.

ಇಂಗ್ಲಾಂಡು ಲೆಟರ್ – ಇನ್‌ಲ್ಯಾಂಡ್ ಲೆಟರು

ಗೋಡ	–	ಗೌಡ
ಸಾನಾ	–	ಸ್ನಾನ
ಈರಶೈವ	–	ವೀರಶೈವ
ಲಿಂಗಾತ್ತು	–	ಲಿಂಗಾಯುತರು
ಗೊಂಡಸು	–	ಗಂಡಸು
ಒಗ್ಬಣ್ಣಿ	–	ಒಗ್ಗರಣೆ

ಹೀಗೆ ಜನಸಾಮಾನ್ಯರು ಬಳಸುವ ಪದಗಳನ್ನು ಲೇಖಕರು ನೇರವಾಗಿ ತೆಗೆದುಕೊಂಡಿದ್ದಾರೆ. ಕುಂ. ವೀರವರು ಕಥೆಗಳಲ್ಲಿ ದಟ್ಟವಾದ ಗ್ರಾಮೀಣ ಬದುಕಿನ ವಿವಿಧ ಮುಖಗಳನ್ನು ತಿಳಿಸಿಕೊಡುವುದರ ಜೊತೆಗೆ ಅಲ್ಲಿನ ಪ್ರಾದೇಶಿಕತೆಯ ಸೊಗಡು ಆಡು ಭಾಷೆಯ ವೈವಿಧ್ಯವನ್ನು ನಾವು ಕಾಣಬಹುದು. ಈ ಕಾರಣಕ್ಕಾಗಿ ಅವರ ಕಥೆಗಳು ಓದುಗರನ್ನು ಆಕರ್ಷಿಸುತ್ತೇವೆ. ಹೀಗೆ ಕತೆಗಾರರಾದ ಕು.ವೀ. ತಾನು ಬದುಕಿದ ಪರಿಸರದ ಅನೇಕ ವಿವರಗಳನ್ನು ಕತೆಗಳಲ್ಲಿ ದಟ್ಟವಾಗಿ ಬಳಸಿಕೊಂಡಿದ್ದಾರೆ. ಆದ್ದರಿಂದಲೇ ಈ ಕತೆಗಳು ಮತ್ತು ಇಲ್ಲಿನ ಪಾತ್ರಗಳು ಹೆಚ್ಚು ಸಹಜವಾಗಿವೆ ಮತ್ತು ಜೀವಂತವಾಗಿದೆ. ಹಾಗೆಯೇ ಬದುಕಿನ ವಿವರಗಳು ಹೆಚ್ಚು ವಸ್ತುನಿಷ್ಠವಾಗಿವೆ.

ಕೊನೆ ಟಿಪ್ಪಣಿ

1.	ಡಾ॥ ಸಿದ್ದಲಿಂಗಯ್ಯ	ಜಾತಿಗಳ ಹುಟ್ಟು ಮತ್ತು ಬೆಳವಣಿಗೆ ಅಂಬೇಡ್ಕರ್ ಲೇಖನದ ಅನುವಾದ	ಪುಟ–107
2.	ಕುಂ.ವೀ	ಇದೂ ಬರಿ ಕಥೆಯಲ್ಲೊ ಅಣ್ಣ	ಪುಟ–978
3.	ಕುಂ.ವೀ	ಇದೂ ಬರಿ ಕಥೆಯಲ್ಲೊ ಅಣ್ಣ	ಪುಟ–981
4.	ಕುಂ.ವೀ	ಇದೂ ಬರಿ ಕಥೆಯಲ್ಲೊ ಅಣ್ಣ	ಪುಟ–986

ಸಮಾರೋಪ

ಭಾರತದ ಸಾಮಾಜಿಕ ವ್ಯವಸ್ಥೆಯೆಂದರೆ ವರ್ಣ ವ್ಯವಸ್ಥೆ ಜಾತಿ ವ್ಯವಸ್ಥೆಯಿಂದ ಕೂಡಿದ್ದು, ಇದರ ಪರಿಣಾಮವಾಗಿ ವರ್ಗ ಅಸಮಾನತೆ ಇದರ ಸಾಮಾನ್ಯ ಲಕ್ಷಣವಾಯಿತು. ಇದರ ಜಾತಿ ವ್ಯವಸ್ಥೆಯ ಪರಿಣಾಮವಾಗಿ ತಳ ಸಮುದಾಯಕ್ಕೆ ಆಸ್ತಿಯ ಹಕ್ಕು ಮತ್ತು ಶಿಕ್ಷಣದ ಹಕ್ಕು ಇರಲಿಲ್ಲ. ಅಂದರೆ ರಾಜಕೀಯ ಮತ್ತು ಧಾರ್ಮಿಕ ಹಾಗೂ ಯಾವುದೇ ಸಾಮಾಜಿಕ ಹಕ್ಕು ಬಾಧ್ಯತೆಗಳು ಇರಲಿಲ್ಲ ತಮ್ಮ ದೈಹಿಕ ಶ್ರಮವನ್ನು ಮಾತ್ರ ಬಳಸಿಕೊಂಡು ಉಳ್ಳವರ ಸೇವೆಗಾಗಿ ತಮ್ಮ ಇಡೀ ಬದುಕನ್ನು ವಿನಿಯೋಗಿಸಿದ ಅಮಾಯಕ ಸಮುದಾಯವಾಗಿ ಬಳಕೆಗೊಳ್ಳಬೇಕಾಯಿತು. ದಲಿತರು ಶೂದ್ರಾತಿ ಶೂದ್ರರು ಇತ್ಯಾದಿ ಹಣೆಪಟ್ಟಿಗಳನ್ನು ಹೊತ್ತ ಈ ಸಮುದಾಯಗಳು ಸಮಾಜದ ಕೆಳಸ್ತರದಲ್ಲಿಯೇ ನಿಂತು ಅನೇಕ ಶತಮಾನಗಳಿಂದ ಬದುಕನ್ನು ಸಾಗಿಸುತ್ತ ಬಂದದ್ದು ವಿಷದನೀಯವಾದ ಸಂಗತಿ. ಭವ್ಯ ಭಾರತದ ನಿಜ ನಾಗರಿಕ ಪಡೆಯಬಹುದುದಾದ ಯಾವ ಸೌಲಭ್ಯಗಳೂ ಇವರಿಗೆ ಸಿಗಲಿಲ್ಲ. ಬುದ್ಧ, ಬಸವಣ್ಣ ಇಂತಹ ದಾರ್ಶನಿಕರ ಪ್ರಯತ್ನಗಳು ಅಷ್ಟಾಗಿ ಪರಿವರ್ತನೆಗೆ ಅವಕಾಶವನ್ನು ಒದಗಿಸಿಕೊಡಲು ಈ ದೇಶದ ಬಲಾಢ್ಯರು ಬಿಡಲಿಲ್ಲ. ಜ್ಯೋತಿಬಾ ಪುಲೆ, ಅಂಬೇಡ್ಕರ್, ಪೆರಿಯಾರ್, ನಾರಾಯಣ ಗುರು, ಲೋಹಿಯಾ, ಮಾರ್ಕ್ಸ್ ಮುಂತಾದ ಚಿಂತಕರ ವಿಚಾರಗಳು ನಿಧಾನವಾಗಿ ಜನರಲ್ಲಿ ಹೊಸ ಆಲೋಚನೆಗಳನ್ನು ಬಿತ್ತಿದ್ದವು. ಇದಕ್ಕೆ ಪೂರಕವಾಗಿ ನಿಂತದ್ದು ಬ್ರಿಟಿಷ್ ಸರ್ಕಾರ ಜಾರಿಗೊಳಿಸಿದ ಕಡ್ಡಾಯ ಶಿಕ್ಷಣ. ಸ್ವಾತಂತ್ರ್ಯ ಬಂದ ನಂತರ ಸಂವಿಧಾನತ್ಮಕವಾಗಿ ಇದುವರೆಗೂ ಕೇವಲ ಕರ್ತವ್ಯಗಳನ್ನು ಮಾತ್ರ ನಿರ್ವಹಿಸುತ್ತಿದ್ದ ತಳ ಸಮುದಾಯಕ್ಕೆ ಹಕ್ಕುಗಳು ದೊರೆತವು. ಸರ್ಕಾರದ ಯೋಜನೆಗಳು ನಿಧಾನವಾಗಿಯಾದರೂ ಇಂದು ಈ ದಲಿತರನ್ನು ತಲುಪುವ ದಾರಿಯಲ್ಲಿದೆ. ಈ ಹಿನ್ನೆಲೆಯಿಂದ ನಾವು ಕುಂ.ವೀರಭದ್ರಪ್ಪನವರ ಕತೆಗಳಲ್ಲಿ ಬರುವ ಅಸಮಾನತೆಯ ದಳ್ಳುರಿಯಲ್ಲಿ ಸಿಕ್ಕು ಬೆಂದು ಹೋಗುತ್ತಿರುವ ದಲಿತ ಪಾತ್ರಗಳನ್ನು ಗಮನಿಸಬೇಕಾಗುತ್ತದೆ. ಸ್ವತಃ ತಮಗೆ ಆಸ್ತಿ ಮತ್ತು ಶಿಕ್ಷಣ ಇಲ್ಲದ ದಲಿತರು ಮತ್ತೊಬ್ಬರ ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುವಂತಹುದೇ ಹೆಚ್ಚು. ಪರಿಸ್ಥಿತಿ ಹೀಗಿರುವಾಗ ಬಳ್ಳಾರಿ ಮತ್ತು ಆಂದ್ರಕ್ಕೆ ಸೇರಿದ ಗಡಿನಾಡಿನಲ್ಲಿ ಬರಗಾಲವೆ ಹೆಚ್ಚು ಇಂತಹ ಸನ್ನಿವೇಶದಲ್ಲಿ ಮಾಡಲು ಕೆಲಸವಿಲ್ಲದೆ ದುಡಿಸಿಕೊಂಡವರು ಮಾನವೀಯತೆಯಿಂದ ನೋಡಿಕೊಳ್ಳಲಾರದೆ ಇದ್ದಾಗ ಇವರು ಪಡಬೇಕಾದ ಪಾಡು ಅಷ್ಟಿಷ್ಟಲ್ಲ. ಇಂತಹ ಕೆಲವು ಚಿತ್ರಣಗಳನ್ನು ನಾನು ಅಧ್ಯಯನಕ್ಕೆ ಆರಿಸಿಕೊಂಡಿರುವ ಕಥೆಗಳಲ್ಲಿ ಗುರುತಿಸಿದ್ದೇನೆ. ಕತ್ತಲ ತ್ರಿಶೂಲ ಹಿಡಿದ ಕಥೆ, ದೇವರ ಹೆಣ, ಕಿವುಡ ನಾಯಿಯಾದ ಪ್ರಸಂಗ, ಸಿದ್ದನು ಗುರಿ ಇಟ್ಟದ್ದು ಇತ್ಯಾದಿ ಈ ಕತೆಯಲ್ಲಿ ಹಸಿವಿನ ಸಂಕಟ ಅಂತಿಮವಾಗಿ ಮನುಷ್ಯನನ್ನು ಎಲ್ಲಿಗೆ ತಂದು ನಿಲ್ಲಿಸುತ್ತದೆ. ಎಂಬುದರ ಸ್ಪಷ್ಟ ಚಿತ್ರಣವನ್ನು ಕಾಣಬಹುದು. ಅಲಕ್ಷಿತರು ಅಂತಿಮವಾಗಿ ಆಸ್ಫೋಟಿಸಬೇಕಾಗುತ್ತದೆ. ಎನ್ನುವ ಸತ್ಯವನ್ನು ಈ ಕತೆಗಳು ಮನಗಾಣಿಸುತ್ತವೆ. ಈ ಎಲ್ಲಾ ಸಂಪ್ರದಾಯದ ನಿಯಮಗಳ ವಿರುದ್ಧ ಇಲ್ಲಿ ಬಂಡೇಳ ಬೇಕಾಗುತ್ತದೆ ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಿದ್ದೇನೆ. ಶಿಕ್ಷಣ ಮತ್ತು ಹೊರ ಜಗತ್ತಿನ ಪ್ರೇರಣೆಗಳು ಶೋಷಣೆಯ ವಿರುದ್ಧ ವ್ಯಕ್ತಿ

ಸಿಡಿದು ನಿಲ್ಲುವಂತೆ ಅಗುವುದು ಒಂದು ಸ್ಥಿತಿಯಾದರೆ ಇದ್ಯಾವ ಕಾರಣವೂ ಇಲ್ಲದೆ ಕೇವಲ ಹಸಿವೇ ಕಾರಣವಾಗಿ ತನ್ನೊಳಗಿನ ಈ ಭಯಾನಕ ಹಸಿವೇ ಬಂಡಾಯಕ್ಕೆ ಕಾರಣವಾಗುವುದನ್ನು ಈ ಕತೆಗಳಲ್ಲಿ ಗ್ರಹಿಸಿ ವಿವರಿಸಿದ್ದೇನೆ. ಹುಗ್ಗಿ ಕತೆಯಲ್ಲಿ ಕುಟುಂಬದ ನಿರ್ವಹಣೆಯ ಅಗತ್ಯಕ್ಕಾಗಿ ಮಾಡಿದ ಸಾಲ ತೀರಿಸಲಾಗದ ಕೊನೆಗೆ ಮಗನನ್ನು ಜೀತಕ್ಕೆ ತಳ್ಳಬೇಕಾದ ಅನಿವಾರ್ಯವಿದೆ. ಜೀತಕ್ಕಿರುವ ತಂದೆ ತಾಯಿಗಳಿಗೆ ಆಗುವ ಸಂಕಟದ ಪರಮಾವಧಿ ಇಲ್ಲಿದೆ. ಗೌಡರ ಮನೆಯಿಂದ ಮಗ ಓಡಿ ಮರಳಿ ಮನೆಗೆ ಬಂದುಬಿಟ್ಟಾನೆಂಬ ಭಯಕ್ಕೆ ಅವರು ಊರನ್ನೆ ಬಿಟ್ಟು ಹೋಗುವ ಅನಿವಾರ್ಯದ ತಿರ್ಮಾನಕ್ಕೆ ಬರುತ್ತಾರೆ. ಇಲ್ಲಿ ಅನುಭವಿಸುವ ಸಂಕಟ ಅಸಾಧರಣವಾದದ್ದು. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಹೀಗೆ ನರಳಿರುವ ಸಂತ್ರಸ್ತರಿರೊ ಸಾವಿರಾರು ಅಲ್ಲ. ಲಕ್ಷಾಂತರ ಮಂದಿ. ಇದರ ಪ್ರತೀಕ ಈ ಕತೆಯ ಹಿನ್ನೆಲೆಯಲ್ಲಿ ಕಥೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ. ತನ್ನ ತಂದೆ ತಾಯಿ ಜೀತಕ್ಕಿಟ್ಟಿದ್ದಾರೆ ಎಂದು ತಿಳಿದಾಗ ಅಲ್ಲಿಂದ ಹೆದರಿ ಓಡಿ ಬರುವ ಬಸವನ ಓಟದಲ್ಲೆ ಜೀತ ಎಷ್ಟು ಭಯಾನಕವಾದುದ್ದು ಎಂದು ಸ್ಪಷ್ಟವಾಗುತ್ತದೆ. ಈ ನೆಲೆಯಿಂದ ಇದನ್ನು ಗ್ರಹಿಸುವ ಪ್ರಯತ್ನ ಮತ್ತು ಜೀತ ವಿಮುಕ್ತಿಯ ಬಗ್ಗೆ ಸರ್ಕಾರ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ವಿವರ ನೀಡಿದ್ದೆನೆ.

ಕಳೆದ ಕೆಲವು ದಶಕಗಳ ಹಿಂದೆ ದಲಿತರು ಮೇಲ್ಜಾತಿಯವರ ಜೀತದಾಳುಗಳಾಗುತ್ತಿದ್ದದು ಸಾಮಾನ್ಯವಾಗಿತ್ತು. ಇದರಿಂದ ಎಲ್ಲಾ ತರಹದ ಸೇವೆಯನ್ನು ಪಡೆಯುತ್ತಿದ್ದರು. ಜೀತ ಪದ್ಧತಿಯಲ್ಲಿ ಶೆ. 70-75 ರಷ್ಟು ದಲಿತರಿದ್ದರೂ ಇವರಲ್ಲಿ ಚಿಕ್ಕ ಚಿಕ್ಕ ಮಕ್ಕಳು ವೃದ್ದರೂ ಮಹಿಳೆಯರು ಇದ್ದಾರೆ. ಒಮ್ಮೆ ಒಬ್ಬ ಜೀತದಾಳಾದರೆ ಜೀವನ ಪರ್ಯಾಂತ ಹೊರಬರಲು ಆಗುತ್ತಿರಲಿಲ್ಲ. ತಂದೆ ಸಾಲವನ್ನು ಪಡೆದು ತನ್ನ ಮಕ್ಕಳಲ್ಲಿ ಒಬ್ಬರನ್ನು ಜೀತಕ್ಕೆ ಇಡುವುದು ಸಾಮಾನ್ಯವಾಗಿತ್ತು. ಜೀತದಾಳು ಸಾಲವನ್ನು ತಿರಿಸಲಾಗದೆ ಬಡ್ಡಿ ಚಕ್ರಬಡ್ಡಿ ಬೆಳೆದು ಜೀತದಾಳಗಿ ಉಳಿಯಬೇಕಿತ್ತು. ಅಲ್ಲದೆ ಇವರನ್ನು ಹೊಡೆಯುವುದು ಬೈಯುವುದು ಸಾಮಾನ್ಯವಾಗಿತ್ತು. ಜೀತದಾಳುಗಳಿಂದ ಖಾಲಿ ಬಿಳಿ ಕಾಗದದ ಮೇಲೆ ಸಹಿ ಮಾಡಿಸಿಕೊಂಡು ಅವರ ಆಸ್ತಿಯನ್ನು ನುಂಗಿ ಹಾಕುವುದು ಸಾಮಾನ್ಯವಾಗಿ ಕಾಣುತ್ತಿತ್ತು.

ದಲಿತರ ರಕ್ಷಣೆಗೊಸ್ಕರ ಶ್ರೀಮತಿ ಇಂದಿರಾ ಗಾಂಧೀಜಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಮತ್ತು ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಒಂದು ವಿಶೇಷ ಕಾನೂನು ಮಾಡಿ ಜೀತ ಪದ್ದತಿಯಿಂದ ಮುಕ್ತಿಗೆ ಪ್ರಯತ್ನಿಸಿದರು. ಜೀತ ಪದ್ದತಿ ನಿರ್ಮೂಲನೆಗೆ ಸರ್ಕಾರ ಬ್ಯಾಂಕ್ ಮೂಲಕ ಸಾಲಕೊಡುವ ವ್ಯವಸ್ಥೆ ಮಾಡಿದ್ದರೂ ಕಾರ್ಯ ರೂಪಕ್ಕೆ ಬರುವುದು ಕಷ್ಟವಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ದಲಿತರಿಗೆ ಯಾವುದೆ ಕಾನೂನಿನ ರಕ್ಷಣೆ ಇರಲಿಲ್ಲ. ಸವರ್ಣಿಯರು ದಲಿತರನ್ನು ಮನೆ ನಾಯಿಗಳಿಗಿಂತಲೂ ಹೀನಾಯವಾಗಿ ಕಾಣುತ್ತಿದ್ದರು. ದಲಿತರಿಗೆ ಸ್ವಾಭಿಮಾನ ಮಾನ ಮರ್ಯಾದೆ ಎಂಬ ಪದದ ಅರ್ಥವೇಗೊತ್ತಿರಲಿಲ್ಲ. ಅವರು ಹುಟ್ಟಿರುವುದೆ ಕೇವಲ ಸವರ್ಣಿಯರು ಗುಲಾಮರಾಗಿರಲು, ಬಾಹ್ಯ ಪ್ರಪಂಚದ ಪರಿಚಯವೆ ಇಲ್ಲದಷ್ಟು ದಾರುಣ್ಯ ಪರಿಸ್ಥಿತಿ ಇವರದಾಗಿತ್ತು.

ಭಾರತೀಯ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವೆಂದು ಹೇಳಬಹುದಾದ ಭಕ್ತಿಪಂಥದ ಪರಂಪರೆ ಬೆಳವಣಿಗೆಯ ನಂತರ ದಲಿತರಲ್ಲೂ ಸಾಮಾಜಿಕ ಘನತೆ ಮತ್ತು ಹಕ್ಕುಗಳಾಗಿ ಹೋರಾಡುವ ಛಲ ಮೂಡಿತ್ತು. ಭಕ್ತಿಪಂಥ ಮತ್ತು ಬೌದ್ಧ ಧರ್ಮದ ಸಿದ್ಧಾಂತಗಳಿಂದ ಪ್ರೇರೆಪಿತರಾದ ಅನೇಕ ರಾಜರುಗಳು ದಲಿತ ಸಮುದಾಯಗಳ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಗೊಂಡಿರುವುದನ್ನು ಇಲ್ಲಿ ಅಭ್ಯಸಿಸಿ ತಿಳಿಯಲು ಪ್ರಯತ್ನಿಸಿದ್ದೇನೆ ಒಡೆಯರ್ ತಿರುವಾಂಕೂರಿನ ರಾಜವಂಶರು ಬರೋಡದ ಗಾಯಕವಾಡ ಹೀಗೆ ಹಲವಾರು ರಾಜರುಗಳು ದಲಿತರ ಏಳಿಗೆಗಾಗಿ ಶ್ರಮಿಸಿದ ನಿದರ್ಶನಗಳಾಗಿವೆ.

ದಲಿತರ ಶ್ರಮವೆಲ್ಲವೂ ತಮ್ಮ ಅನುಕೂಲಕ್ಕೆ ಒದಗಿಬರಬೇಕು ಹಾಗೆಯೇ ಒಳಿತಾದ್ದುದೆಲ್ಲವೂ ತಮ್ಮ ಪಾಲನದ್ದೆ ಆಗಿರಬೇಕು ಎಂಬ ನಿಸ್ವಾದ ಉಳ್ಳವರದ್ದು. ಡೋಮ ಬೆಳೆಸಿದ ಗಿಡವನ್ನು ಕಂಡು ಸಹಿಸದ ಗೌಡ ಅದನ್ನು ಕಡಿಯುವ ಹುನ್ನರ ಮಾಡುವುದು ಅವರ ಕ್ರೌರ್ಯದ ಒಂದು ಮುಖ ಇದರ ಪ್ರತೀಕಾರವಾಗಿ ಡೋಮ ತಾನೂ ಹೋಗಿ ಗೌಡರ ಹೊಲದಲ್ಲಿನ ಗಿಡಗಳನ್ನು ಕಡಿದು ಪ್ರತಿಭಟಿಸುತ್ತಾರೆ. ಹೀಗೆ ಬಂಡಾಯದ ಒಂದು ತೀವ್ರತೆಯನ್ನು ಈ ಕಥೆಯಲ್ಲಿ ಗುರುತಿಸಬಹುದು. ಹಾಗೆಯೇ ಬದಲಾಗುತ್ತಿರುವ ದಲಿತರ ಬದುಕಿನ ಚಿತ್ರಣವನ್ನು ಈ ಮೂಲಕ ವಿವರಿಸಲಾಗಿದೆ. ಕಲಿತ ಮಕ್ಕಳು ಮುಂದೆ ಪ್ರತಿಭಟಿಸುವ ಧೈರ್ಯ ಮಾಡಬಹುದೆಂಬ ಅಂದಾಜಿನಿಂದ ಅವರನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಯುವಂತೆ ವಶೀಕರಣ ಮಾಡಿಕೊಳ್ಳಬಲ್ಲ. ಗೌಡ ನಂತರ ಚಿತ್ರಣವು ಇಲ್ಲಿ ಗುರುತಿಸಿದ್ದೇನೆ. ಹಾಗೆಯೇ ದೇವನೂರರ ಅಮಾಸ ಕತೆಯಲ್ಲಿ ಬರುವ ಎಲಾ ಇವನ ಆಗ್ಲೆ ಅಷ್ಟು ಬೆಳೆದು ಬಿಟ್ಟವನ ಎಂಬ ಗೌಡನ ಮಾತು ಅವನನ್ನು ನಿರ್ನಾಮ ಮಾಡಬೇಕೆಂಬ ಆಲೋಚನೆಯೊಂದಿಗೆ ಇದನ್ನು ಹೋಲಿಸುವ ಪ್ರಯತ್ನವನ್ನು ಮಾಡಿರುತ್ತೇನೆ.

ಪೊಲೀಸ್ ವ್ಯವಸ್ಥೆಯನ್ನು ಎದುರಿಸಿ ಓಡಿಸುವ ಧೈರ್ಯ 'ದೇವರ ಹೆಣ' ಕತೆಯಲ್ಲಿ ಬರುವ ಠಣ್ಣಿಯದು. ಮನೆಗೆ ದುಡಿದ ಆಳುಗಳಿಗೆ ನಿಯತ್ತಿನಿಂದ ಹೊಟ್ಟೆ ತುಂಬ ಅನ್ನ ಇಡು ಎಂಬ ಸಂಸ್ಕಾರವನ್ನು ಕಲಿಸದ ಎಸ್ಪಿ ಠೊಣ್ಣಿಗೆ ಭಾರತದ ಸಂಪ್ರದಾಯ ಧರ್ಮ ನೀತಿ ಸಂಸ್ಕಾರಗಳನ್ನು ಅಪ ಮೌಲ್ಯಗೊಳಿಸಬೇಡ ಎಂದು ಉಪದೇಶ ಮಾಡುವುದು ಬಹುದೊಡ್ಡ ವ್ಯಂಗ್ಯ. ಪ್ರತಿ ದಿನ ನಮ್ಮ ದೇಶದಲ್ಲಿ ನಡೆಯುತ್ತಿರುವ ಇಂತಹ ವೈರುಧ್ಯಗಳಿಗೆ ಪ್ರತೀಕವಾಗಿ ಈ ಘಟನೆ ನಿಲ್ಲುತ್ತದೆ. ಸತ್ತಿರುವುದನ್ನು ತಿನ್ನಲು ಬಿಡದ ದುಷ್ಟ ಸಮಾಜ ನಮ್ಮದು ಎಂದು ಕುಂ.ವೀ ಇಲ್ಲಿ ಹೇಳುವ ಸತ್ಯವನ್ನು ವಿಶ್ಲೇಷಿಸಿದ್ದೇನೆ ಒಟ್ಟಾರೆ ಎಷ್ಟು ಅಸಹಾಯಕನಾದರೂ ಮನುಷ್ಯನ ಸಹನೆಗೂ ಒಂದು ಮಿತಿ ಇದೆ. ಅಂತಿಮವಾಗಿ ಅಸಹಾಯಕತೆಯೇ ಆಕ್ರೋಶಕ್ಕೆ ಎಡೆ ಮಾಡಿಕೊಡುತ್ತದೆ. ಆಸ್ಫೋಟಗೊಳ್ಳುವ ಸಂದರ್ಭಕ್ಕೆ ವ್ಯಕ್ತಿಯನ್ನು ಸಿದ್ಧ ಮಾಡುತ್ತದೆ ಎಂಬ ಸತ್ಯ ಕುಂ.ವೀ ಅವರ ನಾನು ಆರಿಸಿ ಕೊಳ್ಳಲಿರುವ ಈ ಎಲ್ಲಾ ಕತೆಗಳಲ್ಲಿ ಬಹುಮಟ್ಟಿಗೆ ಬಳಕೆಯಾಗಿದ್ದು ಇದನ್ನು ಇಲ್ಲಿ ಪರಿಶೀಲಿಸಲಾಗಿದೆ.

ಇಲ್ಲಿ ಕ್ರೌರ್ಯವೇ ಉತ್ತರ ಕೊಡಬೇಕಾಗುತ್ತದೆ. ಶತಮಾನಗಳ ನಡಿಗೆಯಲ್ಲಿ ಸ್ವತಃ ತಾವೆ ಪ್ರಜ್ಞಾವಂತರಾಗುವ ಮತ್ತೊಬ್ಬರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ನೈತಿಕತೆ ಉಳ್ಳವರಿಗೆ ಬರಲು ಸಾಧ್ಯವೆ ಇಲ್ಲವೇನು? ಎಂಬ ತೀರ್ಮಾನಕ್ಕೆ ಕುಂ.ವೀ ಅವರ ಕತೆಗಳು ಉದಾಹರಣೆಯಾಗಿ ನಿಲ್ಲುತ್ತದೆ. ಕುಂ.ವೀ ಅವರ ಕತೆಗಳಲ್ಲಿ ಪ್ರಾದೇಶಿಕ ಅಂಶಗಳು ಹೇಗೆ ಬಳಕೆಗೊಳ್ಳುತ್ತೇವೆ ಎಂಬುದನ್ನು ಕೆಲವು ಕೃತಿಗಳ ಉದಾಹರಣೆ ದೈವುಳ್ಳವರಿಗೆ ದಯವೇ ಇಲ್ಲ ಎಂಬ ಸಿದ್ಧಲಿಂಗಯ್ಯವನರ ಅಲ್ಲೇಕುಂತವ್ರೆ ಕವಿತೆಯಲ್ಲಿನ ಸಾಲು ಇಲ್ಲ ನೆನಪಾಗುತ್ತದೆ ಮೂಲಕ ಇಲ್ಲಿ ಹೇಳಬಹುದು. ಭೌಗೋಳಿಕ ಲಕ್ಷಣಗಳು ಭಾಷೆ, ಸಂಸ್ಕೃತಿ, ಬದುಕಿನ ವಿಧಾನ ಜಮಿನ್ದಾರಿ ಪದ್ದತಿ ಅಧಿಕಾರ ಶಾಹಿ ಇತ್ಯಾದಿ ಪ್ರಾದೇಶಿಕ ಅಂಶಗಳಾಗಿವೆ. ಕುಂ.ವೀ ಬಹಳಷ್ಟು ಕಥೆಗಳಲ್ಲಿ ಕೊಟ್ಟರು ಪ್ರಮುಖ ಕೇಂದ್ರ ಸ್ಥಾನವಾಗಿ ಚಿತ್ರಿಸಿಕೊಂಡಿದೆ ಇದಕ್ಕೆ ಮುಖ್ಯವಾದ ಕಾರಣಗಳು ಎರಡು ಒಂದು ಕಥೆಗಾರರು ಮೂಲತಃ ಇದೆ ಗ್ರಾಮದವರಾದ್ದರಿಂದ ಸಹಜವಾಗಿ ಕೊಟ್ರೋರು ಮೇಲಿಂದ ಮೇಲೆ ಪ್ರಸ್ತಾಪವಾಗುತ್ತಿರುತ್ತವೆ. ಸಮಾಜದ ನಿರ್ಲಕ್ಷಿತ ಜನರ ಜಿವನವನ್ನು ಅವರಷ್ಟು ಸಮೀಪದಿಂದ ಹಾಗೂ ಆಳವಾಗಿ ನೋಡಿದವರು ಸಮಕಾಲೀನರಲ್ಲಿ ತೀರ ವಿರಳ ದಟ್ಟವಾದ ಅನುಭವವನ್ನು ಪಾತ್ರಗಳ ಮೂಲಕ ಜಿವಂತಗೊಳಿಸುವ ಕಲೆ ಇವುಗಳಿಂದಾಗಿ ಕುಂ.ವೀ ಮಹತ್ವದ ಕತೆಗಾರರಲ್ಲೊಬ್ಬರಾಗಿದ್ದಾರೆ.

ಕುಂ.ವೀ ಅವರು ಆಂಧ್ರದ ಗಡಿಭಾಗದಲ್ಲಿ ಶಿಕ್ಷಣ ವೃತ್ತಿಯನ್ನು ಕೈಗೊಂಡವರು ಹೀಗಾಗಿ ಅಲ್ಲಿನ ಹಲವಾರು ಹಳ್ಳಿಗಳನ್ನು ನೋಡಿದವರು ಇದರಿಂದಾಗಿ ಓದುಗರಿಗೆ ಆಯಾ ಗ್ರಾಮದ ಪ್ರಾದೇಶಿಕ ಹಿನ್ನೆಲೆ ಕತೆಗಳ ಮೂಲಕ ಸ್ಪಷ್ಟವಾಗಿ ತಿಳಿಯುತ್ತದೆ. ಒಂದು ಪ್ರದೇಶದಲ್ಲಿರುವಂಥ ಶೂದ್ರರ ಕೆಳವರ್ಗದವರ ವಿವಿಧ ಮುಖಗಳನ್ನು ಕುಂ ವೀರಭದ್ರಪ್ಪನವರು ನಮಗೆ ಕಟ್ಟಿಕೊಡುತ್ತಾರೆ. ಕಥೆಗಳಲ್ಲಿ ಬರುವ ಬಯಲು ನಾಟಕ ದ ಸಂಭಾಷಣೆಯ ಅನುಕರಣೆಯ ಮಾತುಗಳು ಆ ಪ್ರದೇಶದ ಆ ವಿಶಿಷ್ಟ ಕಲೆಯ ದರ್ಶನ ಮಾಡಿಸುತ್ತವೆ. ನಿರಂತರ ಬಡತನ ಬರದ ತೀವ್ರತೆ ಅಲ್ಲಿನ ಬಿಸಿಲು ಲಿಂಗಾಯತ ಧರ್ಮದ ದಿಕ್ಕು ತಪ್ಪಿದ ಸ್ಥಿತಿ ಕತೆಗಳಲ್ಲಿ ಪ್ರವೇಶ ಪಡೆದಿದ್ದು ಇವುಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿರುತ್ತೇನೆ.

ಮಹಿಳೆಯರ ಶೋಷಣೆ ವೈಯಕ್ತಿಕ ಕಾಮನೆಗಳಿಗೆ ಅವರನ್ನು ಬಳಸಿಕೊಳ್ಳುವುದು ಅದರಿಂದ ಪುರುಷರು ಅನುಭವಿಸಿದ ವೇದನೆ ಅಸಮಾನಗಳ ವಿವರ ಕೊಟ್ಟಿದ್ದೇನೆ. ದೇವದಾಸಿ ಈ ಪ್ರಾಂತ್ಯದಲ್ಲಿ ಹೆಚ್ಚಾಗಿದ್ದು ಇಲ್ಲಿರುವ ಯಾತನೆಗಳನ್ನು ಕತೆಗಾರರು ಹೇಳಿದ್ದು ಇದನ್ನು ಕುರಿತ ವಿವರ ನೀಡಿದ್ದೇನೆ. ಈ ಮೂಲದಿಂದ ಬಂದ ಮಕ್ಕಳು ಅನುಭವಿಸಬೇಕಾದ ಅವಮಾನದ ತೀವ್ರತೆಯನ್ನು ವಿವರಿಸಿದ್ದೇನೆ.

ಕ್ರಾಂತಿ ಕತೆಯಲ್ಲಿ ಮಂಜ ಶಿಕ್ಷಣವನ್ನು ಪಡೆದಿರುತ್ತಾನೆ. ಅವನ ತಾಯಿಯನ್ನು ದೇವದಾಸಿಯನ್ನಾಗಿಸಿದ ಸಮಾಜ ನಮ್ಮದು. ದೇವಸ್ಥಾನದಲ್ಲಿ ದೇವರ ದರ್ಶನಕ್ಕೂ ಮೇಲ್‌ವರ್ಗದ ಮಾತ್ರ ದರ್ಶನ ಮಾಡಬೇಕು. ಕೆಳವರ್ಗದವರಿಗೆ ಪ್ರವೇಶ ಇಲ್ಲ. ಮಂಜ ಹತ್ತನೆ ತರಗತಿ ಹೋದದ್ದರಿಂದ ಅವನು ಹೋರಾಟ ಮಾಡುತ್ತಾರೆ. ಆದರೆ ಇಲ್ಲಿ ತಿಳಿಯುವುದೇನೆಂದರೆ ಶಿಕ್ಷಣದಿಂದ ಕೆಲವರ್ಗದವರ ಪರಿಸ್ಥಿತಿ

ಸ್ವಲ್ಪ ಮಟ್ಟಿಗೆ ನಿವಾರಿಸಬಹುದು. ಆಧುನಿಕ ಶಿಕ್ಷಣದಿಂದ ಪಡೆದ ಅನುಭವ ಹೇಗೆ ಹೊಸ ಆಲೋಚನೆಗಳನ್ನು ಬಿತ್ತುತ್ತದೆ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ.

ಅಂಬೇಡ್ಕರ್ ಹೇಳುವ ಶಿಕ್ಷಣ ಸಂಘಟನೆ ಹೋರಾಟ ಈ ಮೂಲಕ ದಲಿತರ ಉದ್ಧಾರ ಸಾಧ್ಯ ಎಂಬ ಮಾತು ಇಲ್ಲಿ ನಿಜವಾಗುವ ನೆಲೆಯನ್ನು ಗುರುತಿಸಬಹುದಾಗಿದೆ.

ಜನ ಸಮುದಾಯದ ಭಾಗವಾಗಿ ಬದುಕುವ ಲೇಖಕರು ಆ ಪರಿಸರದಿಂದ ಕಲಿಯುವ ಮತ್ತು ಬೆಲೆಯುವ ಸಾಧ್ಯತೆ ಬಹಳ ಪಾಂಡಿತ್ಯ ಪ್ರಭೇದಗಳಿಗಿಂತ ಲೇಖಕರನ್ನು ರೂಪಿಸುವುದು ಅವರು ಹಾಯುವ ಅಪರೂಪದ ಅನುಭವದಿಂದ ಎಂದು ಹೇಳಬಹುದು. ಆ ಹಳ್ಳಿಗಳನ್ನು ಕುಂ.ವೀ ವಿಶ್ವವಿದ್ಯಾಲಯಗಳು ಎನ್ನುತ್ತಾರೆ. ಅಲ್ಲಿನ ಜನರನ್ನು ಗುರುಗಳು ಎಂದಿದ್ದಾರೆ. ಇದೊಂದು ಬಗೆಯ ಉದ್ದೇಶ ಪೂರ್ವಕ ಅನುಭವವಾದಿ ಮೀಮಾಂಸೆ. ಬಡತನದ ಬಾಲ್ಯ, ಆಧುನಿಕ ಶಿಕ್ಷಣ, ವಾಸಿಸುವ ಕುಗ್ರಾಮಗಳು, ಸಂಪರ್ಕಕ್ಕೆ ಬಂದ ಚಳವಳಿಗಳು, ಜಗತ್ತಿನ ದೊಡ್ಡ ಲೇಖಕರು ಬೆಳೆದ ಬಂದ ಚಳವಳಿಗಳು, ಜಗತ್ತಿನ ದೊಡ್ಡ ಲೇಖಕರು ಬರೆದ ಸಾಹಿತ್ಯದ ಓದು, ದೇಶ ಎದುರಿಸಿದ ಬಿಕ್ಕಟ್ಟುಗಳು ಇತ್ಯಾದಿಗಳೇ ಕುಂ.ವೀ ಅವರ ಕತೆಗಳಲ್ಲಿ ನಾನು ಏಳು ಕತೆಗಳನ್ನು ಆರಿಸಿಕೊಂಡಿದ್ದೇನೆ. ದೇವರ ಹೆಣ, ಡೋಮ, ಹುಗ್ಗಿ, ಸಿದ್ದನು ಗುರಿ ಇಟ್ಟಿದ್ದು, ಕಿವುಡ ನಾಯಿಯಾದ ಪ್ರಸಂಗ, ಕತ್ತಲ ತ್ರಿಶೂಲ ಹಿಡಿದ ಕತೆ, ಕ್ರಾಂತಿ ಈ ಕತೆಗಳನ್ನು ಮಾತ್ರ ನಾನು ಆರಿಸಿಕೊಂಡು ಬರೆದಿದ್ದೇನೆ. ಈ ಕತೆಯಲ್ಲಿನ ರೊಣ್ಣಿ ಡೋಮ ಬಸವ ಸಿದ್ದ ಕಿವುಡ ಕತ್ತಲ ಕ್ರಾಂತಿಕಾರಿ ಮಂಜು ಇವರೆಲ್ಲರೂ ತಳಸಮುದಾಯದಿಂದ ಬಂದವರು. ಇವು ಉಳ್ಳವರು ಇವರನ್ನು ಕರೆಯುತ್ತಿದ್ದ ಹೆಸರುಗಳೆ ಆಗಿವೆ. ಇಲ್ಲಿ ಇರುವ ಹೆಸರನ್ನು ವಿರೂಪಗೊಳಿಸಿ ಕರೆಯುವ ಉಳ್ಳವರ ಧಿಮಾಕನ್ನು ವಿವರಿಸಿದ್ದೇನೆ.

ದಲಿತ ಸಮುದಾಯ ಭಾರತದಾದ್ಯಂತ ಎಲ್ಲೇ ಇರಲಿ ನೋವು ತಲ್ಲಣಗಳ ಸ್ವರೂಪ ಒಂದೆ ಇವರನ್ನು ಹೀಗೆ ಆತಂಕದಲ್ಲಿ ಅವಮಾನದಲ್ಲಿ ಬದುಕುವಂತೆ ಮಾಡಿದ ಶೋಷಕ ಶಕ್ತಿಗಳ ಕ್ರೌರ್ಯ ಮತ್ತು ಅಮಾನವೀಯತೆಯ ಸ್ವರೂಪವೂ ಒಂದೇ ಬಗೆಯದಾಗಿದೆ. ಅದ್ದರಿಂದಲೇ ದಕ್ಷಿಣ ಕರ್ನಾಟಕದ ಅಂಚಿನಲ್ಲಿ ಇರುವ ದೇವನೂರು ಕತೆಗಳಲ್ಲಿ ಬರುವ ವಿವರಗಳೂ ಮತ್ತು ಆಂದ್ರದ ಗಡಿಭಾಗವಾದ ಬಳ್ಳಾರಿ ಪ್ರಾಂತ್ಯದಲ್ಲಿ ಬರುವ ದಲಿತರ ಬದುಕಿನ ಮತ್ತು ಅವರನ್ನು ಶೋಷಿಸುತ್ತಿರುವ ಜಮೀನ್ದಾರರ ವಿವರಗಳನ್ನೊಳಗೊಂಡ ಕುಂ.ವೀ ಯವರ ಕತೆಗಳಲ್ಲಿ ಬರುವ ವಿವರಗಳಲ್ಲಿ ಸಾಮ್ಯತೆ ಇದೆ. ಬಹುಶಃ ಬೆಸಗರಹಳ್ಳಿ ರಾಮಣ್ಣ ನವರಿಂದ ದೇವನೂರರು ಪ್ರೇರಣೆ ಪಡೆದಂತೆ ದೇವನೂರರ ಕತೆಗಳಿಂದ ಕುಂ.ವೀ ಪ್ರೇರಣೆ ಪಡೆದಿರಬಹುದಾದ ಸಾಧ್ಯತೆಗಳೂ ಇದ್ದು ಸಾಂದರ್ಭಿಕವಾಗಿ ಕತೆಗಳ ವಿಶ್ಲೇಷಣೆಯಲ್ಲಿ ಇದನ್ನು ಬಳಸಿಕೊಂಡಿದ್ದೇನೆ. ಈ ಎಲ್ಲಾ ವಿವರಗಳೊಂದಿಗೆ ಕುಂ.ವೀ ಯವರು ಕರ್ನಾಟಕದ ಒಂದು ನಿರ್ದಿಷ್ಟ ಭಾಗದ ದಲಿತ ಸಮುದಾಯದ ನೋವು ತಲ್ಲಣ ಮತ್ತು ಕ್ರಮೇಣ ಅಲ್ಲಿ ರೂಪುಗೊಳ್ಳುತ್ತಿರುವ ಬಂಡಾಯ ಇವುಗಳ ಚಿತ್ರಣವನ್ನು ಕತೆಗಳಲ್ಲಿ ಕಟ್ಟಿಕೊಟ್ಟಿರುವುದನ್ನು

ವಿಶ್ಲೇಷಿಸುವುದರೊಂದಿಗೆ ಈ ಕುರಿತ ಓದು ಮತ್ತೆ ಮತ್ತೆ ಅಗತ್ಯ ಇದು ನಮ್ಮ ಸಾಮಾಜಿಕ ಜವಾಬ್ದಾರಿ ಎಂಬ ಅಭಿಪ್ರಾಯದೊಂದಿಗೆ ಈ ಪ್ರಬಂಧವನ್ನು ಒಪ್ಪಿಸುತ್ತಿದ್ದೇನೆ.

ಪರಾಮರ್ಶನ ಗ್ರಂಥಗಳು

1. ಆಮೂರ ಜಿ.ಎಸ್ : ಕನ್ನಡ ಕಥನ ಸಾಹಿತ್ಯ ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, 2003
2. ಕೃಷ್ಣಮೂರ್ತಿ ಕೆ : ಭಾರತೀಯ ಸಾಹಿತ್ಯ ವಿಮರ್ಶೆ, ಸಂಪುಟ–2, ರಮ್ಯ ಪ್ರಿಂಟರ್ಸ್, ಬೆಂಗಳೂರು, 1994
3. ಕುಂಬಾರ ವೀರಭದ್ರಪ್ಪ : ಇದು ಬರೀ ಕಥೆಯಲ್ಲೋ ಅಣ್ಣ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2010
4. ಕುಂಬಾರ ವೀರಭದ್ರಪ್ಪ : ಗಾಂಧಿಕ್ಲಾಸು, ಆತ್ಮ ಕಥೆಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2010
5. ಕುಂಬಾರ ವೀರಭದ್ರಪ್ಪ : ಅಪೂರ್ವ ಚಿಂತಾಮಣಿ, ದಿವ್ಯ ಪ್ರಿಂಟರ್ಸ್, ಬೆಂಗಳೂರು, 2002
6. ಗಿರಡ್ಡಿ ಗೋವಿಂದರಾಜು : ಕುಂ.ವೀ ಅವರ ಕಥಾ ಸಾಹಿತ್ಯ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, 1998
7. ಕೋದಂಡ ರಾಮ ಎನ್.ಕೆ : ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ರೂಪ ಪ್ರಕಾಶನ, ಮೈಸೂರು, 2008
8. ನಾರಾಯಣ ಕೆ : ವಿಚಾರ ಸಾಹಿತ್ಯ, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ
9. ದೇವನೂರ ಮಹಾದೇವ : ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ಬೆಂಗಳೂರು, 2013
10. ರಹಮತ್ ತರಿಕೆರೆ : ಕನ್ನಡ ಮೀಮಾಂಸೆ, ಸಂಪುಟ–1,ನಬೆಂಗಳೂರು, 2006
11. ಲೀಲಾವತಿ ಎಂ : ದಲಿತ ಬಂಡಾಯ ಕಥಾ ಸಾಹಿತ್ಯ., ಬೆಂಗಳೂರು, 2010
12. ವೀರಭದ್ರಪ್ಪ : ಧರ್ಮ ಮತ್ತು ವೈಚಾರಿಕತೆ. ನವ ಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, 1998
13. ಸಿದ್ಧಲಿಂಗಯ್ಯ : ಜಾತಿಗಳ ಹುಟ್ಟು ಮತ್ತು ಬೆಳವಣಿಗೆ (ಲೇಖನ), ವಿಚಾರ ಸಾಹಿತ್ಯ–2, ವಿ.ವಿ ಪ್ರಸಾರಾಂಗ , ಬೆಂಗಳೂರು
14. ಹಿರೇಮಠ ಆರ್.ಸಿ : ಪ್ರಾಚೀನ ಕನ್ನಡ ಸಾಹಿತ್ಯ ವಿಮರ್ಶೆಯ ತತ್ವಗಳು, ರೂಪ ಪ್ರಕಾಶನ, ಬೆಂಗಳೂರು, 2006
15. ಹೊನ್ನಯ್ಯ ಸಿ.ಬಿ. : ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ, ಕೆ.ಎಸ್ ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, 2004